TEXT FLY WITHIN
THE BOOK ONLY

UNIVERSAL
LIBRARY
OU_198377
UNIVERSAL
LIBRARY

ಮಕ್ಕಳ ಕಥೆಗಳು.

ಬಾಲಸಾಹಿತ್ಯ ಮಂಡಲ,
ಲಿಮಿಟೆಡ್,
ಕೊಡಿಯಾಲಬೈಲು, ಮಂಗಳೂರು.

# ಯಾದವಕೃಷ್ಣ

BY
**M. N. Kamath,**
TEACHER,
*Canara High School.*

1931

*All Rights Reserved.*

ಬೆಲೆ: ೦—೬—೦.

*Approved by the Text Book Committee, Madras.*
*Recognised by the Director of Public Instruction, Madras.*

PUBLISHED BY

**THE BALA SAHITYA MANDALA, LTD.,**
**Kodialbail, Mangalore.**

*Copyright.*

**FOLK TALES FOR LITTLE FOLKS SERIES**
**ILLUSTRATED** **ONE ANNA EACH**

1. HOW THE MICE DANCED.
2. THE LARK AND ITS EGGS.
3. THE CROW AND THE SPARROW.
4. THE WOOD LOUSE IS DEAD.

Printed at the Codialbail Press, Mangalore, S. K.—1931.

# ಯಾದವಕೃಷ್ಣ

ಎಮ್. ಎನ್. ಕಾಮತ್,
ಕೆನರಾ ಹೈಸ್ಕೂಲ್, ಮಂಗಳೂರು.

ದ್ವಿತೀಯ ಮುದ್ರಣ

**ಮಂಗಳೂರು**
ಬಾಲಸಾಹಿತ್ಯಮಂಡಲ, ಲಿಮಿಟೆಡ್, ಕೊಡಿಯಾಲಬೈಲು,
ಇವರಿಂದ ಪ್ರಕಟಿತವಾಯಿತು.

[*All Rights Reserved by the Publishers*]

**ಬೆಲೆ: 6 ಆಣೆ.**

**1931**

॥ ಶ್ರೀ: ॥

# ಯಾದವಕೃಷ್ಣ

## ೧. ಕಾರಾಗೃಹ.

ಇದು ನಿನ್ನೆಯ ಮೊನ್ನೆಯ ಕಥೆಯಲ್ಲ. ಬಹು ದಿನಗಳ ಹಿಂದಣ ಚರಿತ್ರೆ. ಇದಾಗಿ ಇಂದಿಗೆ ಸುಮಾರು ಐದು ಸಾವಿರ ವರ್ಷಗಳಾಗಿರಬಹುದು. ಆಗ ಈ ದೇಶದಲ್ಲಿ ಯಯಾತಿ ಎಂಬ ಅರಸು ಆಳುತಿದ್ದನು. ಅವನ ರಾಜಧಾನಿಯು ಮಥುರೆ. ಅವನ ರಾಜ್ಯದ ಹೆಸರು ಮಥುರಾ ರಾಜ್ಯ. ಯಯಾತಿಯು ದಾನಕೊಡುವುದರಲ್ಲಿ ಮೊದಲಿಗನು; ಅವನು ಪ್ರಜೆಗಳನ್ನು ಮಕ್ಕಳಂತೆ ಕಾಪಾಡುತಿದ್ದನು. ಅವನ ನಂತರ ಆ ರಾಜ್ಯವನ್ನು ಆಳುವುದಕ್ಕೆ ಯೋಗ್ಯರಾದವರು ಒಬ್ಬರೂ ಇರಲಿಲ್ಲ. ಅರಸು ಮಕ್ಕಳು ಹೆಡ್ಡರೂ, ದಡ್ಡರೂ ಆಗಿದ್ದರು; ಅವರು ಬುದ್ಧಿವಂತರಾಗಿರಲಿಲ್ಲ, ಅವರಿಗೆ ಓದುಬರಹವೂ ಚೆನ್ನಾಗಿ ಬರುತಿದ್ದಿಲ್ಲ. ಅವರು ಎಲ್ಲರೂ ಮನಸ್ಸಿಗೆ ಬಂದಂತೆ ಕಾಲಕಳೆಯುತಿದ್ದರು. ಯಯಾತಿಯು ತನ್ನ ಕಣ್ಣೆದಿರಲ್ಲಿ ಅವರ ಹಾಳುಬುದ್ಧಿಯನ್ನು ಕಂಡನು. 'ನನ್ನ ನಂತರ ಇವರು ಯಾರೂ ನನ್ನ ಸಿಂಹಾಸನವನ್ನು ಏರಕೂಡದು' ಎಂದು ಅವನು ಪ್ರಜೆಗಳಿಗೆ ಸಾರಿದನು. ಅವರು ರಾಜ್ಯವನ್ನು ಉತ್ತಮವಾಗಿ ಆಳಲಾರರಾದಕಾರಣ ಅವನು ಹೀಗೆ ನಿಯಮಮಾಡಿದುದು, ಪ್ರಜೆಗಳ ಹಿತಕ್ಕಲ್ಲವೆ?

2. ಯಯಾತಿಯು ಮಡಿದ ಬಳಿಕ, ಅವನ ಮನೆತನದವರು ರಾಜ್ಯವನ್ನು ಪಡೆದರು. ಆದರೆ ಯಾರೂ, ಅವನ ನಿಯಮದಂತೆ, ಅವನ ಸಿಂಹಾಸನವನ್ನು ಏರಲಿಲ್ಲ. ಅವರ ಮಾವನ ಮನೆಯವರೆ ಆ ರಾಜ್ಯವನ್ನಾಳಿದರು.

3. ಆ ವಂಶದಲ್ಲಿ ಬಹುದಿನಗಳ ನಂತರ, **ಉಗ್ರಸೇನ**ನೆಂಬವನು ಮಥುರೆಗೆ ಅರಸಾದನು. ಅವನು ಆ ರಾಜ್ಯವನ್ನು ಆಳುತ್ತ ಇರುವಾಗ, ಅವನು ಒಬ್ಬ ಪುತ್ರನನ್ನು ಪಡೆದನು. ಅವನ ಹೆಸರು **ಕಂಸ.** ಅವನಂತಹ ಕರ್ಕಶನೂ, ಹಿಂಸಕನೂ, ನಿರ್ದಯನೂ, ಅಧಾರ್ಮಿಕನೂ ಇದು ವರೆಗೆ ಇನ್ನೊಬ್ಬನು ಹುಟ್ಟಿರುವುದಿಲ್ಲ. ಮನುಷ್ಯರಲ್ಲಿ ಎಷ್ಟು ದುರ್ಗುಣಗಳು ಇರಬಹುದೊ ಅವೆಲ್ಲವೂ ಇವನಲ್ಲಿ ಕೂಡಿದ್ದುವು. ತಂದೆಯ ಕಡೆಗೆ ಭಕ್ತಿ, ಸೋದರಿಯ ಕಡೆಗೆ ಮಮತೆ, ಒಂದೂ ಅವನಲ್ಲಿ ಇರಲಿಲ್ಲ. ಅವನಲ್ಲಿ ವಿದ್ಯೆಯೂ ಬುದ್ಧಿಯೂ ಇರಲಿಲ್ಲ. ಗರ್ವ ಮತ್ತು ಹಗೆತನ ಇವೆರಡೇ ಅವನಲ್ಲಿ ತುಂಬ ಇದ್ದುವು.

4. ಕೆಟ್ಟ ಕಂಸನು ಮೊದಲೆ ದುಷ್ಟನು. ವಯಸ್ಸು ಮೀರಿದಂತೆ ಅವನು ಬಲಶಾಲಿಯಾದನು. ಅವನಿಗೆ ದುಷ್ಟರೇ ಗೆಳೆಯರಾಗಿ ದೊರೆತರು. ಇನ್ನು ಹೇಳುವುದೇನು ? ಕಂಸನ ದುಷ್ಟತನವು ಮಿತಿಮೀರಿತು. ಅವನ ಪೀಡೆಗಳಿಂದ ಮಥುರಾರಾಜ್ಯವು ಹೆದರಿ ನಡುಗಿತು. ಅವನು ಬೇಕಾದಂತೆ ಮಾಡುವನಾದರೂ, ಅವನಿಗೆ ಬೇಡವೆಂದು ತಡೆಹಾಕುವವರೇ ಇರಲಿಲ್ಲ. ಅರಸನಾದ ಉಗ್ರಸೇನನೂ ಅವನಿಗೆ ಹೆದರುತಿದ್ದನು! ಕಂಸನಿಗೆ ಬುದ್ಧಿ ಹೇಳಿದರೆ, ಅವನೆ ಇದಿರುನಿಂದು ಕಾದಾಡುವನೆಂದು ಬೆದರಿ, ಉಗ್ರಸೇನನು ಅವನ ಗೊಡವೆಗೆ ಹೋಗದೆ, ಹೇಗೂ ಕಾಲಕಳೆದನು. ಎಂದಿಗೆ ಏನಾಗುವುದೊ ಎಂಬ ಚಿಂತೆಯಿಂದ, ಅವನು ಸತ್ತವನಂತೆ ಬದುಕಿಕೊಂಡನು.

5. ಆಗಲಿದ್ದುದು, ಕೊನೆಗೆ ಎಂತೂ ಆಯಿತು! ಕಂಸನು ತನ್ನ ಗರ್ವಕ್ಕೆ ಇದಿರಾಗುವ ತಂದೆಯನ್ನು, ಅವನು ತನ್ನ ಹಾದಿಯಲ್ಲಿ ಒಂದು ಮುಳ್ಳು ಎಂದೇ ಭಾವಿಸಿ, ಸೆರೆಮನೆಯಲ್ಲಿ ಇರಿಸಿದನು. ಇನ್ನು ಕಂಸನೇ ರಾಜನು; ಮಥುರೆಯೆಲ್ಲವೂ ಅವನ ಕೈಯಲ್ಲಿ! ಅವನು ಮಾತೆತ್ತುವನಾದರೆ, ಭೂಮಿಯು ನಡುಗುವುದು; ಕೈಯೆತ್ತುವನಾದರೆ, ಭೂಮಿಯು ಒಡೆಯುವುದು. ಹೀಗಿರುವ ಕಾರಣ, ರಾಜ್ಯದಲ್ಲಿ ನೀತಿ ಕೆಟ್ಟಿತು; ಧರ್ಮವು ಊರು ಬಿಟ್ಟಿತು; ದುಷ್ಟರ ಪ್ರತಾಪವು ರಾಜ್ಯವನ್ನು ಸುಟ್ಟಿತು.

6. ಕಂಸನಿಗೆ ಒಬ್ಬ ತಂಗಿ ಇದ್ದಳು. ಅವಳ ಹೆಸರು **ದೇವಕಿ.** ಅವಳ ರೂಪವು ಚೆಲುವಾಗಿರಲಿಲ್ಲ; ಅವಳ ಗುಣಗಳೇ ಅವಳ ಚೆಲುವು.

ಅವಳ ಮನಸ್ಸು ಕೋಮಲವಾಗಿದ್ದಿತು; ಬುದ್ಧಿಯು ನಿರ್ಮಲವಾಗಿದ್ದಿತು. ದಯೆ, ಪ್ರೀತಿ ಮೊದಲಾದುವು ಅವಳಲ್ಲಿ ತುಂಬ ಇದ್ದುವು. ಇಂತಹ ಸ್ತ್ರೀಯರು ಕಡಿಮೆ. ಇಂತಹರು ಇರುವ ಮನೆಯೆ ಭಾಗ್ಯ ಪಡೆಯುವುದು. ತಂದೆತಾಯಿಗಳಿಗೆ ಇವಳ ಮೇಲೆ ಪ್ರೀತಿಯು ಬಹಳವಾಗಿ ಇದ್ದಿತು. ಅವರು ಇವಳನ್ನು ತಮ್ಮ ಕಣ್ಣಿಗೆ ಮರೆಯಾಗಿರಲು ಒಂದು ಕ್ಷಣವೂ ಬಿಡುತಿರಲಿಲ್ಲ.

7. ದೇವಕಿಗೆ ವಯಸ್ಸು ತುಂಬಿತು, ಅವಳಿಗೆ ಮದುವೆಯಾಗಲು ನಿಶ್ಚಯವಾಯಿತು. ಮಥುರೆಯಲ್ಲಿ ನಿವಾಸಮಾಡಿದ್ದ **ವಸುದೇವ** ಎಂಬ ಒಬ್ಬ ಬುದಿಶಾಲಿಯು ಅವಳಿಗೆ ವರನು. ಅವನನ್ನು ಎಲ್ಲರೂ ಸತ್ಪುರುಷ ನೆನ್ನುತಿದ್ದರು. ಗರ್ವವೆಂದರೇನು ಎಂಬುದು ಅವನಿಗೆ ತಿಳಿಯದು. ಅವನ ಗುರುತು ಇದ್ದವರು ಎಲ್ಲರೂ ಅವನನ್ನು ಹೊಗಳುತಿದ್ದರು. ಅವನಿಗೆ ಹಣ ಬೇಕಾಗಿರಲಿಲ್ಲ; ನಾನಾ ಒಡವೆ ವಸ್ತುಗಳೂ ಬೇಕಾಗಿರ ಲಿಲ್ಲ. ಯಾವಾಗಲು ಅವನು ದೇವರ ಧ್ಯಾನದಲ್ಲಿರುವನು; ಶಾಸ್ತ್ರವನ್ನು ಓದುವನು. ದೇವಕಿಗೆ ಇಂತಹ ಸಾಧುವಾದ ಪತಿಯು ದೊರೆತುದೇ ಭಾಗ್ಯವಾಯಿತು; ವಸುದೇವನಿಗೆ ಇಂತಹ ಸತಿಯು ದೊರೆತುದೇ ಭಾಗ್ಯ ವಾಯಿತು.

8. ಇವರಿಬ್ಬರೂ ಗಂಡಹೆಂಡಿರು ಕೆಲಕಾಲ ಸುಖದಿಂದ ಇದ್ದರು. ಆದರೆ ಆ ಸುಖವು, ಬಹುಕಾಲ ಬಾಳಲಿಲ್ಲ. ನೀತಿಕೆಟ್ಟ ಅರಸನ ರಾಜ್ಯ ದಲ್ಲಿ ಯಾರೂ ಎಷ್ಟು ದಿನ ಸುಖದಿಂದ ಇರಬಹುದು ? ಅಂತಹರ ಸುಖವು ಕನಸಿನಂತೆ; ಕನಸಿನಿಂದ ಎಚ್ಚತ್ತ ಕೂಡಲೆ ದುಃಖವು ತಲೆದೋರಿತು.

9. ದೇವಕಿ ಕಂಸರಾಜನ ತಂಗಿ. ಅವಳಿಗೆ ಅಲ್ಪ ಕಷ್ಟಗಳಾದರೂ ಉಂಟಾಗುವುದು ಸಂಭವವೆ ? ಇತರ ಎಲ್ಲರ ಮನಸ್ಸನ್ನು ಕಂಸನು ನೋಯಿಸುವನಾದರೂ ದೇವಕಿಯನ್ನು ಅವನು ಬಾಧಿಸಿರಲಿಲ್ಲ. ಕಂಸನಿಗೆ ತಂಗಿಯೆಂದರೆ ಪ್ರೀತಿಯುವಳು. ಆದರೆ ಮುಂದಾಗುವುದು ಇಂದು ತಿಳಿದು ಬರುವುದುಂಟೆ? ಆ ಕಂಸನೆ ಅವಳ ದುಃಖಕ್ಕೆ ಕಾರಣನಾದನು. ವಸು ದೇವ, ದೇವಕಿಯರು ಬಹುದಿನಗಳ ತನಕ ಬಹಳವಾಗಿ ನೊಂದುಕೊಂಡು ಇರಬೇಕಾಯಿತು.

10. ಕಂಸನು ರಾಜನು. ಅವನು ಸತ್ಕೀರ್ತಿಯನ್ನು ಗಳಿಸಿಲ್ಲ ವಾದರೂ, ಅಪಕೀರ್ತಿಯನ್ನು ದುಡಿದಿರುವನು. ಪ್ರಜೆಗಳು ಅವನಿಗೆ ಭಯ

ಪಡುವರು, ಭೀತಿಗೊಳುವರು; ಅದುಕಾರಣವೆ ಅವನನ್ನು ಮನ್ನಿಸುವರು. ಅವನ ಹೆಸರು ಊರೂರುಗಳಲ್ಲಿ ಕೇಳಬರುತಿರುವುದು. ಎಷ್ಟೋ ಮಂದಿ ಅವನನ್ನು ನೋಡಿ ಮಾತಾಡಿ ಹೋಗೋಣ'ವೆಂದು ದೂರದೂರದಿಂದಲೂ ಬರುತಿರುವರು!

11. ಅಂತಹ ಪ್ರಖ್ಯಾತರೊಳಗೆ **ನಾರದ**ನೂ ಒಬ್ಬನು. ನಾರದನು ನೋಡದ ನೋಟವಿಲ್ಲ; ಕೇಳದ ಸಂಗತಿಯಿಲ್ಲ; ಹೋಗದ ಊರಿಲ್ಲ; ನಡೆಯದ ದಾರಿಯಿಲ್ಲ. ಅವನು ಎತ್ತೆತ್ತಲೂ ಸುತ್ತುತಿರುವನು. ಒಡೆಯರ ಸಭೆಗೂ ಹೋಗುವನು, ಬಡವರ ಮನೆಗೂ ಸುಳಿಯುವನು. ಕೈಲಾಸ ದಲ್ಲಿಯೂ ವೈಕುಂಠದಲ್ಲಿಯೂ ಅವನು ಬೇಕಾದಾಗ ಬೇಕಾದಂತೆ ಅಡ್ಡಾ ಡುವನು. ಅವನಿಗೆ ಎಲ್ಲಿಯೂ ಯಾರದೂ ತಡೆಯಿಲ್ಲ. ಕೆಲಸವಿರಲಿ ಇಲ್ಲದಿರಲಿ, ತಿರುಗಾಡುತಿರುವುದೇ ಅವನ ಉದ್ಯೋಗ. ಸುಮ್ಮನೆ ಬಂದು, ಸುಮ್ಮನೆ ಹೋಗುವನೆ? ಇಲ್ಲ, ಆ ಮಾತು ಈ ಮಾತು ಎನ್ನದೆ, ಎಲ್ಲ ವನ್ನೂ ಹೇಳುವನು. ಕಂಡುದನ್ನು ಹೇಳುವನು. ಆಗ ಕೇಳುವವರೊಳಗೆ ಕೆಲವು ಸಾರಿ ಕೆಂಡಹತ್ತುವುದು. ಅದರಿಂದ ಅವನಿಗೆ 'ಗೊಂದಲದ ನಾರದ' ಎನ್ನುತಿದ್ದರು. ಅವನು ಕಲಹಪ್ರಿಯನು; 'ಜಗಳ ಹೂಡಿಯೆ ಹೊಟ್ಟೇ ತುಂಬಿಸಿಕೊಳ್ಳುವವನು' ಎನ್ನುತಿದ್ದರು. ಆದರೆ ಎಷ್ಟೋ ಸಲ ಅವನು ನಿಜ ಸ್ಥಿತಿಯನ್ನೆ ಹೇಳುತಿದ್ದನು. ಎಲ್ಲ ಕಡೆಗಳಲ್ಲಿ ತಡೆಯಿಲ್ಲದೆ ತಿರುಗುತಲಿದ್ದ ಕಾರಣ, ಇಂತಿಂತಹ ಸಂಗತಿಗಳು ಹೀಗೆ ಹಾಗೆ ಆಗುವುವು ಎಂದು ಹೇಳು ತಿದ್ದನು. ಅದಕ್ಕಾಗಿ ಅವನನ್ನು ಸರ್ವಜ್ಞನು ಎನ್ನುತಿದ್ದರು. ಅವನು ಯಾವಾಗಲೂ ಸತ್ಯವನ್ನೆ ಆಡುವವನು ಎಂದೆಲ್ಲರೂ ಅವನನ್ನು ನಂಬುತಿದ್ದರು.

12. ನಾರದನು ಒಂದು ದಿನ ಕಂಸನ ಸಭೆಗೂ ಬಂದನು. ದೊಡ್ಡ ಸಭೆ; ಸಭಿಕರ ಹಿಂಡು ದೊಡ್ಡದು. ರಾಜನು ನಾರದನನ್ನು ಕಾಣುತ್ತಲೆ ಸಿಂಹಾಸನದಿಂದ ಇಳಿದು ಬಂದು, ಅವನನ್ನು ಯೋಗ್ಯರೀತಿಯಲ್ಲಿ ಸತ್ಕರಿಸಿ ದನು. ನಾರದನ ಕಾಲುದೂಳನ್ನು ಅರಸನು ಹಣೆಗೆ ಹಚ್ಚಿಕೊಂಡನು. ಅವನಿಗೆ ವಿಶೇಷವಾದ ಒಂದು ಆಸನವನ್ನೂ ಕೊಟ್ಟನು. ಏಕೆಂದರೆ, ಹಿಂದೆ ಒಮ್ಮೆ ನಾರದನು ಹೀಗೆಯೆ ಸಭೆಗೆ ಬಂದು ಕೆಲವು ಸಂಗತಿಗಳನ್ನು ಕಂಸ ನಿಗೆ ಹೇಳಿದ್ದನು. ಈಗಲೂ ಅಂತಹ ವಿಷಯಗಳನ್ನು ಹೇಳಬಹುದೆಂದು

ಭಾವಿಸಿ, ಕಂಸನು ಸಭೆ ಮುಗಿಸಿ, ನಾರದನೊಡನೆ ಮಾತ್ರ ಮಾತುಕತೆ ಬೆಳಸಿದನು. ಕಂಸನ ತಲೆಯಲ್ಲಿ ಆಗ ನಾನಾ ಬಗೆಯ ಆಲೋಚನೆಗಳು ಇದ್ದುವು. ನಾನಾ ಸುಖಗಳನ್ನು ಅವನು ಹೇಗೂ ಮಾಡಿ ಅನುಭವಿಸು ತಿದ್ದನಲ್ಲವೆ? ಇನ್ನೆಷ್ಟು ದಿನ ಈ ರೀತಿಯಾಗಿ ಇರುವನು? ಎಂದಿಗೆ ಮಡಿಯುವನು? ಹೇಗೆ ಮಡಿಯುವನು? ಇಷ್ಟನ್ನು ಮೊದಲೇ ತಿಳಿದರೆ, ಉಳಿದ ಕಾಲವನ್ನು ಆದಷ್ಟು ವಿನೋದದಿಂದ ಕಳೆಯಬಹುದಲ್ಲವೆ? ಅದು ಕಾರಣ, ನಾರದನನ್ನು ಕುರಿತು ಕಂಸನು,—'ಮುನಿವರ್ಯನೆ, ಹಣೆಯಲ್ಲಿ ಬರೆದಿದ್ದಂತೆಯೆ ಆಯಿತು. ನಾನು ರಾಜನಾದೆನು. ಸುಖವನ್ನು ಅನು ಭವಿಸುತಿರುವೆನು. ಇನ್ನೂ ಅನುಭವಿಸಬೇಕಾಗಿರುವ ಸುಖವು ಎಷ್ಟೋ ಉಳಿದಿದೆ. ಎಂದಿಗೆ ಸಾಯುವೆನೆಂಬುದನ್ನು ತಿಳಿದರೆ, ಆದಷ್ಟು ತ್ವರೆ ಯಲ್ಲಿ, ಉಳಿದ ಸುಖವನ್ನೆಲ್ಲ ಅನುಭವಿಸಿ ಪೂರಯಿಸುವೆನು. ನೀನು ಸರ್ವಜ್ಞನು. ನಾನು ಎಂದಿಗೆ ಸಾಯುವೆನೆಂದು ಹೇಳಬಲ್ಲೆಯಾ?' ಎಂದು ಕೇಳಿದನು. ನಾರದನು ಸರ್ವಜ್ಞನೆಂಬುದು ನಿಜ; ಅವನು ನಕ್ಕನು. ಕಂಸನು ಬಾರಿಬಾರಿಗೂ ಅದೇ ಪ್ರಶ್ನೆಮಾಡಲು, ಅವನು 'ಮಹಾರಾಜನೆ, ನಿನ್ನ ಮರಣವು ಮೊದಲೆ ನಿಶ್ಚಿತವಾಗಿದೆ. ನಾನು ಅದರ ಮಾಸ-ಪಕ್ಷ-ತಿಥಿ ಗಳನ್ನು ಹೇಳುವುದಿಲ್ಲ. ಆದರೆ ಯಾರ ಕೈಯಿಂದ ಯಾವಾಗ ಸಾಯು ವೆಯೊ ಅದನ್ನು ಹೇಳಬಲ್ಲೆನು' ಎಂದನು.

13. ಕಂಸನು ದೊಡ್ಡ ಅರಸಲ್ಲವೆ? ಸಾವಿಗೆ ಹೆದರಿ, ನಡುಗಿದನು. ಮರಣಕ್ಕೆ ಹೆದರದವರು ಇದ್ದಾರೆಯೆ? ಕಂಸನು ವಿನಯದಿಂದ ತಲೆಬಾಗಿ, 'ಸ್ವಾಮಿ, ನಾನು ರಾಜನು; ನನ್ನನ್ನು ಕೊಲ್ಲುವವರು ಯಾರು? ನಾನು ಯಾವಾಗ ಯಾರ ಕೈಯಿಂದ ಸಾಯುವೆನೊ ಹೇಳಬೇಕು' ಎಂದು ಬೇಡಿ ಕೊಂಡನು.

14. ನಾರದನು 'ಮರಣಕ್ಕಾಗಿ ಇಷ್ಟು ಆಲೋಚನೆ ಏಕೆ? ನೀನು ಹುಟ್ಟಿದಾಗಲೆ, ನಿನ್ನ ಮೃತ್ಯುವೂ ನಿನ್ನೊಡನೆಯೆ, ಇಲ್ಲೇ ಹುಟ್ಟಿರುವನು. ಮನೆಯವರೆ ನಿನ್ನನ್ನು ಸಾಯುಗೊಳಿಸುವರು' ಎಂದನು.

15. ಕಂಸನಿಗೆ ಆಶ್ಚರ್ಯವಾಯಿತು. ಬಹಳ ಆಲೋಚಿಸಿ ಕುಳಿ ತನು. ಅವನು—ಇವನು ಎಂದು ಅನೇಕರನ್ನು, ತನ್ನ ಮೃತ್ಯುವೆಂದು

ಭಾವಿಸಿ ನೋಡಿದನು. ಆದರೆ ಒಬ್ಬರೂ ತನ್ನನ್ನು ಕೊಲ್ಲಲಾಪರೆಂದು ಅವನಿಗೆ ನಿಶ್ಚಯವಾಗಲಿಲ್ಲ. ತನ್ನ ಮಕ್ಕಳೇ ತನ್ನನ್ನು ಕೊಲ್ಲಬಹುದೆಂದು ಭಾವಿಸಿದನು. ಅದು ವಾಸ್ತವ; ಏಕೆಂದರೆ, ಅವನ ತಂದೆಯನ್ನು ಅವನೇ ಸೆರೆಮನೆಯಲ್ಲಿ ಇರಿಸಿದನಲ್ಲವೆ? ಹೇಗೂ ಮೇಲೆ-ಕೆಳಗೆ ತಲೆಮಾಡಿ ಆಲೋಚಿಸಿ, ತಿರುಗಿ ನಾರದನನ್ನು ಕುರಿತು,—'ಸುಮ್ಮನೆ ಇನ್ನೂ ಗುಟ್ಟಾಗಿ ಇಡುವಿರೇಕೆ? ಯಾರವನು ನನ್ನನ್ನು ಕೊಲ್ಲುವವನು? ಅವನ ಹೆಸರನ್ನು ಹೇಳಿರಿ. ಅದನ್ನು ಕೇಳಲು ನನ್ನಲ್ಲಿ ಕುತೂಹಲವಿದೆ. ಬೇಗ ಬೇಗ ಹೇಳಿರಿ' ಎಂದು ಮರ್ಯಾದೆಕೊಟ್ಟು ಬೇಡಿಕೊಂಡನು.

16. ನಾರದನು ಇನ್ನು ಮರೆಮಾಜದೆ,—'ನಿನ್ನ ಸೋದರಿಯ ಮಗನೆ ನಿನ್ನನ್ನು ಕೊಲ್ಲುವನು' ಎಂದನು. 'ಅವಳ ಎಂಟನೆಯ ಮಗನೆ ನಿನಗೆ ಕಂಟಕಕಾರನು, ನಿನಗೆ ಯಮನು. ಅವನೆ ನಿನ್ನನ್ನು ಕೊಲ್ಲುವನು,' ಎಂದು ಒಂದೆ ಉಸಿರಿನಲ್ಲಿ ತಿಳುಹಿದನು.

17. ಕಂಸನ ಮುಖವು ಬಾಡಿತು; ಒಣಗಿ ಕಪ್ಪಾಯಿತು. ಯಾವ ತಂಗಿಯನ್ನು ತನ್ನ ಇಡೀ ರಾಜ್ಯಕ್ಕಿಂತ ಹೆಚ್ಚಾಗಿ ಅವನು ಪ್ರೀತಿಸುತಿದ್ದನೊ, ಅವಳನ್ನೆ ಈಗ ಅಷ್ಟೆ ಹೆಚ್ಚಾಗಿ ಹಗೆಮಾಡಲು ಬಗೆದನು. ದೇವಕಿಯಲ್ಲಿ ಹುಟ್ಟುವ ಯಾವ ಮಗುವನ್ನೂ ಉಳಿಸುವುದಿಲ್ಲವೆಂದೂ, ತಂಗಿಯಾದುದರಿಂದ ಮಾತ್ರ ದೇವಕಿಯನ್ನು ಕೊಲ್ಲುವುದಿಲ್ಲವೆಂದೂ, ಆಣೆಯಿಟ್ಟುಕೊಂಡನು.

18. ನಾರದನು ಅಲ್ಲಿಂದೆದ್ದು, ವಸುದೇವನಲ್ಲಿಗೂ ಬಂದನು. ಕಂಸನಿಗೂ ತನಗೂ ಆದ ಮಾತುಕತೆಯನ್ನು ತಿಳುಹಿದನು. ಬಳಿಕ,—ವಸುದೇವಾ, ಈ ದುಷ್ಟನಿಗೆ ಇದಿರಾಗಿ ಈ ರಾಜ್ಯದಲ್ಲಿ ಯಾರೂ ನಿಲ್ಲರು. ಕೆಟ್ಟವರೆಲ್ಲರೂ ಇವನ ಗೆಳೆಯರು, ಉತ್ತಮರು ಇವನನ್ನು ಕೊಲ್ಲಬಗೆಯರು. ನಿನ್ನಿಂದಲೂ ಇವನನ್ನು ಕೊಲ್ಲಲಾಗದು. ಜನರೆಲ್ಲರೂ ಇವನಿಗೆ ಇದಿರಾಗಿ ನಿಲ್ಲುವಂತೆ ಸಾಧಿಸಬೇಕಾದರೆ ಏನು ಮಾಡಬೇಕೊ ಅದನ್ನೆ ಮಾಡಿರುವೆನು. ನೀನೂ ದೇವಕಿಯೂ ಸಜ್ಜನರೂ ಶುದ್ಧರೂ ಆಗಿರುವಿರಿ. ನಿಮ್ಮಲ್ಲಿ ಹಲವು ಮಕ್ಕಳು ಹುಟ್ಟುವುವು. ಅವುಗಳನ್ನು ಇವನು ಕೊಲ್ಲುತ್ತ ಬಂದರೆ, ರಾಜ್ಯದಲ್ಲಿರುವ ಸ್ತ್ರೀಯರೂ, ಅವರ ಬಾಂಧವರಾದ ಗಂಡಸರೂ ಕಂಸನ ಪಾಪಕೃತ್ಯಗಳಿಗಾಗಿ ರೇಗುವರು. ಆಗ ನಿನ್ನಲ್ಲಿ ಹುಟ್ಟುವ ಕೊನೆಯ ಮಗುವು

ಇವನಿಗೆ ಇದಿರಾಗಿ ನಿಂದರೆ, ರಾಜ್ಯದಲ್ಲಿ ಎಲ್ಲರೂ ಅವನಿಗೆ ಸಹಾಯ ಮಾಡುವರು. ಕಂಸನನ್ನು ಆಗ ವಿನಾಶಗೊಳಿಸಬಹುದು. ನೀನೂ ದೇವಕಿಯೂ ಅಷ್ಟುಕಾಲದ ವರೆಗೆ ಮಕ್ಕಳ ದುಃಖವನ್ನು ತಾಳಬೇಕಾಗುವುದು. ಮಹತ್ತಾದ ಉದ್ದೇಶಕ್ಕಾಗಿ ಈ ದುಃಖವನ್ನು ನೀನು ತಾಳಿರು. ಎಲ್ಲವನ್ನೂ ಅರಿತಿರುವ ನಿನಗೆ, ಇನ್ನೆಷ್ಟು ಹೇಳಬೇಕು? ಕಂಸನನ್ನು ಕೊಲ್ಲುವ ನಿನ್ನ ಮಗನು ಎಷ್ಟು ಖ್ಯಾತಿಹೊಂದುವನು! ಆದರೆ, ಅದು ವರೆಗೆ ಮಾತ್ರ ಸಹಿಸಿರಬೇಕು. ಭಗವಂತನನ್ನು ಪ್ರಾರ್ಥಿಸುತ್ತಲಿರಿ. ಕಂಸನು ಕೊಡುವ ಕಷ್ಟಗಳನ್ನು ಸಹಿಸಿರಿ. ನಿಮ್ಮಿಂದ ರಾಜ್ಯಕ್ಕೆ ಕಲ್ಯಾಣವಾಗುವುದು' ಎಂದು ಎಲ್ಲವನ್ನೂ ತಿಳುಹಿ ಸಮಾಧಾನಗೊಳಿಸಿ, ಮತ್ತೆತ್ತಲೊ ತೆರಳಿದನು.

19. ಕಂಸನು ತನ್ನನ್ನು ಕಾಪಾಡಿಕೊಳ್ಳುವ ಉಪಾಯಗಳನ್ನು ಎಣಿಸಿ ಕುಳಿತನು. ದೇವಕಿ-ವಸುದೇವರನ್ನು ಸೆರೆಯಲ್ಲಿಡಬೇಕೆಂದು ನಿಶ್ಚಯ ಮಾಡಿದನು. ವಸುದೇವನ ಮನೆಯ ಸುತ್ತಲೂ ಕಠಿನರಾದ ಕಾವಲಿನವರನ್ನು ಇಟ್ಟನು. ದೇವಕಿಯು ಮನೆಯ ಹೊರಕ್ಕೆ ಕಾಲಿಡಬಾರದೆಂದಾಯಿತು. ವಸುದೇವನು ಬೇಕಾದಲ್ಲಿಗೆ ಹೋಗಬಹುದು, ಆದರೆ ಅನನೊಡನೆ ಕಂಸನ ಪಹರೆಯುವನು ಯಾವಾಗಲೂ ಇರಬೇಕೆಂದಾಯಿತು. ಅವನ ಮನೆಯ ಕೆಲಸದವರೆಲ್ಲರೂ ಕಂಸನ ಆಳುಗಳೇ ಆದರು.

20. ಈ ವೃತ್ತಾಂತವು ರಾಜ್ಯದಲ್ಲಿ ತುಂಬ ಹರಡಿತು. ಕಂಸನು ಸಾಯುವನೆಂದು ನಾರದನೆ,—ಸರ್ವಜ್ಞನಾದ ನಾರದನೆ ಹೇಳಿರುವನು; ದೇವಕಿಯ ಎಂಟನೆಯ ಮಗನೆ ಅವನಿಗೆ ಕಂಟಕನು ಎಂದು ಎಲ್ಲೆಲ್ಲಿಯೂ ಪ್ರಜೆಗಳು ಆಡುತಿದ್ದರು. ದುಷ್ಟನಾದ ಅರಸನ ಸಾವು ಸಮೀಪವಿದೆ ಎಂದು ಎಷ್ಟೊ ಜನರು ಸಂತೋಷಗೊಂಡರು. ಆ ದಿನವು ಯಾವಾಗ ಮೂಡುವುದೆಂದು ಎಲ್ಲರೂ ಕಾದು ಕುಳಿತರು. ದುರ್ಜನರು ಸಾಯುವುದೆಂದರೆ ಅದು ಒಂದು ಸುಖದ ಸುದ್ದಿಯಲ್ಲವೆ? 'ಮತ್ತೊಬ್ಬನು ಸಾಯಲಿ' ಎಂದು, ಎಂದಾದರೂ ಜನರು ಕಾರಣವಿಲ್ಲದೆ ಬಯಸುವರೆ?

21. ಎಷ್ಟೆಂದರೂ ಸ್ತ್ರೀಯಲ್ಲವೆ? ಅರಮನೆಯಲ್ಲಿದ್ದ ದೇವಕಿಗೆ ಈ ಸೆರೆಮನೆ ಅತಿ ಕಷ್ಟದ್ದಾಯಿತು; ನೆರೆಮನೆಗೂ ಅವಳು ಹೋಗಬಾರದಲ್ಲ!

ಬಸಿರಾದ ಕೂಡಲೆ, ಹೊತ್ತ ಮಗುವನ್ನು ಹೆತ್ತ ಕೂಡಲೆ ಕತ್ತುಹಿಸುಕು ವರೆಂದು ಅವಳು ತಿಳಿದಿರುವಳು. ಆದರೆ, ತಂದೆಯನ್ನೆ ಸೆರೆಯಲ್ಲಿಟ್ಟು ಪ್ರಜೆಗಳ ಎದೆಗಳ ಮೇಲೆ ಅನ್ಯಾಯವನ್ನು ಅರೆದ ದುಷ್ಟ ಕಂಸನು ಸತ್ತು ರಾಜ್ಯಕ್ಕೆ ಕಲ್ಯಾಣವಾಗಲೆಂದು ಬಾಯಿಯೆತ್ತದೆ ಸುಮ್ಮನಿದ್ದಳು. ಕ್ರಮ ವಾಗಿ ಒಂದೊಂದಾಗಿ ಮಕ್ಕಳು ಹುಟ್ಟಿದುವು. ಕಂಸನ ಆಳುಗಳೇ, ಹೆತ್ತ ಕೋಣೆಯಲ್ಲೆ, ಒಂದೊಂದೆ ಮಗುವನ್ನು ಕೊಂದಿಕ್ಕಿ ಕಂಸನಿಗೆ ತಿಳುಹಿ, ಬಹುಮಾನ ಪಡೆದರು. ನಾರದನು ಹೇಳಿದ್ದುದು ನಿಜವಾದರೂ, ಹೆತ್ತ ವರಿಗೆ ದುಃಖವು ನಿಜವಲ್ಲವೆ? ಒಂದೊಂದಾಗಿ ಆರು ಮಕ್ಕಳನ್ನು ಹೆತ್ತಳು; ಆರೂ ಗಂಡು; ಆರನ್ನೂ ಕೊಂದಿಕ್ಕಿದರು! ಊರಲ್ಲಿ ಎಲ್ಲೆಲ್ಲಿಯೂ ಈ ದುಷ್ಟತನದ ವೃತ್ತಾಂತವೇ ಹರಡಿತು. ದೇವಕಿ—ವಸುದೇವರು ಅರ್ಧ ಸತ್ತಂತಾದರು. ಎಂಟನೆಯ ಮಗುವಿಗಾಗಿ ಬದುಕಿರುವುದೊ, ಈಗಲೆ ಸಾಯುವುದೊ, ಎಂದೇ ಅವರ ಚಿಂತೆ. ದೇವಕಿಯು ಏಳನೆಯ ಸಾರಿ ಗರ್ಭಿಣಿಯಾದಳು. ಪೂರ್ಣ ತಿಂಗಳುಗಳಾಗುವ ಮೊದಲೆ ಗರ್ಭವು ಇಳಿ ಬಿದ್ದುದರಿಂದ, ಕಂಸನಿಗೆ ಅದನ್ನು ಕೊಲ್ಲುವ ಕಷ್ಟವೂ ಪಾಪವೂ ತಟ್ಟಲಿಲ್ಲ.

22. ಅನಂತರ, ಎರಡು ವರ್ಷಗಳು ಕಳೆದುವು. ಅವಳು ಈ ಸಾರಿ ಬಸಿರಾಗಿರುವಳೆಂದು ತಿಳಿದುಬಂದ ಕೂಡಲೆ, ಕಂಸನು ನಾರದನ ಮಾತನ್ನು, ಚೆನ್ನಾಗಿ ಮನಸ್ಸಿಗೆ ತಂದುಕೊಂಡು, 'ಈ ಮಗುವೆ ತನ್ನನ್ನು ಕೊಲ್ಲುವು ದಂತೆ' ಎಂದು ನಂಬಿಕೊಂಡನು. ಇನ್ನು ಸುಮ್ಮನೆ ಇರಲಾಗುವುದೆ? ದೇವಕಿಯ ಬಳಿಯಲ್ಲಿ ಒಬ್ಬ ಸೂಲಗಿತಿಯನ್ನು ಇರಿಸಿ, ಅವಳು ಹಗಲು ರಾತ್ರಿಯೆನ್ನದೆ ಅವಳ ಜತೆಯಲ್ಲಿ ಕಾವಲಿರಬೇಕೆಂದು ಅಪ್ಪಣೆಕೊಟ್ಟನು. ಮನೆಯ ಹೊರಗಿನ ಕಾವಲೂ ನಾಲ್ಕುಪಾಲಿಗೆ ಹೆಚ್ಚಿತು. ವಸುದೇವನ ಮನೆಯೊಳಕ್ಕೆ ಯಾರೂ ಬರಕೂಡದು. ವಸುದೇವನು ಪಹರೆಯವರ ಜತೆಯಲ್ಲಿ ಮಾತ್ರ, ಅಥವಾ ಅವರ ಒಪ್ಪಿಗೆಯಿಂದ ಮಾತ್ರ, ಅಲ್ಪಸ್ವಲ್ಪವಾಗಿ ಹೊರಕ್ಕೆ ಹೋಗಿ ಮರಳಬಹುದು.

23. ಪಹರೆಯವರು ವಸುದೇವನ ಗುಣಗಳಿಗೆ ಮೆಚ್ಚಿಹೋದರು. ಅವರು ಆಳುಗಳು; ಅವನು ರಾಜನ ಮೈದುನನು. ಆದರೂ ಅವನು ಅವರಿಗೆ ಯಾವ ತರದ ತೊಂದರೆ ಕೊಟ್ಟುದಿಲ್ಲ. ಅವರನ್ನು ತನ್ನ ಮನೆಯವರೆಂದೇ

ಭಾವಿಸಿ ನಡೆಯುತ್ತಿದ್ದನು. ಅವರೂ, ಅವನು ಬೇಕಾದಾಗ ಹೊರಕ್ಕೆ ಹೋಗುವುದಕ್ಕೂ ಒಳಕ್ಕೆ ಬರುವುದಕ್ಕೂ ಬಿಡುತ್ತಿದ್ದರು. ಅಧಿಕಾರ ಉಂಟೆಂದು ಪೀಡಿಸುತ್ತಿರಲಿಲ್ಲ; ಕಂಸನು ತಮ್ಮನ್ನು ಶಿಕ್ಷಿಸಬಹುದೆಂದು ಅವರು ಅಂಜಿಕೊಂಡರೂ, ವಸುದೇವನನ್ನು ವಿಶೇಷವಾಗಿ ಕಾವಲಿಡಲಿಲ್ಲ. ದೇವಕಿಗೆ ಹೇರುವ ಕಾಲವು ಸಮೀಪವಾದಂತೆ, ಕಂಸನಿಗೆ ಮರಣದ ಹೊತ್ತು ಸಮೀಪಿಸಿತೆಂದು ಭಯವು ಬೆಳೆಯಿತು. ದೇವಕಿ-ವಸುದೇವರೂ ಹೆಚ್ಚಾಗಿ ಬೆದರಿದರು; ನಾರದನ ಮಾತನ್ನು ನೆನಪಿಗೆ ತಂದುಕೊಂಡರು. 'ಈ ಮಗುವು ಎಂಟನೆಯದು, ಅದೂ ಗಂಡಾದಲ್ಲಿ ಕಂಸನು ಕೊಲಿಸುವನು; ಮುಂದೆ ಮಕ್ಕಳಾಗುವುವೊ ಇಲ್ಲವೊ, ಯಾರು ಬಲ್ಲರು? ಇದನ್ನಾದರೂ ಹೇಗೂ ಮಾಡಿ ಕಾಪಾಡಬೇಕು,' ಎಂದೇ ಅವರಿಬ್ಬರೂ ಚಿಂತಿಸಿ ಉಪಾಯ ಹುಡುಕಲು ತೊಡಗಿದರು. ಯಾವ ಉಪಾಯವಿದ್ದು ಮಾಡುವುದೇನು? ಯಾವಾಗಲೂ ಕಂಸನ ಕಾವಲು ತೋಳಬಳಿಯಲ್ಲೆ ಇದೆಯಷ್ಟೆ. ಅವನು ಹೋಗೋಣ ಬರೋಣ, ಯಾರೊಡನೆಯಾದರೂ ಮಾತಾಡೋಣ, ಏನೊಂದು ಮಾಡೋಣ, ಅದನ್ನೆಲ್ಲ ಅವರು ತಿಳಿದುಕೊಂಡು ಕಂಸನಿಗೆ ಕೂಡಲೆ ಬಿನ್ನವಿಸುತ್ತಿದ್ದರಲ್ಲವೆ?

24. ವಸುದೇವನಿಗೆ ನಂದನೆಂಬ ಗೊಲ್ಲನೊಬ್ಬನು ಗೆಳೆಯನಾಗಿದ್ದನು. ಆ ಗೆಳೆತನವು ಬಹುಕಾಲದಿಂದಲೂ ಇದ್ದಿತು. ಅವರಿಬ್ಬರು ಪರಸ್ಪರವಾಗಿ ಎಷ್ಟು ಚೆನ್ನಾಗಿ ಪ್ರೀತಿಸುತ್ತಿದ್ದರೆಂದರೆ, ಒಬ್ಬನು ಮತ್ತೊಬ್ಬನಿಗಾಗಿ ಸಾಯಲೂ ಸಿದ್ಧನಾಗಿದ್ದನು. ನಂದನ ಮನೆಯೂ ಮಥುರೆಯಲ್ಲಿಯೆ ಇದ್ದಿತು. ಬಡವನಿಗೆ ಸರಕಾರದ ಕಂದಾಯ ತೆರುವುದೂ ರಾಜಧಾನಿಯಲ್ಲಿಯೆ ಇರುವುದೂ ಕಷ್ಟವಲ್ಲವೆ? ಅದಕ್ಕಾಗಿ ಅವನು ಮಥುರೆಯನ್ನು ಬಿಟ್ಟು, ಯಮುನಾನದಿಯ ಆಚೆಯ ತೀರದಲ್ಲಿದ್ದನು. ನಂದನ ಹೆಂಡತಿಯ ಹೆಸರು **ಯಶೋದೆ**. ಅವಳೂ ಆಗ ಗರ್ಭಿಣಿಯಾಗಿದ್ದಳು. ನಂದನೂ ವಸುದೇವನೂ ತಂತಮ್ಮ ಸುಖದುಃಖಗಳನ್ನು ಪರಸ್ಪರವಾಗಿ ಆಡಿಕೊಂಡರು. ಕೊನೆಗೆ, ನಂದನಿಗೆ ಹುಟ್ಟುವ ಮಗು ಹೆಣ್ಣಾದರೆ, ಅದನ್ನು ವಸುದೇವನಲ್ಲಿ ಹುಟ್ಟಬಹುದಾದ ಗಂಡು ಮಗುವಿನ ಬದಲಾಗಿ ವಸುದೇವನಿಗೆ ಕೊಡುವುದೆಂದು ನಿಶ್ಚಯಿಸಿದರು. ವಸುದೇವನಲ್ಲಿ ಹೆಣ್ಣು ಶಿಶು ಹುಟ್ಟಿದರಂತೂ ಮಾತಿಲ್ಲ; ನಂದನಿಂದ ಅವನು ಪಡೆವ ಹೆಣ್ಣು ಕೂಸನ್ನು ಕಂಸನು ಕೊಲ್ಲ

ವುದಿಲ್ಲವಷ್ಟೆ. ಮಿಕ್ಕ ಮಕ್ಕಳೆಲ್ಲ ಗಂಡಾದುದರಿಂದ, ಇದೂ ಗಂಡಾಗ ಬಹುದೆಂದು ವಿಶ್ವಾಸ. ಮುಖ್ಯವಾಗಿ, ವಸುದೇವನ ಸಂತತಿಯನ್ನು ರಕ್ಷಿಸಬೇಕೆಂದು ಮಾತು. ಇಬ್ಬರೂ ಪ್ರಾಣದ ಗೆಳೆಯರು; ಇಂತಹ ಮಾತುಕತೆ ಅವರಲ್ಲಿ ನಡೆದುದು ವಿಚಿತ್ರವಲ್ಲ.

25. ವಿಚಿತ್ರವೆಂದರೆ,—ವಸುದೇವನ ಹೆಂಡತಿಯಾದ ದೇವಕಿಗೂ, ನಂದನ ಹೆಂಡತಿಯಾದ ಯಶೋದೆಗೂ ಒಂದೇ ದಿನ, ಒಂದೇ ವೇಳೆ, ಹೆರಿಗೆಯ ಬೇನೆ ಹಿಡಿಯಿತು. ಅದೆಂತಹ ರಾತ್ರಿಕಾಲವು! ಶ್ರಾವಣ ಮಾಸವು, ಕೃಷ್ಣಪಕ್ಷವು, ಅದರಲ್ಲೂ ಅಷ್ಟಮಿಯ ತಿಥಿ,—ಕಗ್ಗತ್ತಲು, ನಟ್ಟಿರುಳು. ಕತ್ತಲು ದಪ್ಪನಾಗಿದ್ದಿತು; ಮಳೆ ಮೋಡಗಳು ಗುಡುಗು ತಿದ್ದುವು; ಒನಿಕೆಯ ಗಾತ್ರದ ಮಳೆಯ ಧಾರೆ! ಇಂತಹ ದುರ್ದಿನದಲ್ಲಿ ಕಂಸನ ಸೂಲಗಿತಿಯು ಹೆರಿಗೆಗೆ ಬರಲೇ ಇಲ್ಲ. ಕಾವಲಿನವರೂ ಮನ ಸೋತು ಕಂಗೆಟ್ಟು ಬಿದ್ದರು.

26. ದೇವಕಿಯು ಗಂಡು ಕೂಸನ್ನು ಹೆತ್ತಳು ಎಂದು ವಸುದೇವನು ತಿಳಿದನು. ಅಹ! ಅದೆಂತಹ ಮಗು! ಶ್ಯಾಮವರ್ಣದ ಸುಂದರ ಶಿಶು. ಮಗುವನ್ನು ಹೆತ್ತ ಕೂಡಲೆ, ದೇವಕಿಯು ಬಲಹೀನಳಾಗಿ ಮೂರ್ಛೆ ಹೋದಳು. ಮಗುವು ಗಂಡೋ ಹೆಣ್ಣೋ ಅವಳಿಗೆ ತಿಳಿಯಲಿಲ್ಲ. ವಸುದೇವನು ಕೂಡಲೆ ಆ ಮಗುವನ್ನು ಎತ್ತಿಕೊಂಡನು. ಅದನ್ನು ತನ್ನ ದುಪ್ಪಟ್ಟಿಯ ಸೆರಗಿನಿಂದ ಹೊದೆದು, ಮುಚ್ಚಿ, ಮೆಲ್ಲಮೆಲ್ಲನೆ ಕಾಲಿ ಡುತ್ತ, ಮನೆಯಿಂದ ಹೊರಬಿದ್ದನು. ಜಾಗ್ರತೆಯಾಗಿ ನಡೆದು, ಯಮುನಾ ನದಿಯ ದಡಕ್ಕೆ ತಲಪಿದನು. ನೀರು ತುಂಬಿ ನೆರೆಯೇರಿದ್ದಿತು. ಆದರೂ, ಮಗುವನ್ನು ಕಾಪಾಡುವ ಭರದಿಂದ, ಎಂತಹ ಸಂಕಟವನ್ನಾದರೂ ಅವನು ಸಹಿಸಿಕೊಳ್ಳಲು ಹೆದರದೆ, ನೀರಿನಲ್ಲಿ ಇಳಿದು, ಮಗುವನ್ನು ತಲೆಯ ಮೇಲೆತ್ತಿ ಹಿಡಿದು, ನಡೆದನು. ಒಮ್ಮೆ ಮಗು ನೀರಿನಲ್ಲಿ ಬಿತ್ತೋ ಎಂಬಂತಾಯಿತು. ಆದರೆ ಹೇಗೂ ನದಿಯ ಆಚೆಯ ದಡವನ್ನು ವಸು ದೇವನು ಸುರಕ್ಷಿತವಾಗಿ ಸೇರಿದನು. ಯಾವಾಗಲು ಅದೇ ದಾರಿ ಹಿಡಿದು ಜನರು ಆ ನದಿಯನ್ನು ದಾಟುತಿದ್ದುದರಿಂದ, ವಸುದೇವನು ಸ್ವಲ್ಪ ಕಷ್ಟ ಪಟ್ಟಾದರೂ ಆಚೇ ದಡವನ್ನು ಸೇರಿದನು. ದಾರಿತಪ್ಪಿದ್ದರೆ ಅವನಿಗೆ ಅದು ಸಾಧ್ಯವಾಗುತಿರಲಿಲ್ಲ.

27. ಆಚೆಯದಡದಲ್ಲಿ, ಅಲ್ಲಿಯೆ ನಂದನ ಮನೆ. ವಸುದೇವನು ತನ್ನ ಹಸುಕೂಸಿನೊಡನೆ ಒಳಕ್ಕೆ ಹೋದನು. ಅಲ್ಲಿ ಯಶೋದೆಯು ಒಂದು ಹೆಣ್ಣು ಕೂಸನ್ನು ಹೆತ್ತಿದ್ದಳು! ತನ್ನ ಗಂಡು ಮಗುವನ್ನು ಯಶೋದೆಯ ಪಕ್ಕದಲ್ಲಿ ಮಲಗಿಸಿ, ಅವಳ ಹೆಣ್ಣು ಕೂಸನ್ನು ತಾನು ಎತ್ತಿಕೊಂಡನು. ಇನ್ನು ಅಲ್ಲಿ ತಡಮಾಡಿ ಉಳಿಯದೆ, ನಂದನನ್ನು ಕರೆದು,—'ಅಣ್ಣಾ! ನನ್ನ ಮಗನನ್ನು ಇಲ್ಲಿ ಇರಿಸಿ, ನಿನ್ನ ಮಗಳನ್ನು ನಾನು ಒಯ್ಯುವೆನು. ಇವನನ್ನು ಮುದ್ದಾಗಿ ಬೆಳೆಯಿಸು. ನಿನ್ನ ಉಪಕಾರದಿಂದ ನನ್ನ ಮಗನಂತೂ ನಿನ್ನಲ್ಲಿ ಉಳಿಯುವಂತಾಯಿತು. ನಿನ್ನ ಮಗಳನ್ನೂ ಕಂಸನು ಕೊಲ್ಲನು. ಇನ್ನೊಂದು ಮಾತು ಇದೆ. ನನಗೆ **ರೋಹಿಣಿ** ಎಂಬ ಇನ್ನೊಬ್ಬ ಹೆಂಡತಿಯಿರುವಳಲ್ಲವೆ? ಅವಳಲ್ಲಿಯೂ ನನಗೆ ಒಬ್ಬ ಮಗನು ಹುಟ್ಟಿರುವನು. ಅವನನ್ನೂ ವ್ರಜದಿಂದ ನಿನ್ನಲ್ಲಿಗೆ ತಂದು ಮಮತೆಯಿಂದ ಸಲಹಬೇಕು. ಅದೂ ನನ್ನ ಗಂಡು ಮಗುವೆಂದು ಕಂಸನಿಗೆ ಅದರ ಮೇಲೆಯೂ ಕಣ್ಣು ಇದೆ. ನೀನು ಈಗಲೆ ವ್ರಜಕ್ಕೆ ತೆರಳಿ ಅವನನ್ನು ಇತ್ತ ತಂದರೆ ಉತ್ತಮವಾಗುವುದು' ಎಂದು ತಿಳಿಯಹೇಳಿದನು.

28. ವ್ರಜದಲ್ಲಿ (ತನ್ನ ತಂದೆಯ ಮನೆಯಲ್ಲಿ)ದ್ದ ರೋಹಿಣಿಯಲ್ಲಿ ವಸುದೇವನಿಗೆ ಹುಟ್ಟಿದ ಮಗನೇ **ಬಲರಾಮನು;** ಸೆರೆಮನೆಯಲ್ಲಿ ವಸುದೇವನೊಡನೆಯೆ ಇದ್ದ ದೇವಕಿಯಲ್ಲಿ ಹುಟ್ಟಿದ ಮಗನೇ ಶ್ರೀಕೃಷ್ಣನು.

29. ವಸುದೇವನು ನಂದನ ಮನೆಯಿಂದ ಅವನ ಹೆಣ್ಣು ಕೂಸನ್ನು ಎತ್ತಿಕೊಂಡು, ಹೋದ ದಾರಿಯಲ್ಲಿಯೆ ಮರಳಿದನು. ಅವನು ತನ್ನ ಮನೆ ಸೇರಿ ನೋಡುವಾಗಲೂ, ಅಲ್ಲಿನ ಕಾವಲಿನವರು ಎಚ್ಚತ್ತಿರಲಿಲ್ಲ. ಮನೆಯೊಳಗೆ ಕಾಲಿಟ್ಟು ನೋಡುವಾಗಲೂ, ದೇವಕಿಯು ಎಚ್ಚರಗೊಂಡುದಿಲ್ಲ. ಎಲ್ಲವೂ ಆಗ ಇದ್ದಂತೆಯೆ ಇನ್ನೂ ಇದ್ದಿತು. ವಸುದೇವನು ತುಂಬ ದಣಿದಿದ್ದನು; ನಂದನ ಹೆಣ್ಣು ಕೂಸನ್ನು ದೇವಕಿಯ ಮಗ್ಗುಲಲ್ಲಿ ಮಡಗಿದನು. ಅದು ಹೆಣ್ಣು ಕೂಸಲ್ಲವೆ? ಬಲವಾಗಿ ಅತ್ತುಕೊಂಡಿತು. ಆ ಕೂಗಿಗೆ ದೇವಕಿಯು ಎಚ್ಚರಗೊಂಡಳು. ಮಗುವು ಎಂತಹದೆಂದು ನೋಡಿದಳು. ಅವಳಿಗೆ ಆನಂದವಾಯಿತು. ಹೆಣ್ಣು ಮಗು! ಕಂಸನು ಅದನ್ನು ಕೊಲ್ಲುವುದಿಲ್ಲವಷ್ಟೆ! ವಸುದೇವನನ್ನು ಕರೆದು ಸಂತೋಷದಿಂದ

ತಿಳುಹಿದಳು. ಅವನು ಏನೂ ತಿಳಿಯದವನಂತೆ ಅವಳೊಡನೆ ನಗುತ ಮುಖ ಅರಳಿಸಿದನು. ಇಬ್ಬರೂ ದೇವರನ್ನು ಪ್ರಾರ್ಥಿಸಿದರು. ಅವನಿಗೆ ಉಂಟಾದ ದಣುವೆಲ್ಲವೂ ಕಳೆಯಿತು. ಅವಳ ಹೊಟ್ಟೆಯ ಬೇಸರವೂ ಇಳಿಯಿತು.

30. ಅದಾದ ಬಳಿಕ, ಮಳೆ-ಗಾಳಿ ಶಾಂತವಾಯಿತು. ಕಾವಲಿನವರು ಎದ್ದು ಕಣ್ಣು ಒರಸಿಕೊಂಡರು. ಹೆಣ್ಣಾಳು ಎದ್ದು ಕೈದೀಪ ಹಚ್ಚಿಕೊಂಡಳು. ಕೂಗುವ ಮಗು ಹೆಣ್ಣು! ಕಾವಲಿನವರ ಜತೆಯಲ್ಲಿ ದೀವಟಿಗೆಯೊಡನೆ ಕಂಸನ ಮನೆಗೆ ಬಂದು ಅವನನ್ನು ಎಬ್ಬಿಸಿದಳು. ಅವನು ಎಂದಿನಿಂದ ಕಾದು ಕಾದು ದಣಿದಿದ್ದನು, ನಿದ್ದೆ ಹೋಗಿರಲಿಲ್ಲ. 'ದೇವಕಿಯು ಹೆಣ್ಣು ಕೂಸು ಪಡೆದಳು' ಎಂದು ಅರಚಿಕೊಂಡು ಮರಳಿ ಕಾವಲಿನವರೊಡನೆ ಓಡಿ ಓಡಿ ಹಿಂತಿರುಗಿದಳು. ಅವನೂ ಓಡಿ ಓಡಿ ಅವರ ಹಿಂದೆಯೆ ಸೆರೆಮನೆಗೆ ಬಂದನು. ಎಲ್ಲರಿಗೂ ಉಸಿರು ತಡೆಯಿತು. ಗಂಡು ಕೂಸಾಗಿದ್ದರೆ ಅದನ್ನು ಅಲ್ಲೆ ಕಡಿದು ಚೆಲ್ಲಬಹುದಾಗಿದ್ದಿತು! ಇದು ಹೆಣ್ಣು. ಕಂಸನು ಹುಚ್ಚನಂತಾದನು. ಮಗುವನ್ನು ದೇವಕಿಯ ಕೈಯಿಂದ ಸೆಳೆದುಕೊಂಡು, ಬಾರಿಬಾರಿಗೂ ಪರೀಕ್ಷಿಸಿ ಚೆನ್ನಾಗಿ ನೋಡಿದನು. ಅದು ಹೆಣ್ಣು; ಹಾಗಾದರೆ, ನಾರದನು ಹೇಳಿದುದೇನು? ಇಲ್ಲಿ ಹುಟ್ಟಿದುದೇನು? ಅದನ್ನೆ ಭಾವಿಸಿದನು. ಆಗ ಒಂದು ಮಿಂಚು, ಬಳ್ಳಿಯಂತೆ ಜಗ್ಗನೆ ಬಾನಿನಲ್ಲಿ ಹರಿದು ದಾಟಿತು; 'ಆ ಹೆಣ್ಣು ಮಗು ತನಗೆ ಯಮನಲ್ಲ, ಯಮನು ಗಂಡು ಮಗು, ಅವನೆಲ್ಲಿಯೊ ಉಳಿದಿರುವನು' ಎಂಬ ಒಂದು ಭಯದ ಸಂಶಯವು, ಅವನ ತಲೆಯಲ್ಲಿ, ಆ ಮಿಂಚಿನಂತೆಯೆ ಹರಿದು ದಾಟಿತು.

31. ಬಳಿಕ ಬೆಳಕು ಹರಿಯಿತು. ಊರಲ್ಲೆಲ್ಲ ಗುಜು-ಗುಜು ಸುದ್ದಿ ಸುರಿಯಿತು. ನಾರದನು ಸರ್ವಜ್ಞನು; ಅವನ ಮಾತು ಸುಳ್ಳಾಗುವುದೆ? ಕಂಸನು ಇದುವರೆಗೆ ಎಣಿಸಿದಂತೆ, ಎಲ್ಲವೂ ಆಗಿದ್ದೂ ಈಗ ಮಾತ್ರ ಹೀಗಾದುದೇಕೆ? ನಿಜವಾಗಿಯೂ ಕಂಸನ ಹಗೆಯು ಎಲ್ಲಿಯೊ ಮಾಯವಾಗಿರಬೇಕು. ದೇವರ ಇಚ್ಛೆಯಲ್ಲವೆ? ಎಂದು ಎಲ್ಲರೂ ಆಡಿದರು. ಇತ್ತ, ಕಂಸನ ದೂತರು ಎಲ್ಲಿಯಾದರೂ ಬಂದು ವಸುದೇವನನ್ನು ಕಡಿಯಬಹುದೆಂದು ಅವನು ಬೆದರಿದನು; ತನ್ನನ್ನು ಹಿಡಿಯಬಹುದೆಂದು ನಂದನು

ಹೆದರಿದನು. ಯಾರಾದರೂ ನಿಜ ಸಂಗತಿಯನ್ನು ಕಂಸನಿಗೆ ಹೇಳಿ ಕೊಟ್ಟರೆ ಹೇಗಾಗುವುದೊ? ವಸುದೇವನಿಗಿಂತ ನಂದನಿಗೆ ಭಯವು ಹೆಚ್ಚು, ಅವನ ಬಳಿಯಲ್ಲಿ ವಸುದೇವನ ಇಬ್ಬರೂ ಪುತ್ರರು ಇರುವರಷ್ಟೆ. ಕಂಸನು ಇವೇ ತನ್ನನ್ನು ಕೊಲ್ಲುವ ಎರಡು ಬಾಣಗಳು ಎಂದು ಎಣಿಸದೆ ಇರುವನೆ? ಇದಕ್ಕಾಗಿ, ನಂದನು ಆ ರಾಜ್ಯವನ್ನು ಬಿಡುವುದು ಉತ್ತಮ ವೆಂದು, ಯಶೋದೆಯೊಡನೆ ರೋಹಿಣಿಯು ಇದ್ದ ವ್ರಜಕ್ಕೇ ತೆರಳಿದನು. ರೋಹಿಣಿಗೆ ಕಂಸ-ವಸುದೇವರೊಳಗೆ ಇರುವ ಹಗೆಯನ್ನು ವಿವರಿಸಿದನು. ಮಗನು ಬದುಕಿದರೆ ಸಾಕೆಂದು ರೋಹಿಣಿಯು ತನ್ನ ಮಗನನ್ನು ನಂದನ ವಶಕ್ಕೆ ಕೊಟ್ಟಳು. ಮುದ್ದಿನ ಗಿಣಿ ತನ್ನ ತಾಯಿಯ ಗೂಡನ್ನು ಬಿಟ್ಟು, ಸಾಕುತಾಯಿಯ ಗೂಡನ್ನು ಸೇರಿತು. ನಂದನು ವ್ರಜದಲ್ಲೆ ನೆಲೆಮಾಡಿಕೊಂಡನು. ಯಶೋದೆಯು ದೇವಕಿಯ ಮಗನನ್ನೂ ರೋಹಿ ಣಿಯ ಮಗನನ್ನೂ ತನ್ನ ಮಕ್ಕಳೆಂದೇ ಅಕ್ಕರೆಯಿಂದ ಸಲಹಿದಳು. ಇವರಿಬ್ಬರೂ ನಂದ-ಯಶೋದೆಯರ ಮಕ್ಕಳೆಂದೇ ಜನರು ತಿಳಿದರು. ಮಕ್ಕಳಿಬ್ಬರೂ ನಂದ-ಯಶೋದೆಯರೆ ತಮಗೆ ತಂದೆ ತಾಯಿಗಳೆಂದು ತಿಳಿದರು.

32. ಇವರೆಲ್ಲರೂ ಸುಖದಿಂದ ಇದ್ದರು. ಆದರೆ ವಸುದೇವನೂ ದೇವಕಿಯೂ ಇನ್ನೂ ತಮ್ಮ ಮನೆಯಲ್ಲಿ ಕಂಸನಿಗೆ ಸೆರೆಯಾಗಿಯೆ ಇರಬೇಕಾಯಿತು.

# ೨. ಬಾಲಗ್ರಹ.

1. ಮುಂದೆ ಹೆಸರ್ಗೊಂಡವರ ಬಾಲ್ಯವು ಆಶ್ಚರ್ಯಕರವಾದುದು. ಅವರು ಮಗುವುತನದಲ್ಲಿಯೆ ತಮ್ಮ ಬುದ್ಧಿವಂತಿಕೆ ಯೋಗ್ಯತೆ ಮುಂತಾದು ವನ್ನು ತೋರಿಸುವರು. ಅವರ ಬಾಲ್ಯದಲ್ಲಿ ಅವರಿಗೆ ನಾನಾ ಕಷ್ಟಗಳು ಸಂಭವಿಸುವುದುಂಟು. ಅವುಗಳಿಂದ ಅವರು ಹೇಗೋ ಪಾರಾಗುವರು. ವಿಪತ್ತುಗಳೇ ಅವರ ಜತೆಯಲ್ಲಿ ಯಾವಾಗಲೂ ಇರುವಂತೆ ತೋರುವುದು. ಕೃಷ್ಣನಿಗೆ ಬಾಲ್ಯ ಪ್ರಾಯದಲ್ಲಿ ಅನೇಕ ಸಂಕಟಗಳು ಉಂಟಾದುವು. ಎಲ್ಲ ಕಂಟಕಗಳಿಂದ ಅವನು ಯಾವ ಹಾನಿಯನ್ನೂ ಪಡದೆ ಬಳೆದನು.

ಅವನು ದೊಡ್ಡವನಾದ ಬಳಿಕ, ಅವನು ಮಹಾಪುರುಷನೆಂದು ಹೆಸರು ಪಡೆದಾಗ, ಅವನ ಬಾಲ್ಯದ ಕಂಟಕಗಳನ್ನು ಅವನೇ ತಾನೆ ದೂರಗೊಳಿಸಿದ ನೆಂದು ಜನರು ಆಡುತಿದ್ದರು. ಹೆಚ್ಚಿನ ಕೀರ್ತಿಪಡೆದವರು ಭಗವಂತನ ಅಂಶವುಳ್ಳವರೆಂದು ನಾವು ನಂಬುವುದಿಲ್ಲವೆ? ಅದು ಕಾರಣವೆ, ಬಾಲ್ಯದ ಪೀಡೆಗಳನ್ನು ಅವನು ಭಗವಂತನ ಅಂಶವಾದುದರಿಂದಲೆ ನಿವಾರಣೆಮಾಡಿ ದನೆನ್ನುವುದು ಹೆಚ್ಚಿನ ಮಾತಾಗಿಲ್ಲ. ಅವನ ಬಾಲ್ಯದಲ್ಲಿ ಅವನು ಅನು ಭವಿಸಿದುದು ಎಲ್ಲವೂ ಅದ್ಭುತವೆ.

2. ಕೃಷ್ಣನು ತೀರ ಚಿಕ್ಕ ಕೂಸು. ನಾಗಾಲಿಂದಲೂ ಅವನು ಹಿಂದೆ ಮುಂದೆ ಹೋಗಲಾರನು. ಯಶೋದೆಯು ಅವನನ್ನು ಯಾವಾ ಗಲು ಎತ್ತಿಕೊಂಡೇ ಇರುವಳು. ಇದರಿಂದ, ಅವನನ್ನು ಸ್ವಲ್ಪ ಕೆಳಗಿಟ್ಟ ಕೂಡಲೆ ಅವನು ಬಲವಾಗಿ ಅಳುತಿದ್ದನು. ಆದರೆ ಅವನನ್ನು ಕಟ್ಟಿಕೊಂಡೇ ಮನೆಗೆಲಸವನ್ನು ಮಾಡಲಾಗುತ್ತಿದೆಯೆ? ಅವಳಲ್ಲದೆ ಮನೆಗೆಲಸವನ್ನು ಇನ್ನಾರು ಮಾಡುವರು? ಒಂದು ದಿನ, ಅವಳು ಬಾವಿಯಿಂದ ನೀರನ್ನು ತರಲು ಹೋದಳು. ಮಗನನ್ನು ತೋಳಲ್ಲಿ ಹಿಡಿದುಕೊಂಡು ನೀರನ್ನೆತ್ತಲು ಆಗುವುದಿಲ್ಲ. ಅವನು ಅವಳ ತೋಳುಗಳಲ್ಲೆ ನಿದ್ದೆಹೋಗಿದ್ದನು. ಅದೇ ಸಮಯವೆಂದು ಅವಳು ಅವನನ್ನು ಅಲ್ಲಿ ಇದ್ದ ಒಂದು ಹಳೆಯ ಗಾಡಿಯ ಕೆಳಗೆ ಮೆಲ್ಲನೆ ಮಲಗಿಸಿದಳು. ನೀರು ತರಲು ಹೋದಳು. ಗಾಡಿ ಯಲ್ಲಿ ತುಂಬಾ ಮಡಕೆಗಳು ಇದ್ದುವು; ಹಾಲು, ಮೊಸರು, ಬೆಣ್ಣೆ ಮೊದಲಾದುವನ್ನು ಅವುಗಳಲ್ಲಿ ತುಂಬಿಸಿ, ನಂದನು ಆ ಗಾಡಿಯನ್ನು ಊರಿಗೆ ನಡೆಯಿಸಿ ಬೇಕಾದುದನ್ನು ಮಾರಿ ಮರಳುವನು. 'ನೀರು ತರುವುದಕ್ಕೆ ಹೆಚ್ಚು ಸಮಯಬೇಡ. ನಾನು ಹೋಗುವೆನು, ಬರುವೆನು ಅಷ್ಟೆ; ಮಗು ಇಲ್ಲಿ ಗಾಡಿಯ ನೆರಳಲ್ಲಿ ಮಲಗಲಿ' ಎಂದು ಅವಳು ನಡೆದಳು.

3. ಎರಡು ಕೊಡಗಳನ್ನು ಒಂದರ ಮೇಲೆ ಇನ್ನೊಂದಾಗಿ ಅವಳು ತನ್ನ ತಲೆಯ ಮೇಲೆ ಇರಿಸಿಕೊಂಡು ಯಮುನಾ ನದಿಯ ಕಡೆಗೆ ನಡೆದಳು. ನೀರನ್ನೆತ್ತಿಕೊಂಡಳು. ಹಾಗೆಯೆ ಕೊಡಗಳನ್ನು ತಲೆಯ ಮೇಲೆ ಮಡಗಿ, ಮನೆಗೆ ಮರಳಿದಳು. ಮರಳಿ ಬಂದು ನೋಡುವಾಗ, ಗಾಡಿಯ ಮೇಲೆ ಇದ್ದ ಮಡಕೆಗಳು ಒಡೆದು ನುಚ್ಚುನೂರಾಗಿವೆ! ಹಾಲೂ, ಮೊಸರೂ

ದಾರಿಯ ಮೇಲೆ ಚೆಲ್ಲಿಕೊಂಡು ಹರಿದಿದೆ! ಮೊಸರು ಇಂಗಿ ಕೆಸರಾಗಿದೆ! ಗಾಡಿಯು ಮುರಿದು, ಗಾಲಿಗಳು ತುಂಡುತುಂಡಾಗಿ ಬಿದ್ದಿವೆ! 'ಮಗುವಿಗೆ ಏನಾಯಿತೊ?' ಎಂದು ಅವಳು ಕೂಗಿದಳು. ಓಡಿ, ಗಾಡಿ ಇದ್ದಲ್ಲಿಗೆ ಬಂದಳು. ತುಂಬ ಭಾರಹೇರಿಸಿದ ಗಾಡಿಯು ಅಡಿಯಲ್ಲಿ ಒಂದು ಮಗು ಮಲಗಿರಲು, ಆ ಗಾಡಿಯು ಹೀಗಾಗಿ ಮುರಿದರೆ, ಯಾವ ತಾಯಿಯು ತಾನೆ ಹೆದರಳು? ಆದರೆ, ಯಶೋದೆಯು ಭಯಪಡಲು ಕಾರಣವಿರಲಿಲ್ಲ. ಮಗು ಅಲ್ಲೆ ಎಚ್ಚತ್ತು, ಕಣ್ತೆರೆದು, ಮಿಟಿ-ಮಿಟಿ ನಾಲ್ಕೂ ಕಡೆ ನೋಡುತಿದ್ದಿತು. ಕೈಕಾಲುಗಳನ್ನು ಬೀಸುತಿದ್ದಿತು. ಮೌನವಾಗಿದ್ದಿತು. ಯಶೋದೆಯು ಮಗುವನ್ನು ತ್ವರೆಯಿಂದ ಎತ್ತಿಕೊಂಡು ಅಪ್ಪಿಕೊಂಡು ಮುದ್ದಾಡಿದಳು. ಅದರ ಮೈಸವರಿದಳು. ತಲೆಸವರಿದಳು. ದೂಳು ಪೂಸಿದಳು. ಮಗು ಹಿಂದೆ ಇದ್ದಂತೆಯೆ ಸುಖವಾಗಿದ್ದಿತು. ಏನೂ ಅಪಾಯ ವಿರಲಿಲ್ಲ. ಅವಳ ಮನಸ್ಸು ಈಗ ಸಮಾಧಾನಗೊಂಡಿತು. ಅವಳ ಎದೆ ಹಾರುವುದು ಸರಿಯಾಯಿತು. ಮಗುವನ್ನು ಬಾರಿಬಾರಿಗೂ ಮುದ್ದಿಟ್ಟು ಮಾತಾಡಿಸಿದಳು. ಮೊದಲು ಆಡುತಿದ್ದ ಮಗು, ಈಗ ಒಂದನ್ನೂ ಆಡದೆ ಮಿಟಿ-ಮಿಟಿ ನೋಡಿತು.

4. ಅವಳಿಗೆ ಮತ್ತೂ ಇನ್ನೊಂದು ಬಗೆಯ ಭಯವಾಯಿತು. ನಂದನು ಮನೆಗೆ ಬಂದು, ಮುರಿದು ಬಿದ್ದ ಗಾಡಿಯನ್ನೂ ಹರಿದು ಹೋದ ಹಾಲು ಮೊಸರನ್ನೂ ಕಂಡರೆ, ಏನೆನ್ನುವನೊ! ಇದೊ, ಅವನೆ ಬರುತಿರುವ ನಲ್ಲ! ದಾರಿಯಲ್ಲಿಯೆ ಕೆಲವು ಹುಡುಗರು,—'ಒಹ್ಯೊ! ಬೇಗನೆ ಮನೆಗೆ ನಡೀರಿ. ನಿಮ್ಮ ಹುಡುಗನು ಹಾಲುಮೊಸರನ್ನೆಲ್ಲ ಚೆಲ್ಲಿರುವನು!' ಎಂದು ಅವನಿಗೆ ಹೇಳಿದರಲ್ಲ! ನಂದನ ಪ್ರಾಣವೇ ಹಾರಿದಂತಾಯಿತು.

5. ಅವನು ಮನೆಗೆ ಬಂದನು. ಹುಡುಗರು ಹೇಳಿದ ಮಾತು ನಿಜ. ನಂದನು ಕಣ್ಣೀರು ಮಿಡಿದನು. ಅಹ! ಇಷ್ಟೆಲ್ಲ ಹಾಲುಮೊಸರು ಹಾಳಾಯಿತೆ? ಯಶೋದೆಯು ಅಲ್ಲಿಗೆ ಓಡಿಬಂದಳು. ಕೃಷ್ಣನು ಅವಳ ತೋಳಿನಲ್ಲಿ ಆಗಲೂ ಅರೆನಿದ್ದೆಯಲ್ಲಿ ಒರಗಿರುವನು. 'ದನ ಎತ್ತು ಒಂದೂ ಇಲ್ಲಿ ಇಲ್ಲದೆ, ಈ ಗಾಡಿಯನ್ನು ಹೀಗೆ ಯಾರು ಮುರಿದು ಹಾಕಿದರು?' ಎಂದು ನಂದನು ಕೇಳಿದನು. ಅಲ್ಲಿ ತಮಾಸೆ ನೋಡಲು ಕೂಡಿದ್ದ ಕೆಟ್ಟ ಮಕ್ಕಳು 'ಈ ತೋಳಿನಲ್ಲಿರುವ ಮಗುವೆ ಗಾಡಿಯನ್ನು ಮಗುಚಿಹಾಕಿ,

ಎಲ್ಲವನ್ನೂ ಕೆಡೆದು ಬೀಳಿಸಿ, ಒಡೆದುಹಾಕಿ, ಮಡಕೆಗಳನ್ನು ಚೂರು ಚೂರು ಮಾಡಿತು. ನಾವು ಆಗಲೆ ಹೇಳಲಿಲ್ಲವೆ? ನೀವು ನಂಬುವುದಿಲ್ಲ ವಾದರೆ ಯಾರೇನು ಮಾಡಬಹುದು?' ಎಂದು ಹೇಳಿದರು. ನಂದನಿಗೆ ಯಶೋದೆಯು ಎಲ್ಲವನ್ನೂ ವಿವರಿಸಿದಳು. ಮಗು ಉಳಿದುದೇ ಯಥೇಷ್ಟ ವೆಂದು, ನಂದನು ಮಾತೆತ್ತದೆ, ಸಂತೋಷದಿಂದ ಸುಮ್ಮನಿದ್ದನು.

6. ಆದರೆ, ಈ ಸಂಗತಿ ಮಾತ್ರ ಊರಲ್ಲೆಲ್ಲ ಹರಡಿತು. ಮಕ್ಕಳು ಹೇಳಿದರೆ ನಂಬುವವರಾರು? ಇಡೀ ಗಾಡಿಯನ್ನು ಈ ರೀತಿ ಮುರಿದು ಪುಡಿಮಾಡಬೇಕಾದರೆ, ರಾಕ್ಷಸರೇ ಮಾಡಬೇಕು. ಚಿಕ್ಕ ಮಗುವಿಗೆ ಹಿಡಿದ ಬಾಲಗ್ರಹದ ದೆಸೆಯಿಂದ ಅದು ಗಾಡಿಯ ರೂಪದಿಂದ ಬಂದಿರಬೇಕು. ಮಗುವು ಅದನ್ನು ಕೊಂದಿರಬೇಕು,—ಎಂದು, ಊರವರು ಗಾಡೀರಾಕ್ಷಸ ನನ್ನು (ಶಕಟಾಸುರನನ್ನು) ಬಾಲಕೃಷ್ಣನು ಕೊಂದನೆಂದರು.

7. ಕೆಲವು ದಿನಗಳ ತರುವಾಯ, ಕೃಷ್ಣನು ಸುಖವಾಗಿರುತಿರಲು, ವ್ರಜದಲ್ಲೆಲ್ಲ ಮಾರೀಭಯವು! ನೂರು ನೂರು ಮಕ್ಕಳು ಸತ್ತವು. ರೋಗವೇನೆಂದು ಒಬ್ಬರಿಗೂ ತಿಳಿದಿಲ್ಲ. ಪ್ರತಿಯೊಬ್ಬ ತಾಯಿ ತನ್ನ ಮಗು ವನ್ನು ಬಲು ಜತನದಿಂದ ಪಾಲನೆಮಾಡುತಿದ್ದಳು. ಯಾವುದೊ ಒಂದು ಕೆಟ್ಟ ಗ್ರಹದ ಅಥವಾ ರಾಕ್ಷಸನ ದೆಸೆಯಿಂದ ಹೀಗಾಗುತ್ತಿದೆ ಎಂದು ಜನರು ಆಡಿಕೊಂಡರು.

8. ಆಗ ನಡುರಾತ್ರಿಯಾಗಿದೆ. ನಂದ-ಯಶೋದೆಯರು ಮಗುವನ್ನು ತೂಗಿರುವರು. ಇನ್ನು ನಿದ್ದೆಯ ಹೊತ್ತು. ಭಯಂಕರವಾದ ಹುಲಿಯ ಆರ್ಭಟೆ ಕೇಳಿಸಿತು. ಎಲ್ಲರೂ ಎದ್ದು ಕೂತರು. ಮನೆಯಲ್ಲಿ ದೀಪ ಉರಿಯುತ್ತಿದೆ. ಒಬ್ಬ ಹೆಂಗಸು ಆ ಮನೆಯೊಳಕ್ಕೆ ಬಂದಳು. ಚಿಕ್ಕ ದೊಂದು ಬೆಟ್ಟದ ಗಾತ್ರವುಳ್ಳ ಮೈಯವಳು! ಅವಳನ್ನು ನೋಡಿ, ನಂದ-ಯಶೋದೆಯರು ಭಯದಿಂದ ನಡುಗಿದರು. ಮಗುವನ್ನು ಎತ್ತಿಕೊಳ್ಳೋಣ ಎಂದು ಅವರು ಎನ್ನುವಷ್ಟರಲ್ಲಿ, ಆ ಹೆಂಗಸು ತಾನೆ ಮಗುವನ್ನು ಕಸು ಗೊಂಡಳು. ಅದಕ್ಕೆ ತಾನೆ ಎದೆಹಾಲು ಉಣಿಸತೊಡಗಿದಳು. ಕೆಟ್ಟ ಗ್ರಹ ಗಳು ಈ ರೀತಿ ಹೆಂಗಸರಂತೆ ರೂಪಧರಿಸಿ ಮಕ್ಕಳನ್ನು ಕೊಲ್ಲುವುವು ಎಂದು ಆ ಜನರ ವಿಶ್ವಾಸವಿದ್ದಿತು. ಅಂತಹ ಹೆಂಗಸರು ಹಾಲಿನ ಬದಲಾಗಿ ವಿಷ ಊಡುವರು ಎನ್ನುವರು. ನಂದ-ಯಶೋದೆಯರು ಇದನ್ನು ನೋಡಿ ಅತ್ತುಕೊಂಡು ಕಂಗೆಟ್ಟರು.

9. ಫಕ್ಕನೆ 'ಸತ್ತೆನೆಲಾ ಸತ್ತೆನು!' ಎಂದು ಆ ಹೆಂಗಸು ಚೀರಿದಳು. ಮಗುವನ್ನು ದೂರವಿಟ್ಟಳು. ಮಗು ನಗುತಿದ್ದಿತು. ಮುಂದೆ ಏನೂ ತಡವಾಗದೆ, ಹೆಂಗಸು ಮಡಿದಳು. ನೋಡಿದರೆ, ಅವಳ ಎದೆಗೆ ಗಾಯ ವಿದೆ. ನೆತ್ತರು ಗಾಯದಿಂದ ಸೂಸುತ್ತಿದೆ. ನೆರೆಹೊರೆಯು ಮುಂದಿ ಸೇರಿತು. ಬಾಲಕೃಷ್ಣನು ಈ ರಾಕ್ಷಸಿ (ಪೂತನಿ) ಯ ಹಾಲಿನೊಡನೆ ಅವಳ ಪ್ರಾಣವನ್ನೂ ಹೊರಕ್ಕೆಳೆದನೆಂದು ಜನರೆಲ್ಲ ಹೇಳಿದರು.

10. ಮತ್ತೊಂದು ಬಾರಿ, ದೊಡ್ಡದೊಂದು ಹಕ್ಕಿಯು ಹಾರಿ ಬಂದು ಮಗುವನ್ನು ಎತ್ತಿಕೊಂಡು ಹೋಗಲು ಪ್ರಯತ್ನ ಮಾಡಿತು. ಗಿಡುಗ ಜಾತಿಯ ದೊಡ್ಡ ಹಕ್ಕಿಗಳು ಎಳೆಯ ಮಕ್ಕಳನ್ನು ಎತ್ತಿಕೊಂಡು ಕೊಂದು ತಿನ್ನುವುದಿದೆ. ನಂದ-ಯಶೋದೆಯರು ಗೋಳಾಡಿದರು. ಮಗುವು ಹಕ್ಕಿಯನ್ನು ಬಿಗಿಹಿಡಿದು ಕೊಂದಿಕ್ಕಿತು.

11. ಇನ್ನೊಮ್ಮೆ ಭಯಂಕರವಾದ ಸುಳಿಗಾಳಿಯು ಬೀಸಿ, ಈ ಮಗುವನ್ನು ಎತ್ತಿಕೊಂಡು ಹೋಯಿತು. ತಾಯಿತಂದೆಯರು ಭಯಂಕರ ವಾಗಿ ಕೂಗಿದರು. ಸ್ವಲ್ಪ ಹೊತ್ತಿನ ಬಳಿಕ ನೋಡಿದರೆ, ಮಗುವು ಇದ್ದಲ್ಲೆ ಶಾಂತವಾಗಿ ಇದೆ. ಇದೂ ಬಾಲಗ್ರಹದ ಬಾಧೆಯೆಂದು ದೇವರಿಗೆ ಹರಕೆ ಸಲ್ಲಿಸಿದರು.

12. ಕೃಷ್ಣನು ಇನ್ನೂ ಮಗುವೆ, ಆದರೆ ಅತ್ತಿತ್ತ ಕುದುರೆಯಂತೆ ಅಂಬೆಗಾಲಿಕ್ಕುವನು. ಅವನ ವಯಸ್ಸು ಸುಮಾರು ನಾಲ್ಕು ವರ್ಷಗಳಾಗಿರ ಬಹುದು. ಮಗುವೆ ಆದರೂ ಸುಮ್ಮನಿರದೆ, ನಾನಾ ರೀತಿಯಾಗಿ ಓಡಾಡುತ್ತಿದೆ. ಕಣ್ಣುಮರೆಯಾದ ಕೂಡಲೆ ಎತ್ತಲೋ ನಡೆಯುತ್ತಿದೆ. ಬಾರಿಬಾರಿಗೂ ಕರೆದರೂ ಸುಮ್ಮನಿದ್ದು ಆಡುತ್ತಿದೆ. ತಾಯಿಗೆ ಇದು ಉಪದ್ರವಾಯಿತು. ಮನೆಯಲ್ಲಿ ಅವಳೊಬ್ಬಳೇ ಇರುವವಳು. ಮನೆ ಕೆಲಸ ತುಂಬಾ ಇದೆ. ಕೃಷ್ಣನ ಆಡುಗಾರಿಕೆಯಿಂದ ಯಾವ ಕೆಲಸಕ್ಕೂ ಅವಳು ಕೈಹಚ್ಚಲು ಬರುವುದಿಲ್ಲ. ಅವಳು ಒಂದು ಕ್ಷಣ ಅತ್ತ ನೋಡಿ ದರೆ, ಕೃಷ್ಣನು ಎತ್ತಲೋ ಮಾಯವಾಗುವನು. ಇದಕ್ಕಾಗಿ ಅವಳು ಸಿಟ್ಟಾದಳು. ಕೃಷ್ಣನನ್ನು ಹಿಡಿದುಕೊಂಡು, ಅವನ ಸೊಂಟಕ್ಕೆ ಹಗ್ಗ ವನ್ನು ಬಿಗಿದು, ಅದನ್ನು ಒಂದು ಒರಳಿಗೆ ಕಟ್ಟಿಕ್ಕಿದಳು. ಸಿಡಿಮಿಡಿ

ಯಾಗಿ ಆ ಬಾಲಕನು ಸುಮ್ಮನಿರುವನೆ? ಚಡಪಡಿಸಿದನು. ಸ್ವಲ್ಪ ಹೊತ್ತಿನ ಮೇಲೆ ಅವನ ಸದ್ದೇ ಇಲ್ಲವಾಯಿತು. ತಾಯಿ ಅಲ್ಲಿಂದ ಎದ್ದು ಮನೆಗೆಲಸಕ್ಕೆ ನಡೆದಳು.

13. ಕೃಷ್ಣನು ತಾಯಿಯನ್ನು ಕಾಣಲಿಲ್ಲ. ಒರಳನ್ನು ಸೆಳೆದು ಕೊಂಡೇ ಅವನು ಓಡಾಡಿದನು. ತಾಯಿ ಎಲ್ಲಿರಬಹುದು ಎಂದು ಅವನು ಮನೆಯ ಅಂಗಳಕ್ಕೂ ಇಳಿದನು.

14. ಯಶೋದೆಯು ಮರಳಿದಾಗ ಮಗುವನ್ನು ಕಾಣಲಿಲ್ಲ. ಒರಳು ಇದ್ದಲ್ಲಿಗೆ ಬಂದು ಹುಡುಕಿದಳು. ಅವನು ಅಲ್ಲಿ ಇಲ್ಲ. ಮಗು ಎಲ್ಲಿರಬಹುದು ಎಂದು ಅವಳು ಮನೆಯ ಅಂಗಳಕ್ಕೂ ಇಳಿದಳು.

15. ಅಲ್ಲಿ ನೂರಾರು ಜನರು ಸೇರಿದ್ದರು! 'ಇದು ಮಗುವೊ, ಭೂತವೊ?' ಎಂದು ಅವರು ಮಾತಾಡುತಿದ್ದರು. ಎರಡು ಮರಗಳು ಅಲ್ಲಿ ಬೆಳೆದು ಇದ್ದುವು. ಮಗು ಎಳೆದು ತಂದ ಒರಳು ಅವುಗಳ ನಡುವೆ ಸಿಲುಕಿ, ಆ ಮರಗಳೆರಡೂ ಬೇರು ಕಿತ್ತು ಬಿದ್ದುವು! ಎಂತಹ ಭಯಂಕರ ಮಗು!

16. ತಾಯಿ ಮಗುವನ್ನು ಎತ್ತಿಕೊಂಡಳು. ಅವನು ನಕ್ಕನು. ಈ ಸುದ್ದಿಯೂ ನಂದನ ಕಿವಿಗೆ ಮುಟ್ಟಿತು. ಅವನಿಗೆ ಹೆದರಿಕೆ ಬಹಳ. ಮಿತ್ರನ ಮಗು, ನಾನಾ ಆಪತ್ತುಗಳನ್ನು ಅನುಭವಿಸುವುದಲ್ಲ! ಅದಕ್ಕೆ ಎಂತಹ ಬಾಲಗ್ರುಹದ ಪೀಡೆ ಹಿಡಿದಿದೆ! ಇನ್ನು ವ್ರಜಭೂಮಿಯನ್ನು ಬಿಡುವುದೆ ಉತ್ತಮವೆಂದು ಅವನು ಎಣಿಸಿದನು. ಯಶೋದೆಯೂ ಅದೇ ಸೊಗಸೆಂದಳು.

17. ಅವರಿಬ್ಬರೂ ಇನ್ನು ವೃಂದಾವನಕ್ಕೆ ಹೋಗಲು ನಿಶ್ಚಯ ಮಾಡಿದರು. ಅದು ಎಂತಹ ಸುಂದರ ಸ್ಥಾನವು! ಒಳ್ಳೇ ಮುಹೂರ್ತ ವನ್ನು ನೋಡಿ, ಅವರು ಮಗುವಿನೊಡನೆ ವೃಂದಾವನಕ್ಕೆ ತೆರಳಿದರು. ಆಗ ಕೃಷ್ಣನ ವಯಸ್ಸು ಏಳು ವರ್ಷ ಮಾತ್ರ. ಕೃಷ್ಣನು ವ್ರಜದಿಂದ ಹೋದ ಬಳಿಕ ಅಲ್ಲಿ ಹುಲಿಗಳ ಕಾಟವು ಹೆಚ್ಚಿತೆಂದು ಜನರು ಹೇಳು ತಿದ್ದರು. ಕೃಷ್ಣನು ಅಲ್ಲಿ ಇದ್ದಷ್ಟು ಕಾಲ ಹುಲಿಗಳ ಬಾಧೆ ಇದ್ದಿಲ್ಲ ವೆಂಬುದು ನಿಜ.

# ೩. ವೃಂದಾವನ.

## ಕಾಳೀಯ.

1. ನಂದನೂ ಯಶೋದೆಯೂ ಈಗ ವೃಂದಾವನಕ್ಕೆ ಬಂದಿರುವರು. ಇದು ಅವರಿಗೆ ಹೊಸ ಊರು; ಆದರೂ ಯಾವ ಅನನುಕೂಲತೆಯೂ ಇದ್ದಿಲ್ಲ. ಬಲರಾಮನೂ ಕೃಷ್ಣನೂ ಈಗ ಸ್ವಲ್ಪ ಬಳೆದಿರುವರು. ಅವರಿಬ್ಬರೂ ಚೆನ್ನಾಗಿ ಆಡುತ್ತ ಓಡುತ್ತ ಇರಬಲ್ಲರು. ಅವರಿಬ್ಬರೊಳಗೆ ಸ್ನೇಹವು ಬಹಳ. ಇಬ್ಬರೂ ಒಂದೇ ಕಡೆ ಇರುವರು. ಒಟ್ಟಾಗಿ ತಿರುಗುವರು. ನಂದನ ದನಗಳನ್ನು ಅವರಿಬ್ಬರೂ ಮೇಯಿಸುವರು. ಸಂಜೆಯ ಹೊತ್ತಿಗೆ ಮನೆಗೆ ಅವುಗಳನ್ನು ಮರಳಿಸುವರು.

2. ಒಂದು ದಿನ ಹುಲ್ಲುಗಾವಲಲ್ಲಿ ದನಗಳು ಮೇಯುತಿದ್ದುವು, ಇಬ್ಬರೂ ಹುಡುಗರು ಅವುಗಳ ಜತೆಯಲ್ಲಿ ಇದ್ದರು. ಬಿಸಿಲಿನ ತಾಪವು ಬಹಳವಾಗಿದ್ದಿತು. ಬಲರಾಮನು ಒಂದು ಮರದ ನೆರಳಲ್ಲಿ ನಿದ್ದೆಹೋಗಿದ್ದನು. ಕೃಷ್ಣನ ಕಣ್ಣಿಗೆ ನಿದ್ದೆ ಹತ್ತದು. ಅವನು ಗೋವಳ ಹುಡುಗರೊಡನೆ ಬೈಲಲ್ಲಿ ಅತ್ತಿತ್ತ ಓಡಾಡುತಿದ್ದನು. ಓಡುತೋಡುತ್ತ ಅವರು ದೂರಕ್ಕೆ ಸರಿದರು. ಆ ಹುಡುಗರು,—'ಕೃಷ್ಣಾ, ಅತ್ತ ಹೋಗಬೇಡ. ಅಲ್ಲಿ ಒಂದು ದೊಡ್ಡ ಹಾವು ಇದೆ. ಅದು ಮನುಷ್ಯರನ್ನು ಹಿಡಿದುಕೊಂಡು ನುಂಗುವುದಂತೆ!' ಎಂದರು.

3. ಕೃಷ್ಣನಲ್ಲಿ ಕುತೂಹಲ ಬಹಳ. ಅವನಿಗೂ ಅದೇ ಬೇಕಾಗಿದ್ದಿತು. ಒಂದೇ ಉಸಿರಲ್ಲಿ ಆ ದಿಕ್ಕಿಗೇ ಅವನು ಓಡಿದನು. ಅಲ್ಲಿ ದೊಡ್ಡದೊಂದು ಕೊಳ ಮಾತ್ರ ಇದ್ದಿತು. ತೀರದಲ್ಲಿ ನಾನಾ ಮರಗಳು. ಆದರೆ, ಅತ್ತ ಯಾವ ಪ್ರಾಣಿಯ ಸುಳಿದಾಟವೂ ಇದ್ದಿಲ್ಲ.

4. ಕೃಷ್ಣನು ಒಬ್ಬನೆ; ಅವನ ಬಳಿ ಯಾರೂ ಇಲ್ಲ; ಅವನಿಗೆ ಭಯವೂ ಹಿಡಿಯದು. ಅವನು ಮೆಲ್ಲನೆ ಒಂದು ಮರವನ್ನೇರಿ, ಅದರ ಮೇಲು ಕೊಂಬೆಯಿಂದ ನೀರಿಗೆ ಹಾರಿದನು. ಯಾವ ಸದ್ದೂ ಇಲ್ಲದ ಆ ವನದಲ್ಲಿ

ಅದೇ ಒಂದು ದೊಡ್ಡ ಶಬ್ದವುಂಟಾಯಿತು. ಕೆರೆಯ ನೀರು ಕದಡಿತು. ಕೃಷ್ಣನು ಈಜುತ್ತ ಈಜುತ್ತ ಕೆರೆಯಲ್ಲಿ ಬಲು ದೂರಕ್ಕೆ ಸಾರಿದನು.

5. ಆ ಮಡುವಿನಲ್ಲಿ ಇದ್ದ ಸರ್ಪವನ್ನು ಜನರು **ಕಾಳೀಯ** ಎಂದು ಕರೆಯುತಿದ್ದರು. ಯಾರೋ ನೀರಲ್ಲಿ ಬಿದ್ದರೆಂದು ಅದಕ್ಕೆ ತಿಳಿಯಿತು. ತಿಳಿದ ಕೂಡಲೆ, ಅದು ತನ್ನ ಹೆಡೆ ಬಿಡಿಸಿಕೊಂಡು, ತನಗೆ ಆಹಾರ ಸಿಕ್ಕಿತೆಂದು ವೇಗವಾಗಿ ಅಲ್ಲಿಗೇ ಬಂತು. ಅದರ ಸಂಗಡ ಆ ಮಡುವಿನಲ್ಲಿದ್ದ ಇತರ ಹಾವುಗಳೆಲ್ಲವೂ ಬಂದುವು. ಹಾವುಗಳು ಕೃಷ್ಣನನ್ನು ಬಾಲಗಳಿಂದ ಬಿಗಿದುವು. ಕೃಷ್ಣನು ಬೆದರಲಿಲ್ಲ. ಹಾವುಗಳು ಹತ್ತಿರ ಬರುವಂತೆ ಅವನು ಅಲ್ಲೆ ಮುಳುಗಿ, ನೀರೊಳಗಿಂದಲೆ ಈಜುತ್ತ ಬೇರೊಂದು ಕಡೆ ತಲೆಯೆತ್ತುವನು. ಅವನು ಹೋಗುವಂತೆ ಅವನನ್ನು ಹಿಂಬಾಲಿಸುತ್ತಲೆ ಹಾವುಗಳು ದಣಿದುವು. ಅವನು ಒಂದಕ್ಕೂ ಸಿಗಲಿಲ್ಲ. ಇದೊಂದು ಕೌತುಕವಾಯಿತು. ಕಾಳೀಯನು ಎಷ್ಟು ಪೇಚಾಡಿದರೂ ವ್ಯರ್ಥವೆ. ಅವನು ಬಾಯಿತೆರೆದು ಕೃಷ್ಣನನ್ನು ನುಂಗಲು ಎರಗುವಾಗಲೆ, ಕೃಷ್ಣನು ನೀರಲ್ಲಿ ಮುಳುಗಿ, ಬೇರೊಂದು ಕಡೆ ದೂರದಲ್ಲೇಳುವನು. ಹಾವಿಗೆ ನೀರು ನುಂಗಿದುದೇ ಲಾಭವಾಯಿತು. ಕಾಳೀಯನ ಆರ್ಭಟೆ ಬಲವಾಯಿತು; ಕೃಷ್ಣನ ಈಜಾಟವೂ ಪ್ರಬಲವಾಯಿತು. ಹೀಗೆ ಬಹಳ ಹೊತ್ತು ನಡೆಯಿತು.

6. ಕೃಷ್ಣನು ಬರಲಿಲ್ಲವೆಂದು ಅವನ ಸಂಗಾತಿಗಳು 'ಕೃಷ್ಣನನ್ನು ಕಾಳೀಯನು ನುಂಗಿದನಲ್ಲಾ!' ಎಂದು ಬೊಬ್ಬಿಟ್ಟು ಅತ್ತುಕೊಂಡರು.

7. ಸುತ್ತುಮುತ್ತಲಿನ ಜನರು ಅಲ್ಲಿಗೇ ಬಂದರು. ನಂದ-ಯಶೋದೆಯರು ಈ ದುಃಖದ ಸುದ್ದಿಯನ್ನು ಕೇಳಿ ಅಳುತ್ತಾ ಓಡಿಬಂದರು. ಬಲರಾಮನೂ 'ಕೃಷ್ಣಾ, ತಮ್ಮಾ!' ಎಂದು ಕೂಗುತ್ತ ಬಂದನು. ಕೃಷ್ಣನ ಸುತ್ತಲು ನೂರಾರು ಹಾವುಗಳು! ಕಾಳೀಯನು ಬಾಯಿತೆರೆದು ನುಂಗಲೇ ಎನ್ನುತ್ತಾನೆ!

8. ಮಡುವಿನ ದಡದ ಮೇಲೆ ನಿಂತು ಅಳುವವರು ಇನ್ನೆಷ್ಟು ಅಳಬಹುದು? ಅವರಿಗೆ ನಿರಾಶೆಯಾಯಿತು. ಬಲರಾಮನು,—ಅಪ್ಪಾ, ಅವ್ವಾ! ಅಳಬೇಡಿರಿ. ಕೃಷ್ಣನಿಗೆ ಈ ಹಾವುಗಳು ಏನೂ ಮಾಡಲಾರವು! ಯಾರೂ ಅಳಬೇಡಿರಿ. ನಾನು ಕೃಷ್ಣನನ್ನು ಈಗಲೆ ನೀರಿನಿಂದ ಎತ್ತಿ ತರುವೆನು. ನೋಡಿರಿ!' ಎಂದು ಹೇಳಿದನು.

9. ಬಳಿಕ ಬಲರಾಮನು,—'ತಮ್ಮಾ, ಬಾ! ಇತ್ತ ಬಾ! ಇಲ್ಲಿ ಅವ್ವನೂ ಅಪ್ಪನೂ ಅತ್ತು ಬೇಸತ್ತರು. ಬೇಗ ಬಂದು ಅವರನ್ನು ಸಂತವಿಡು. ಆದರೆ ನೀನು ಬರುವುದರೊಳಗೆ ಸರ್ಪಗಳ ವಂಶವನ್ನೇ ನಿರ್ಮೂಲಿಸು'—ಎಂದು ಕೃಷ್ಣನಿಗೆ ಕೂಗಿದನು.

10. ಕೃಷ್ಣನು ಬಲರಾಮನಿಗೆ ಅಚ್ಚುಮೆಚ್ಚಿನ ತಮ್ಮನಲ್ಲವೆ? ಕೆಲವು ಕ್ಷಣಗಳೊಳಗೆ ಕಾಳೀಯನನ್ನೆ ಹಿಡಿಯಲು ತೊಡಗಿದನು. ಹಾವುಗಳೆಲ್ಲ ಮುಕ್ಕಾಲುಪಾಲು ಜೀವತೊಲಗುವಷ್ಟು ದಣಿದಿದ್ದುವು. ಕೌಶಲದಿಂದ ಅವನು ಕಾಳೀಯನ ಜೆಡೆಯನ್ನು ಕೆಳಕ್ಕೇ ಹಿಡಿದು ಒತ್ತಿದನು. ಕಾಲಿಂದ ಅದನ್ನು ಒದೆವನು, ತಾನು ದೂರಸರಿವನು! ಪುನಹ ಒದೆದು, ದಡಕ್ಕೆ ಮುಟ್ಟಿದನು. ಕಾಳೀಯನ ಜೆಡೆಯನ್ನು ಕೆಳಕ್ಕೆ ಮಡಗಿ, ಅದರ ಮೇಲೆ ಕಾಲುಮೆಟ್ಟಿನಿಂತನು. ತಾನು ಸುಖವಾಗಿ ಇರುವೆನೆಂದು ತೋರಿಸಲು, ಗೋವುಗಳ ಪ್ರೀತಿಯ ತನ್ನ ಕೊಳಲನ್ನೂದಿದನು. ಇನ್ನು ಕಾಳೀಯನಲ್ಲಿ ಬಲವೇ ಇಲ್ಲದಂತಾಯಿತು. ಕೊನೆಯದೊಂದು ಬಾರಿ ಅದನ್ನು ಬಲವಾಗಿ ಒದ್ದು, ಮಡುವಿಗೆ ನೂಕಿದನು!

11. ಮಡುವಿನಲ್ಲಿ ಹಾವುಗಳೊಳಗೆ ಗಲಿಬಿಲಿ ಎದ್ದಿತು. ಹಾವುಗಳು ಮಡುವನ್ನು ಬಿಟ್ಟೋಡಿದುವು. ವೃಂದಾವನದಲ್ಲಿ ತುಂಬ ಆನಂದವಾಯಿತು. ಇದರಿಂದ ಎಷ್ಟೋ ಪಶು ಪಕ್ಷಿ ಜನರಿಗೆ ಪ್ರಾಣವುಳಿಯಿತಲ್ಲವೆ?

12. ನಂದನು ಬಲರಾಮನನ್ನು ಎತ್ತಿಕೊಂಡನು; ಯಶೋದೆಯು ಕೃಷ್ಣನನ್ನು ಎತ್ತಿಕೊಂಡಳು. ಜನರು ಅವರ ಸುತ್ತಲೂ ಕುಣಿದು ಕುಣಿದು ದಣಿದರು; ಆನಂದದಿಂದ ಕೊಳಲೂದಿ ಹಬ್ಬ ಮಾಡಿದರು.

## ಧೇನುಕ.

13. ಇನ್ನು ಬಲರಾಮನೂ ಕೃಷ್ಣನೂ ಸಿಕ್ಕಲ್ಲಿ ಅಡ್ಡಾಡಹತ್ತಿದರು. ನಂದ-ಯಶೋದೆಯರು ಹಾಗೆ ಹೋಗಕೂಡದೆಂದು ಅವರಿಗೆ ಎಷ್ಟು ಹೇಳಿದರು! ಯಾವುದನ್ನು ಮಾಡಬಾರದೆಂದು ಜನರು ಆಡುವರೊ, ಇವರು ಅದನ್ನೆ ಮಾಡಿನೋಡೋಣವೆನ್ನುವರು.

14. ವೃಂದಾವನದಲ್ಲಿ ಗೋವರ್ಧನ ಎಂಬುವ ಅದೊಂದು ಬೆಟ್ಟ ವಿದ್ದಿತು. ಅದರ ಉತ್ತರದಿಕ್ಕಿನಲ್ಲಿ ಯಮುನಾನದಿಯು ಹರಿಯುತಿರುವುದು. ಅದರ ತೀರದಲ್ಲಿ ದೊಡ್ಡದೊಂದು ತಾಲವನವಿದ್ದಿತು. ಆ ತಾಲವನದಲ್ಲಿ ಒಂದು ಜಾತಿಯ ಕುದುರೆಗಳಿದ್ದುವು. ಅವು ಕಾಡುಪ್ರಾಣಿಗಳಾಗಿದ್ದು, ಮನುಷ್ಯರನ್ನು ಬೇಟೆಯಾಡಿ, ಕೊಂದು ತಿನ್ನುತಿದ್ದುವು. ಅವುಗಳಿಗೆ ಹೆದರಿ, ಆ ವನದ ಕಡೆಗೆ ಯಾವನೂ ಹೋಗುತ್ತಿರಲಿಲ್ಲ.

15. ಒಂದು ದಿನ ತಿರುಗುತ್ತ ತಿರುಗುತ್ತ, ಬಲರಾಮನೂ ಕೃಷ್ಣನೂ ಅದೇ ತಾಲವನದ ಕಡೆಗೆ ಬಂದರು. ಅದರಲ್ಲಿ ಎಷ್ಟು ತಾಲವೃಕ್ಷಗಳು! ಕಣ್ಣಿಗೆ ಕಾಣುವಷ್ಟು ದೂರಕ್ಕೂ ಅವೇ ಮರಗಳು. ಬೆಳೆದು ಹಣ್ಣಾದ ತಾಲಫಲವನ್ನು ತಿನ್ನುವುದಕ್ಕೆ ಕೃಷ್ಣನ ನಾಲಗೆ ಒಸರಿತು. 'ಅಣ್ಣಾ, ಕೆಲವು ಹಣ್ಣುಗಳನ್ನು ಕಿತ್ತುಕೊಂಡು ಮನೆಗೆ ಒಯ್ದು ತಿನ್ನೋಣ' ಎಂದು ಅವನು ಬಲರಾಮನಿಗೆ ಹೇಳಿದನು. ಬಲರಾಮನು 'ಸೈ!' ಎಂದನು. ಎನ್ನುತ್ತಲೆ, ಅವನು ಒಂದು ಮರವನ್ನು ಹತ್ತಿದನು. ಒಂದೊಂದಾಗಿ ಹಣ್ಣುಗಳನ್ನು ಕಿತ್ತು ಕೆಳಬೀಳಿಸಿದನು. ಅವು ಬೀಳುವ ಶಬ್ದದಿಂದ ವನದಲ್ಲಿ ಪ್ರತಿಧ್ವನಿ ಉಂಟಾಯಿತು.

16. ಆ ವನದ ಅರಸು ಧೇನುಕವೆನ್ನುವ ಕುದುರೆ; ಹಣ್ಣುಗಳು ದೊಪ್ಪನೆ ಬೀಳುವ ಶಬ್ದವು ಅದರ ಕಿವಿ ಸೇರಿತು. ಎಲ್ಲ ಕುದುರೆಗಳೂ ಅದೇ ಸದ್ದನ್ನು ಕೇಳಿದುವು. ಎಲ್ಲವೂ ಆ ಮರದ ಕಡೆಗೇ ಬಂದುವು. ಕೃಷ್ಣನು ಹಣ್ಣುಗಳನ್ನು ಕೂಡಿಸುತಿದ್ದನಲ್ಲವೆ? ಅವು ಕೃಷ್ಣನನ್ನು ಕಂಡು, ಅವನನ್ನು ಸುತ್ತುಮುತ್ತಿದುವು. ಬಲರಾಮನು ಅದನ್ನು ಕಂಡು ಕೆಳಕ್ಕಿಳಿದನು. ಧೇನುಕನು ತನ್ನ ಹಿಂಗಾಲನ್ನೆತ್ತಿ ಬಲರಾಮನ ಎದೆಗೆ ಒದೆಯಲು ತೊಡಗಿದನು. ಬಲರಾಮನ ಹೆಸರೇ ಬಲರಾಮನೆಂದಲ್ಲವೆ? ತನ್ನನ್ನು ಒದೆಯಲು ಎತ್ತಿದ ಕಾಲನ್ನೆ ಅವನು ಬಲವಾಗಿ ಹಿಡಿದುಕೊಂಡು, ಸುತ್ತು ಸುತ್ತು ತಿರುಗಿದನು. ಕುದುರೆಯು ಅವನು ಹೋದಂತೆ ಸುತ್ತು ತಿರುಗ ಬೇಕಾಯಿತು. ತಿರುಗಿ ತಿರುಗಿ ಅದು ನಿರಾಶೆಯಿಂದ ಬಿಡುಗಡೆ ಕಾಣದೆ ಇದ್ದಾಗ, ಅದರ ತಲೆ ತಾಲವೃಕ್ಷಕ್ಕೆ ಒಡೆವ ಹಾಗೆ ಬಲರಾಮನು ಸಾಧಿಸಿದನು. ತಲೆ ಒಡೆದು ಧೇನುಕನು ಮಡಿದನು. ಕುದುರೆಗಳು ಚದರಿದುವು. ಕೃಷ್ಣನು ಎಷ್ಟು ಕುದುರೆಗಳನ್ನು ಆ ಹಣ್ಣುಗಳನ್ನು ಹೊಡೆದೇ

ಕೊಂದನು! ಕುದುರೆಗಳು ವನವನ್ನು ಬಿಟ್ಟೋಡಿದುವು. ಅಂದಿನಿಂದ ಅದೇ ಪ್ರಮೋದವನ ಎಂಬ ಹೆಸರು ಪಡೆಯಿತು.

## ಪ್ರಲಂಬ.

17. ಕೃಷ್ಣನ ಆಟಕ್ಕೆ ತುದಿಮೊದಲಿಲ್ಲ. ಬಲರಾಮನೂ ಅವನೂ ಆಡುತ್ತ ಎತ್ತೆತ್ತಲೂ ತಿರುಗುತಿದ್ದರು. ಆಟವಾಡುವುದಕ್ಕೆ ಹುಡುಗರು ಹೊರಟರೆಂದರೆ, ಅವರ ಜತೆಗೆ ನೂರಾರು ಬೇರೆ ಹುಡುಗರು ಸೇರುವರಲ್ಲವೆ? ಹೀಗೆ ಕೃಷ್ಣನ ಒಡನಾಡಿಗಳ ಸಂಖ್ಯೆ ಹೇರಳವಾಗಿದ್ದಿತು. ಆ ಹುಡುಗರೊಳಗೆ ಪ್ರಲಂಬನೆಂಬ ಒಬ್ಬ ತಂಟೆಖೋರನಿದ್ದನು. ಯಾವ ಹುಡುಗನೂ ಅವನಿಗೆ ಸರಿಯಿರಲಿಲ್ಲ. ಬಹು ಬಲಶಾಲಿ. ಹೊರಬಯಲಲ್ಲಿ ಅಡ್ಡಾಡುತಿರುವ ಹುಡುಗರು ಬಲಶಾಲಿಗಳಾಗುವರಲ್ಲವೆ? ಬಲರಾಮನು ಮಾತ್ರ ಅವನಿಗೆ ಭಯಪಡುತಿರಲಿಲ್ಲ. ಪ್ರಲಂಬನು ತಂಟೆಗೆ ಮೊದಲು ಮಾಡಿದರೆ, ಕೂಡಲೆ ಬಲರಾಮನು ಅವನಿಗೆ ಇದಿರುನಿಲ್ಲುವನು. ಇದು ಪ್ರಲಂಬನಿಗೆ ಒಪ್ಪುತಿರಲಿಲ್ಲ. ಎಲ್ಲರನ್ನೂ ಓಡಿಸುವ ಪ್ರಲಂಬನನ್ನು ಬಲರಾಮನು ಜಾಡಿಸುವನು. ಬಲರಾಮನನ್ನು ಚೆನ್ನಾಗಿ ಬಡೆಯಬೇಕೆಂದು ಪ್ರಲಂಬನು ಮನಸ್ಸಿನಲ್ಲಿಯೆ ನಿಶ್ಚಯ ಮಾಡಿಕೊಂಡನು.

18. ಕೊನೆಗೆ ಹಾಗೆಯೆ ಆಯಿತು. ಪ್ರಲಂಬನು ಎಲ್ಲರಿಗೂ ಹೇಳಿಕೊಟ್ಟು 'ಒಂದು ದಿನ ಮಲ್ಲಯುದ್ಧದ ಆಟವಾಗಬೇಕೆ'ಂದನು. ಎಷ್ಟೋ ಬಾಲಕರು ಆ ಕುಸ್ತಿ ನೋಡಲಿಕ್ಕೆ ಬಂದರು. ಕೃಷ್ಣ ಬಲರಾಮರು ಅಲ್ಲೇ ಇದ್ದರಲ್ಲವೇ? ಬಲರಾಮನು 'ಕುಸ್ತಿ ಆಟವೇಕೆ?' ಎಂದನು. ಕೃಷ್ಣನು,— 'ಅಣ್ಣಾ, ನಾವು ಹಾಗೆ ಕೇಳಿದರೆ, ನಾವು ಹೇಡಿಗಳೆಂದು ಅವರು ಎನ್ನುವರಲ್ಲವೆ?' ಎಂದನು. ಬಲರಾಮನನ್ನು ಪ್ರಲಂಬನು ಯುದ್ಧಕ್ಕೆ ಕರೆದನು. ಕೃಷ್ಣನು ಅಣ್ಣನಿಗೆ ಸಹಾಯಮಾಡಿದನು. ಆಟವು ಗುದ್ದಾಟವಾಯಿತು. ಆಗ ಬಲರಾಮನಿಗೆ ಎಲ್ಲವೂ ತಿಳಿಯಿತು. ಅವನು ಗುದ್ದುತ್ತಲೇ ಪ್ರಲಂಬನನ್ನು ಕೊಂದು ಬೀಳಿಸಿದನು. ಅವನ ಕಡೆಯ ಬಾಲಕರು ಓಡಿಹೋದರು. ಕೃಷ್ಣ-ಬಲರಾಮರನ್ನು ಉಳಿದ ಬಾಲಕರು ಎತ್ತಿ, 'ಜಯವಾಗಲಿ' ಎಂದು ಕೂಗುತ್ತ ಊರೆಲ್ಲ ಮೆರೆಸಿದರು. ಅಂದು ಆ ಹುಡುಗರ ಅಬ್ಬರವೆಷ್ಟು! ಬಲರಾಮನ ಉಬ್ಬರವೆಷ್ಟು! ಪ್ರಲಂಬನನ್ನು ಬಲರಾಮನು

ಕೊಂದನೆಂದು ಊರಲ್ಲೆಲ್ಲ ಸುದ್ದಿ ಹರಡಿತು. ತಂಟೆಖೋರನು ಸತ್ತುದಕ್ಕೆ ಗೋವಳರು ಸಂತೋಷಪಟ್ಟರು.

## ವಸ್ತ್ರ—ಹರಣ.

19. ಆಗ ಕೃಷ್ಣನಿಗೆ ಹನ್ನೊಂದೊ ಹನ್ನೆರಡೊ ವರ್ಷ ಪ್ರಾಯವು. ಇನ್ನೂ ಆಟವಾಡುವ ಚಟವನ್ನು ಬಿಟ್ಟಿಲ್ಲ. ಗೋವಳ ಹುಡುಗರೂ ಹುಡುಗಿಯರೂ ಅವನೊಡನೆ ಆಟವಾಡಲು ಯಾವಾಗಲೂ ಸಿದ್ಧರು. ಬಾಲಕ-ಬಾಲಿಕೆಯರ ರೀತಿ, ನೀತಿ, ಹಬ್ಬ ಎಲ್ಲವೂ ಅವನಿಗೆ ತಿಳಿದಿರದೆ ಇದೆಯೆ? ಎಲ್ಲರೂ ಸಾಧಾರಣವಾಗಿ ಒಂದೇ ವಯಸ್ಸಿನವರು. ಬಾಲತನದ ಕೋಮಲ ಮನಸ್ಸು. ಅದೆಷ್ಟು ನಿರ್ಮಲ,—ಅದರಲ್ಲಿ ವಿಕಾರಗಳೇ ಇಲ್ಲ. ಕೋಮಲನಾದರೂ ಕೃಷ್ಣನು ಪ್ರವೀಣನು. ಏನೊಂದು ಅನ್ಯಾಯವನ್ನು ಕಂಡರೆ ಅವನಿಗಾಗದು. ದೋಷಗಳನ್ನು ಕೀಳುವುದೆ ಕೃಷ್ಣನ ಮುಖ್ಯ ಉದ್ಯೋಗ.

20. ವೃಂದಾವನದ ಗೋವಳರಲ್ಲಿ, ಬಾಲಿಕೆಯರು ತಾವೆ ದೇವೀ ಪೂಜೆ ಮಾಡಲು ಹೋಗುತಿದ್ದರು. ಆ ಪೂಜೆಯ ನೈವೇದ್ಯಗಳೆಷ್ಟು! ಪ್ರಸಾದವೆಷ್ಟು! ಪೂಜೆಯ ತರುವಾಯ ಯಜ್ಞವಾಗುತಿದ್ದಿತು. ಅದರ ಸಂಭ್ರಮವೆಷ್ಟು! ಬಾಲಿಕೆಯರು ಈ ಪೂಜೆ-ಯಜ್ಞಗಳಿಗೆ ಏತಕ್ಕೆ ಇಷ್ಟು ದುಡುಕುತಿದ್ದರು? ಅವರಿಗೆ ಯೋಗ್ಯನಾದ ವರನು ದೊರೆಯಬೇಕೆಂದೇ ಈ ಸಂಭ್ರಮ. ದೇವರನ್ನು ಪ್ರಾರ್ಥಿಸಿಕೊಳ್ಳುವುದು ನೀತಿಯಲ್ಲವೆ? ಆದರೆ, ಯಜ್ಞದ ತರುವಾಯ ಕುಮಾರಿಯರು, ತಾವೇ ಮಾತ್ರವಾಗಿ, ಯಮುನಾ ನದಿಗೆ ಸ್ನಾನಕ್ಕಾಗಿ ಹೋಗುತ್ತಿರು. ಅಲ್ಲಿ, ತೀರದಲ್ಲಿ ಸೀರೆಗಳನ್ನು ಮಡಗಿ, ನೀರಲ್ಲಿಳಿದು, ಬೇಕಾದಂತೆ ನೀರಲ್ಲಿ ಕ್ರೀಡಿಸುತಿದ್ದರು. ಅವರಿಗೆ ಜಲಕ್ರೀಡೆಯೆಂದರೆ ಒಂದು ಪ್ರಹರವಾದರೂ ಸಾಕಾಗುತಿರಲಿಲ್ಲ. ಅಷ್ಟು ಹೊತ್ತಿನಲ್ಲಿ, ಯಮುನಾನದಿಗೆ ಎಷ್ಟೋಮಂದಿ ನಾನಾ ಬಗೆಯ ಜನಗಳು ಬಂದು ಸ್ನಾನಮಾಡುವರು, ಬಟ್ಟೆಒಗೆಯುವರು, ನೀರುಕುಡಿಯುವರು. ಅಷ್ಟು ಮಂದಿ ಬಂದರೂ, ಈ ಜಲಕ್ರೀಡೆಯಾಡುತಿದ್ದ ಕುಮಾರಿಯರು ನಾಚುತಿರಲಿಲ್ಲ. ಅವರು ನೀರಲ್ಲೇ ಆಡುತ್ತ ಹೊತ್ತು ಕಳೆಯುತಿದ್ದರು.

21. ಕೃಷ್ಣನು ಗೋಪರೊಡನೆ ಹೇಗೆಯೊ ಹಾಗೆಯೆ ಗೋಪಿಯರೊಡನೆಯೂ ಆಡುತಿದ್ದನಷ್ಟೆ. ಈ ಜಲಕ್ರೀಡೆಯ ವಿಚಾರದಲ್ಲಿ ಮಾತ್ರ

ಅವನಿಗೆ ಆಕ್ಷೇಪವಿದ್ದಿತು. ಕುಮಾರಿಯರು ಆ ರೀತಿಯಾಗಿ ಯಮುನಾ ನದಿಯಲ್ಲಿ ಜಲಕ್ರೀಡೆಯಾಡುವುದು ಅಪರಿಚಿತರ ಇದಿರಲ್ಲಿ ನಾಚುಗೆಗೇಡು ಎಂದೂ ಬಾರಿಬಾರಿಗೂ ಅವನು ಅವರಿಗೆ ಬುದ್ಧಿ ಹೇಳಿದನು. ಅವರು ಸ್ನಾನವು ಶಾಸ್ತ್ರಪ್ರಕಾರವೆಂದರು. 'ಸ್ತ್ರೀಯರು ಬಟ್ಟೆ ಹಾಕಿಕೊಳ್ಳದೆ ಸ್ನಾನ ಮಾಡಬಾರದೆಂದು ಶಾಸ್ತ್ರವಿದೆ' ಎಂದು ಕೃಷ್ಣನು ಹೇಳಿದನು. 'ಕೃಷ್ಣನು ನಮ್ಮವನೆ, ನಮ್ಮ ವಯಸ್ಸಿನವನೆ, ಇವನೆಷ್ಟು ಪಂಡಿತನಂತೆ! ಹಿರಿಯರ ರೀತಿಗೆ ವಿರುದ್ಧ ಆಡುವನು?' ಎಂದು ಕುಮಾರಿಯರು ಅವನ ಮಾತಿಗೆ ಕಿವಿಗೊಡಲಿಲ್ಲ. ಬಾಲಕನ ಮಾತಲ್ಲವೆ, ಯಾರೂ ಮರ್ಯಾದೆ ಕೊಡರು. ಅವರು ಎಂದಿನಂತೆ ಉಡುಗೆಗಳನ್ನು ಯಮುನಾತೀರದಲ್ಲಿಟ್ಟು ತೀರ್ಥಸ್ನಾನ ಮಾಡುವರು. ಅನೇಕ ದಿನಗಳ ತನಕ, ಕೃಷ್ಣನು ಇದೇ ವಿಷಯವಾಗಿ ಬಾಲಿಕೆಯರಿಗೆ ಬೋಧಿಸಿದನು. ಬೇಡಿಕೊಂಡನು. ಅವನ ಮಾತನ್ನು ಅವರು ಗಣ್ಯಮಾಡಲಿಲ್ಲ. ಕೃಷ್ಣನಿಗೆ ಆಗ ಸಿಟ್ಟು ಉಂಟಾಯಿತು ಅವರಿಗೆ ಚೆನ್ನಾಗಿ ಬುದ್ಧಿ ಕಲಿಸಬೇಕೆಂದನು. ಈ ಹಾಳುರೂಢಿಯನ್ನು ಕಿತ್ತುಹಾಕದಿದ್ದರೆ ಇದರಿಂದ ಸ್ತ್ರೀಯರ ಮರ್ಯಾದೆಗೆ ಕುಂದು ಉಂಟೆಂದು ಅವನು ತಿಳಿದಿದ್ದನು. ಸಮಾಜಸಂಸ್ಕಾರಕ್ಕೆ ಕೃಷ್ಣನು ತೊಡಗಿದುದು ಇದೇ ಮೊದಲು.

22. ಕೆಟ್ಟ ರೂಢಿಗಳು ಫಕ್ಕನೆ ಅಳಿಯಲಾರವು. ಒಂದು ದಿನ ಬಾಲಿಕೆಯರು ತಮ್ಮ ಪದ್ಧತಿಯಂತೆ ಜಲಕ್ರೀಡೆಯಾಡುತಿದ್ದಾಗ, ಕೃಷ್ಣನು ಆ ಸಮಯಕ್ಕೆ ಸರಿಯಾಗಿ ಅತ್ತ ಬಂದನು. ಬಹಳ ಸಿಟ್ಟಾಗಿ, ಸದ್ದಿಲ್ಲದೆ, ಯಮುನಾತೀರಕ್ಕೆ ನಡೆದು, ಬಾಲಿಕೆಯರು ಜಲಕ್ರೀಡೆಯಾಡುತಿದ್ದ ಕಡೆಗೆ ನೋಡದೆ, ಅವರಿಗೂ ತಾನು ನೋಡಸಿಗದೆ, ಅವರ ಸೀರೆಗಳನ್ನೆಲ್ಲಾ ಗಂಟು ಕಟ್ಟಿ, ದೂರದ ಒಂದು ದೊಡ್ಡ ಮರದ ಮೇಲೆ ಇಟ್ಟು, ತಾನೂ ಆ ಮರದ ಒಂದು ಕೊಂಬೆಯ ಮೇಲೆ, ಬಾಲಿಕೆಯರ ಕಡೆಗೆ ಬೆನ್ನು ತಿರುಗಿಸಿ, ಗಂಭೀರವಾಗಿ ಕುಳಿತುಕೊಂಡನು. ಅಲ್ಲಿಂದ ಅವನೂ ಬಾಲಿಕೆಯರನ್ನು ನೋಡಲಾರನು; ಇಲ್ಲಿಂದ ಬಾಲಿಕೆಯರೂ ಅವನನ್ನು ನೋಡಲಾರರು.

23. ಜಲಕ್ರೀಡೆಯು ಮುಗಿಯಿತು. ಬಾಲಿಕೆಯೊಬ್ಬಳು ದಡಕ್ಕೆ ಬಂದು, ಸೀರೆ ಉಡಲು, ಅತ್ತಿತ್ತ ಸೀರೆ ಹುಡುಕಿದಳು. ಸೀರೆಯೊಂದೂ

ಇಲ್ಲ! 'ನಮ್ಮ ಸೀರೆಗಳನ್ನು ಯಾರೊ ಕದ್ದಿರುವರು!' ಎಂದು ಬೊಬ್ಬಿಟ್ಟಳು. ನೀರಿನಿಂದ ಅವರು ಮೇಲಕ್ಕೆ ಹೇಗೆ ಬರುವರು ? ಬಾಲಿಕೆಯರು ನಾಲ್ಕೂ ಕಡೆಗೆ ಸೀರೆಗಳಿಗಾಗಿ ಕಣ್ಣುಬಿಟ್ಟರು. ದೂರದಲ್ಲಿ ಮರದ ಕೊಂಬೆಗೆ ಅವರ ಸೀರೆಗಳ ಗಂಟು ತೂಗುತ್ತಲಿದೆ. ಹ್ಞಾಂ ! ಹತ್ತಿರವೆ ಅವರ ಒಡನಾಡಿಯಾದ ಕೃಷ್ಣನು ಬೆನ್ನುಹಾಕಿ ಕೂತಿರುವನು. ಅವನು ಎಷ್ಟು ಗಂಭೀರನಾಗಿರುವನು !

24. ಆಗ ತಾನೆ ಬಾಲಿಕೆಯರು ತಮ್ಮ ಹಾಳುರೂಢಿಗಾಗಿ ನಾಚಿಕೊಂಡರು. ಕೃಷ್ಣನಿಗೆ ಮೊರೆಯಿಟ್ಟರು; ಮರುಮಾತಿಲ್ಲ. ಬೇಡಿಕೊಂಡರು; ಅವನು ನೋಡುವುದಿಲ್ಲ. ಕೊನೆಗೆ ಪ್ರಾರ್ಥನೆ ಮಾಡಿದರು; ಆಗ ತಾನೆ ಸಾರ್ಥಕವಾಯಿತೆಂದನು. 'ಇಂದು ಈ ಬಟ್ಟೆಗಳನ್ನು ತಿರುಗಿ ಕೊಡುವೆನು; ಇನ್ನೆಂದಾದರೂ ಈ ರೀತಿ ಜಲಕ್ರೀಡೆಗೆ ಬಂದರೆ, ಸೀರೆಗಳನ್ನು ನೀರಲ್ಲಿ ತೇಲಿಸಿ ಹೋಗುವೆನು. ನಾನು ನಿಮಗೆ ಸೋದರನಂತಿರುವೆನು; ಯಾರಾದರೂ ಬೇರೆಯವರು ಈ ರೀತಿ ಮಾಡಿದ್ದರೆ ನಿಮ್ಮ ಲಜ್ಜೆಗೆ ಗತಿಯೇನು ?' ಎಂದು ಬುದ್ಧಿ ಕಲಿಸಿ, ಬಾಲಿಕೆಯರು ಯಮುನಾನದಿಗೆ ಆಣೆಯಿಟ್ಟು ನಮಸ್ಕಾರ ಮಾಡಿ, ಮೋರೆ ತಿರುಗಿಸಿ ನಿಲ್ಲಬೇಕೆಂದನು. ಅವರು ಹಾಗೆಯೆ ಮಾಡಲು, ಸೀರೆಗಳ ಗಂಟನ್ನು ಬೇಗನೆ ಅವರ ಕಡೆಗೆ ಒಗೆದು, ತಾನು ಮರದಿಂದ ಇಳಿದು ಮನೆಗೆ ಮರಳಿದನು.

25. ಸೀರೆಗಳನ್ನು ಉಡುತಲಿದ್ದ ಬಾಲಿಕೆಯರು 'ಇಂತಹ ಲಜ್ಜಾಸ್ಪದವಾದ ರೀತಿಯು ಹಾಳಾಗಲಿ !' ಎಂದು, ಮುಂದೆ ಎಂದೂ ಹಾಗೆ ಜಲಕ್ರೀಡೆಯಾಡಲಿಲ್ಲ. ಶಾಸ್ತ್ರದ ಮಾತು, ಸಮಾಜದ ರೀತಿ ಇವೆರಡನ್ನೂ ಕೃಷ್ಣನು ಹೇಗೆ ವಿಚಾರದಿಂದ ತಿಳಿದುಕೊಳ್ಳುತಿದ್ದನು, ಕಂಡಿರಾ? ಈ ರೀತಿ ಸಮಾಜದ ಹಿತಕ್ಕಾಗಿ ಸಾಧಿಸಿದ ನಿರ್ಮಲವರ್ತನದ ಬಾಲಕರೆಷ್ಟು ಇರಬಹುದು?

## ಉಪನಯನ.

26. ಇದಾದ ಕೆಲವು ದಿನಗಳ ತರುವಾಯ, ಕೃಷ್ಣನಿಗೆ ಉಪನಯನವಾಯಿತು. ಅದಕ್ಕೆ ಮೊದಲೇ ಅವನು ಸಾಧಾರಣ ತಿಳುವಳಿಕೆ ಉಳ್ಳವನೆ ಆಗಿದ್ದನು. ಉಪನಯನವಾದ ಕೂಡಲೆ ಒಬ್ಬ ಗುರುವನ್ನು ಅವ

ನಿಗೆ ನಿಯಮಿಸಿದರು. ಗುರುವು ಅವನಿಗೆ ಒಂದು ಮಂತ್ರವನ್ನು ಉಪದೇಶಿಸಿ, ಅದನ್ನೆ ಅವನು ತೋರಿಸಿಕೊಟ್ಟಂತೆ ಭಾವಿಸಿ ಕುಳ್ಳಿರಬೇಕೆಂದು ಮನಸ್ಸು ಏಕಾಗ್ರತೆ ಹೊಂದುವಂತಹ ಸಾಧನೆಯನ್ನು ಕಲಿಸಿದನು. ಧ್ಯಾನಮಾಡುತ್ತಲಿದ್ದಂತೆಯೆ ಕೃಷ್ಣನು ಧರ್ಮದ ಪಥವನ್ನೂ ಕಂಡುಕೊಂಡನು. ಆಟದ ಮೇಲಿದ್ದ ಅವನ ಮನಸ್ಸು ಅಲ್ಲಿಗೆ ಪಾಟದ ಹಾದಿ ಹಿಡಿಯಿತು. ಅವನು ಗಂಭೀರನಾಗುತ್ತ ಬಳೆದನು. ಎಲ್ಲರಿಗೂ ಸರಿಯಾಗಿ ಧ್ಯಾನಮಾಡಲು ಬರುವುದಿಲ್ಲ. ಏಕೆಂದರೆ, ನಮ್ಮ ಮನಸ್ಸು ಮಂಗಚೇಷ್ಟೆಯಿಂದ ಪೂರ್ಣವಾಗಿದೆ. ಆ ಚೇಷ್ಟೆಯ ರೋಗವು ವಾಸಿಯಾಗದೆ ಇದ್ದರೆ, ಜೀವನದ ಮಹತ್ವವು ತಿಳಿಯುವುದಿಲ್ಲ; ಯೋಗ್ಯವಾದ ಸಾಧನೆಗಳನ್ನು ಮಾಡಲು ಜ್ಞಾನವೂ, ವಿವೇಕವೂ ಉಂಟಾಗುವುದಿಲ್ಲ. ಹಟಹಿಡಿದು ಮನಸ್ಸು ಒಂದೇ ಕಡೆ ತಡೆವಂತೆ ಮಾಡಿದರೆ, ಮುಂದೆ ಬಾಲಕರು ಜ್ಞಾನಸಂಪಾದಿಸಿಕೊಂಡು ಬುದ್ಧಿವಂತರಾಗಿ ಸುಲಭವಾಗಿ ಕೀರ್ತಿ ಹೊಂದುತ್ತಾರೆ. ಜೀವನದ ಕಷ್ಟಗಳು ಮುಂದೆ ಸುಲಭವಾಗಿ ತೋರುವುವು; ಬಿಕ್ಕಟ್ಟಿನಲ್ಲಿ ಮನಸ್ಸು ಶಾಂತವಾಗಿ ವರ್ತಿಸುವುದು. ಧ್ಯಾನ ಮಾಡುವುದರ ಮೂಲಕ, ಕೃಷ್ಣನು ಮನಸ್ಸಿನ ಬಲವನ್ನು ಹೆಚ್ಚಿಸಿಕೊಂಡನು; ಬಯಲಿನಲ್ಲಿ ಆಟಗಳನ್ನಾಡಿ ಸೃಷ್ಟಿವಿಷಯಗಳ ಜ್ಞಾನವನ್ನು ಸಂಪಾದಿಸಿಕೊಂಡನು; ದೇಹಬಲವನ್ನು ಹೆಚ್ಚಿಸಿಕೊಂಡನು. ಇದರಿಂದ ಮುಂದೆ ಎಂತಹ ಕೆಲಸವನ್ನಾದರೂ ಪೂರ್ಣ ಮನಸ್ಸಿನಿಂದಲೂ ಸುಲಭವಾಗಿಯೂ ಉತ್ತಮ ರೀತಿಯಲ್ಲಿಯೂ ಮಾಡಲು ಅವನು ಶಕ್ತನಾದನು. ಜನರು, ಕೃಷ್ಣನು ಇನ್ನೂ ಬಾಲಕನೆ ಎನ್ನುತಿದ್ದರು; ಆದರೆ ಈ ಬಾಲ್ಯಪ್ರಾಯದಲ್ಲಿ ಅವನು ಧರ್ಮಜ್ಞಾನವನ್ನು ತಿಳಿದುಕೊಂಡವನಾಗಿ, ಆ ವಯಸ್ಸಿನ ಇತರರೆಲ್ಲರಿಗಿಂತಲೂ ಹೆಚ್ಚಾಗಿ ಪ್ರವೀಣನೆನಿಸಿಕೊಂಡಿದ್ದನು.

## ಗೋವರ್ಧನ.

27. ವೃಂದಾವನದಲ್ಲಿ ಇಂದು ಗದ್ದಲ. ಗೋಪರೂ ಗೋಪಿಯರೂ, ಬಾಲಕರೂ ಮುದುಕರೂ, ಒಂದೇ ಬಗೆಯಾಗಿ ವಿನೋದಗೊಂಡು ಇರುವರು. ಕೃಷ್ಣನೂ ಎಲ್ಲರಂತೆ ವಿನೋದದಿಂದ ಇರುವನು. ವೃಂದಾವನಕ್ಕೆ ಬಂದು ಹೆಚ್ಚು ದಿನವಾಗಿಲ್ಲವಷ್ಟೆ. ಆ ಗದ್ದಲವೇನೆಂದು ಅವನು ಕೇಳುವ

ಕುತೂಹಲದಿಂದ ಮನೆಗೆ ಬಂದನು. ತಂದೆಯಾದ ನಂದನು ಈ ಗದ್ದಲದಲ್ಲಿ ಮೊದಲನೆಯವನು! ಅವನು ಮನೆಯಲ್ಲಿ ಇಲ್ಲ. ತಾಯಿ ಯಶೋದೆಯು ತುಂಬ ಕೆಲಸದಲ್ಲಿ ವ್ಯಮರೆತಿರುವಳು. ಅವಳು ಎಷ್ಟೆಂದರೂ ಹೆಂಗಸು. 'ಆ ಶನಿವಾರ—ಈ ಶನಿವಾರ, ಎಂಟು ದಿನ' ಎಂದಿಷ್ಟೆ ಅವಳು ಹಾಲಿನ ಲೆಕ್ಕ ಹೇಳುವಳು. ಈ ಗದ್ದಲದ ಮೂಲಕಾರಣವನ್ನು ಅವಳು ಕೃಷ್ಣನ ಮನಸ್ಸಿಗೆ ಒಪ್ಪುವಂತೆ ಹೇಗೆ ಹೇಳಬಲ್ಲಳು ? ಏನೊ ದೊಡ್ಡ ಹಬ್ಬ, ಪೂಜೆಯಿದೆ ಎಂದಳು. ಅಷ್ಟೆ.

28. ಕೃಷ್ಣನು,—'ಪೂಜೆ, ಯಾವ ಪೂಜೆ, ಎಂತಹ ಪೂಜೆ, ಈ ಪೂಜೆ ಏತಕ್ಕೆ?' ಎಂದನು. ವಿವರಿಸಿ ಹೇಳುವವರು ಅಲ್ಲಿ ಯಾರೂ ಇಲ್ಲದರಿಂದ, ಅವನು ಗೋವಳರೊಡನೆ ದೊಡ್ಡವರಿರುವ ಸ್ಥಳಕ್ಕೆ ಹೋದನು.

29. ಬಯಲಿನಲ್ಲಿ ಪೂಜೆಯಂತೆ! ಜನರೆಷ್ಟು! ಅದೊಂದು ಗೊಂದಲವೇ. ಹೇಳುವವರೂ ಇಲ್ಲ, ಕೇಳುವವರೂ ಇಲ್ಲ ಎಂಬಂತೆ ಗುಲ್ಲು ಎದ್ದಿತು. ಕೃಷ್ಣನು ಮೆಲ್ಲನೆ ಜನರ ಹಿಂಡನ್ನು ಬಿಟ್ಟು ದೂರದಲ್ಲಿದ್ದ ಒಬ್ಬ ಮುದುಕನ ಬಳಿಗೆ ಹೋದನು 'ಅಜ್ಜಯ್ಯಾ, ಇಷ್ಟುಜನರು, ಇಂತಹ ಗಲಾಟೆ, ಇದೆಲ್ಲ ಏನು?' ಎಂದು ಅವನನ್ನು ಕೇಳಿದನು.

30. ಅಜ್ಜಯ್ಯನು ತಲೆನಡುಗಿಸಿ ನಕ್ಕನು. ಹಲ್ಲಿಲ್ಲದ ಬಾಯಿ, ತಲೆನಡುಗುತ್ತಿದೆ. 'ಮಗೂ, ನಿನಗೇಕೆ? ಗೊತ್ತಿಲ್ಲವೆ, ಈ ದಿನ ಇಂದ್ರಯಜ್ಞವಾಗುವುದು. ಇಂದ್ರನು ನಮಗೆ ಮಳೆಸುರಿಸುವವನು. ಅವನ ಮಳೆಯಿಂದ ನಮಗೆ ಬೆಳೆಯಾಗುವುದಲ್ಲವೆ? ಅವನಿಗೆ ಸಂತೋಷವಾದರೆ ನಮಗೆ ಎಲ್ಲವೂ ಸರಿಹೋಗುವುದಲ್ಲವೆ? ಪುರಾತನ ಕಾಲದಿಂದಲೂ ಇದೇ ರೀತಿ ಇಲ್ಲಿ ಯಜ್ಞವಾಗುವುದಿದೆ. ನೀನು ನೋಡಿಯೆ ಇಲ್ಲವೇ?—ಹೋಳಿಗೆ ಲಡ್ಡುಗಳನ್ನು ಮಾತ್ರ ನುಂಗಿದೆ; ಹ್ಣಂ?' ಎಂದನು.

31. ನಾವು ವೃಂದಾವನಕ್ಕೆ ಹೊಸಬರು. ನಾವೇನೂ ತಿಳಿದವರಲ್ಲ—ಎಂದು ಕೃಷ್ಣನು ಆ ಮುದಿಯನಿಗೆ ತಿಳುಹಿದನು.

32. ಕೃಷ್ಣನು ವಯಸ್ಸಿನಲ್ಲಿ ಬಾಲಕನು. ಆದರೆ ಅವನ ಬುದ್ಧಿಯು ಮಾತ್ರ ಬಾಲಕರದಲ್ಲ. ಹೀಗೆಯೇ ಮುದಿಯನೊಡನೆ ಮಾತುಕತೆ ಬೆಳಸಿ ವಿಚಾರ ಮಾಡತೊಡಗಿದನು. ಅಲ್ಲಿಯೆ ಮತ್ತೆಷ್ಟೊ ಮಂದಿ ನೆರೆಯಿತು. ಅದು ಒಂದು ಮಹಾ ಸಭೆಯಂತೆ ಆಯಿತು. ಇವರಿಬ್ಬರೊಳಗೆ ಅದೇ

ಯಜ್ಞವನ್ನು ಕುರಿತು ಎಷ್ಟೋ ತರ್ಕ ನಡೆಯಿತು! ಕೊನೆಗೆ 'ಈ ಯಜ್ಞವು ಸರಿಯೆಂದು ನನಗೆ ತಿಳಿಯುವುದಿಲ್ಲ' ಎಂದು ಕೃಷ್ಣನು ಹೇಳಿದನು. ಅಜ್ಜಯ್ಯನು,—'ಇಂದ್ರಯಜ್ಞವೆ ನಮಗೆ ಬೇಕಾದುದು. ಅದೇ ಎಂದಿನಿಂದಲೂ ನಡೆದುಬಂದಿದೆ. ಇದರಿಂದಲೇ ನಮಗೆ ಕಲ್ಯಾಣವಾಗುವುದು.' ಎಂದು ಒತ್ತಿಹೇಳಿದನು. ಕೃಷ್ಣನ ಮಾತಿಗೆ ಒಡಂಬಡದೆ ಇದ್ದ ಮಂದಿಯೆ ಹೆಚ್ಚು. ಕೃಷ್ಣನು ತನ್ನಿಂದಾದಷ್ಟು ಚೆನ್ನಾಗಿ ವಿವರಿಸಿ ಹೇಳಿದರೂ ಅವರು ಒಪ್ಪಲಿಲ್ಲ. ಆಗ ಅವನು,—"ನಾವು ಕಾಡುಗಳಲ್ಲಿ ಇರುವ ಗೋಪಜಾತಿಯವರು. ನಮ್ಮ ಜೀವನಕ್ಕೆ ಮುಖ್ಯ ಸಹಾಯವು ದನ, ಎತ್ತುಗಳು. ಹೀಗಿರುವಾಗ, ನಮ್ಮ ಜೀವನ ಕಾಪಾಡುವ ದೇವತೆಗಳೆಂದು ನಾವು ಗೋವುಗಳನ್ನೆ ಪೂಜಿಸ ತಕ್ಕುದು. ಗೋಮಾತೆಯೆ ಕಾಮಧೇನುವಲ್ಲವೆ? ಗೋವುಗಳು ವನದಲ್ಲಿ ಇರುವುವು; ಬೆಟ್ಟದ ಹುಲ್ಲನ್ನು ತಿಂದು ಬದುಕುವುವು. ಈ ಹುಲ್ಲನ್ನು ಕೊಡುವ, ಮತ್ತು ವನವನ್ನು ಕಾಪಾಡುವ ಬೆಟ್ಟವೂ ನಮ್ಮ ಪೂಜೆಗೆ ಯೋಗ್ಯವು. ಅದೇ ನಮಗೆ ದೇವರು. ಒಕ್ಕಲಿಗನಿಗೆ ಬೇಸಾಯವೂ, ವ್ಯಾಪಾರಿಗೆ ಜೀನಸುಗಳೂ, ಇರುವಂತೆಯೆ ನಮಗೆ ಗೋವುಗಳಿವೆ. ಯಾವುದು ನಮ್ಮ ಜೀವನಕ್ಕೆ ಆಧಾರವೊ ಅದೇ ನಮಗೆ ದೇವತೆ, ಅದೇ ಪೂಜಾಯೋಗ್ಯವು. ಇಂತಹ ದೇವತೆಗಳನ್ನು ನಾವು ಪೂಜಿಸುವುದು ಉತ್ತಮವಲ್ಲದೆ, ಬೇರೆ ದೇವತೆಗಳನ್ನು ಪೂಜಿಸಿದರೆ, ನಮಗೆ ಇಲ್ಲಿಯೂ ಕೆಡುಕು, ಮುಂದೆಯೂ ಕೆಡುಕು. ಗೋವುಗಳು ನಮ್ಮನ್ನು ಕಾಪಾಡುವುದಕ್ಕೆ, ನಾವು ಇಂದ್ರನನ್ನು ಪೂಜಿಸುವುದೆ? ಬೆಟ್ಟವು ನಮ್ಮ ಮನೆ ಮಾರುಗಳನ್ನು ಕೋಟೆಯಂತೆ ಕಾಪಾಡಿದುದಕ್ಕೆ, ಇಂದ್ರನಿಗೆ ಹರಕೆ ಹೊರುವುದೆ? ಬ್ರಾಹ್ಮಣರಿಗೆ ಮಂತ್ರಯಜ್ಞವಿದೆ; ಒಕ್ಕಲಿಗರಿಗೆ ನೇಗಿಲು ಯಜ್ಞವಿದೆ; ಗೋವಳರಿಗೆ ಅದರಂತೆಯೆ ಗಿರಿಯಜ್ಞ. ಅದುಕಾರಣ ನಾವು ಗೋವರ್ಧನಗಿರಿಯಜ್ಞವನ್ನೆ ಪ್ರಾರಂಭಿಸುವ. ಅದೇ ನಮಗೆ ಹಿತವನ್ನು ಉಂಟುಮಾಡುವುದು'' ಎಂದನು.

33. ಬಾಲಕೃಷ್ಣನ ಮಾತಿಗೆ ಗೋಪರು ತಲೆದೂಗಿದರು. ಅವನ ಯುಕ್ತಿಯು ಸರಿಯಾಗಿದ್ದಿತು. ಇಂದ್ರಯಜ್ಞವು ಅಲ್ಲಿಗೇ ಮುಗಿಯಿತು; ಗಿರಿಯಜ್ಞವೇ ಬಿಗಿಯಿತು.

34. ಯಜ್ಞವಾಗುತಿರುವಾಗ, ಬಿರುಗಾಳಿಯೆದ್ದು ಜಡಿಮಳೆ ಸುರಿಯಿತು. ಎಡೆಬಿಡದೆ ಮಳೆಬಡೆದು, ಗೋಪರ ಮನೆ-ದನಗಳೆಲ್ಲ ತೇಲಿ ಹೋಗುವುವೋ ಎಂದು ಬೆದರಿಕೆ ಹಿಡಿಯಿತು. ಕೃಷ್ಣನು ಬೇಕೆಂದೇ ಇಂದ್ರ ಯಜ್ಞವನ್ನು ನಿಲ್ಲಿಸಿದುದಕ್ಕೆ ಇಂದ್ರನ ಸಿಟ್ಟು ಈ ರೀತಿಯಾಗಿ ನಮ್ಮನ್ನು ಶಿಕ್ಷಿಸುವುದಲ್ಲಾ ಎಂದು ಗೋಪರು ಗೋಳಾಡಿದರು. ಎಲ್ಲರೂ ಕೃಷ್ಣನನ್ನೆ ಜರೆದರು. ಅವನು ಮಾತ್ರ ಶಾಂತನಾಗಿದ್ದನು.

35. ಗೋವರ್ಧನಗಿರಿಯು ಹತ್ತಿರವೇ ಇದೆ. ಕೃಷ್ಣನು ಆ ಗಿರಿಯನ್ನು ಏರಿದನು. ಎತ್ತರವಾದ ಒಂದು ಕಡೆಯಲ್ಲಿ ದೊಡ್ಡದಾದ ಒಂದು ಗುಹೆ ಇದ್ದಿತು. ಗೋಪರೆಲ್ಲರೂ ಕುಟುಂಬಸಮೇತವಾಗಿ ದನಕರುಗಳೊಡನೆ ಈ ಗುಹೆಗೆ ಹೋಗುವ ಹಾಗೆ ಎಲ್ಲರಿಗೂ ಹೇಳಿದನು. ಎಲ್ಲರೂ ಹಾಗೆಯೆ ಮಾಡಿದರು. ಬಿರುಗಾಳಿ, ಜಡಿಮಳೆ ಯಾವುದೂ ಅವರಿಗೆ ಅಲ್ಲಿ ತಟ್ಟಲಿಲ್ಲ. ನಂತರ ಎಲ್ಲರೂ ಶಾಂತರಾದರು. 'ಇಂದ್ರನ ಸಿಟ್ಟೂ ಇಲ್ಲ, ಶಿಕ್ಷೆಯೂ ಇಲ್ಲ. ಇಂದ್ರನ ಈ ಪ್ರಚಂಡ ಜಲಪ್ರಲಯದಿಂದ ನಮ್ಮ ಬಾಲಕೃಷ್ಣನು ನಮ್ಮನ್ನು ಕಾಪಾಡಿ, ಇಂದ್ರನ ಗರ್ವವನ್ನು ಮುರಿದನಲ್ಲವೆ? ಗೋವರ್ಧನಗಿರಿಯಿಂದ ನಮ್ಮನ್ನು ಹೇಗೆ ಕಾಪಾಡಿದನು! ಇರಲಿ, ಆ ಗುಹೆಯನ್ನು ಎಲ್ಲಿ ಕಂಡನು? ಅಥವಾ ಗಿರಿಯನ್ನು ಕೊಡೆಯಂತೆ ಎತ್ತಿ ಹಿಡಿದು ನಮ್ಮನ್ನು ಅದರ ಮಾಡಿನ ಮರೆಯಲ್ಲಿ ನಿಲ್ಲಿಸಿ, ಈ ಮಳೆಯಲ್ಲಿ ಉಳಿಸಿದನೊ? ಎಂದೇ ಅವರ ಆಶ್ಚರ್ಯದ ಮಾತು.

---

## ೪. ಬ್ರಹ್ಮಚರ್ಯ.

1. ಕೃಷ್ಣನು ಇನ್ನು ಬಾಲಕನಲ್ಲ. ಮೇಲಣ ತುಟಿಯ ಮೇಲೆ ಮೀಸೆಯು ಮೊಳೆಯುತ್ತಲಿದೆ. ಅದರೊಡನೆಯೆ ಅವನಲ್ಲಿ ಜ್ಞಾನವೂ ವಿವೇಕವೂ ಬೆಳೆಯುತ್ತಲಿವೆ. ಅವನು ಈಗ ನಾನಾ ವಿದ್ಯೆಗಳನ್ನು ಕಲಿಯ ತೊಡಗಿದನು. ಶಾಸ್ತ್ರಪಾಠಗಳಂತೂ ಇವೆ. ಗಾಯನದಲ್ಲಿಯೂ ಕೊಳಲು ಊದುವುದರಲ್ಲಿಯೂ ಅವನು ಪಂಡಿತನು. ಕೊಳಲೂದಿ, ನಾಟ್ಯವಾಡಿ,

ಹಾಡುವುದರಲ್ಲಿ ಅವನಿಗೆ ಎಣೆ ಯಾರೂ ಇದ್ದಿಲ್ಲ. ಇದೆಲ್ಲವೂ ಗೋವಳರ ವಿದ್ಯೆ. ದನ ಮೇಯಿಸುವರು,—ಕೊಳಲೂದುವರು; ಹಾಡುವರು; ಕುಣಿಯುವರು. ಕೃಷ್ಣನು ಗೋವಳರಲ್ಲಿ ಸೇರಿರುವನು. ಬಳಗದವರ ಮರ್ಯಾದೆಯನ್ನು ಅವನು ಮೀರಬಹುದೆ? ತನ್ನ ಕುಲವೂ ವಂಶವೂ ಯಾವುವೊ ಅದರಂತೆ ಮನುಷ್ಯನು ವರ್ತಿಸಬೇಕಾಗುವುದು. ವಂಶ ಮರ್ಯಾದೆಯನ್ನು ಕಾಪಾಡುವುದು ಮನುಷ್ಯನ ಮೊದಲನೆ ಧರ್ಮವು. ಕುಲಧರ್ಮವು ಹಾಗಿರಲಿ ಅಥವಾ ಹೀಗಿರಲಿ, ಅದನ್ನು ಮೀರುವುದು ಸುಲಭವಾಗಿಲ್ಲ. ಗೋವಳರಲ್ಲಿ ಸ್ತ್ರೀಪುರುಷರು ಒಟ್ಟಾಗಿ ಹಾಡುವರು, ಕುಣಿಯುವರು; ಕೃಷ್ಣನೂ ಉಳಿದವರಂತೆಯೆ. ಅವನೂ ಸ್ತ್ರೀಪುರುಷರೊಡನೆ ಸೇರಿ ಕೊಳಲೂದಿ ನಲಿಯುವನು. ಇಷ್ಟು ಕಾಲವೂ ಅವನ ಪರಿಚಯವಿದ್ದ ಗೋವಳರು ಇನ್ನು ಅವನ ಸಾಮರ್ಥ್ಯಕ್ಕೆ ಬೆರಗಾಗಿ ಅವನನ್ನು ಬಹಳ ಮೆಚ್ಚಿನಿಂದ ಕಾಣುತಿದ್ದರು. ಅವನೇ ಅವರಿಗೆ ನಾಯಕನಾದನು.

2. ಯೌವನವು ತಲೆದೋರುವಾಗಲೆ ಕೃಷ್ಣನು ಬ್ರಹ್ಮಚರ್ಯದ ನಿಯಮಗಳನ್ನು ಅನುಸರಿಸಿ, ಯಾವ ವಿಷಯಗಳಲ್ಲಿಯೂ ಕೆಟ್ಟನೋಟ ಅಭಿಲಾಷೆ ಆಸಕ್ತಿ ಒಂದೂ ಇಡದೆ ಇದ್ದನು. ವ್ಯಾಯಾಮದಲ್ಲಿ ಅವನಿಗೆ ಪ್ರೀತಿಯು ಹೆಚ್ಚಾಗಿದ್ದಿತು. ಶಾಸ್ತ್ರಾಭ್ಯಾಸದೊಡನೆಯೆ ವ್ಯಾಯಾಮವೂ ನಡೆಯಿತು. ಪಾಠಕಲಿತೇ ಅಥವಾ ಆಟವಾಡುತ್ತಲೇ ಇರುವುದು ಉತ್ತಮವಲ್ಲ; ಇವೆರಡೂ ಕಲೆತಿರುವುದೆ ಮೇಲು. ಅತ್ತ ಗಾಯನ-ನರ್ತನಗಳು ಇದ್ದೇ ಇವೆ. ಆಗಾಗ ತನ್ನ ಅಪ್ತ-ಇಷ್ಟರನ್ನು ಕರೆಯಿಸಿ ಗಾಯನ-ನರ್ತನಾದಿಗಳಿಂದ ಎಲ್ಲರನ್ನೂ ವಿನೋದಗೊಳಿಸುತಿದ್ದನು. ಎಲ್ಲರೂ ನರ್ತನ ಮಾಡುವರು, ಇವನು ಕೊಳಲೂದುವನು; ಅಥವಾ ಎಲ್ಲರೂ ಹಾಡುತ್ತ ಕುಣಿಯುವರಾದರೆ, ಇವನು ಪ್ರತಿಯೊಬ್ಬರೊಡನೆ ಒಂದೊಂದು ಹಜ್ಜೆ ಕುಣಿಯುವನು. ಆದರೆ, ಎಂದಾದರೂ ಕೆಟ್ಟ ಬಾಲಕರಂತೆ, ಅವನು ಯಾರಿಗೂ ಅಪಹಾಸ್ಯವನ್ನು ಮಾಡುವುದಾಗಲಿ ದುರ್ನೀತಿಯಿಂದ ನಡೆಯುವುದಾಗಲಿ ಇರಲಿಲ್ಲ.

3. ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವನು ಕಠಿನವಾದ ನಿಯಮಗಳನ್ನು ಮಾಡಿಕೊಂಡಿದ್ದನು. ಸೂರ್ಯೋದಯಕ್ಕೆ ಮೊದಲೇ ಏಳುವನು; ಸ್ನಾನಮಾಡುವನು, ತೀರ ಸಾಮಾನ್ಯವಾದ

ಆಹಾರವನ್ನೆ ಉಣ್ಣುವನು; ಬಲು ಸಹಜವಾದ ಬಟ್ಟೆಗಳನ್ನೆ ಉಟ್ಟು ಕೊಳ್ಳುವನು; ತೆಳ್ಳನೆ ಹಾಸಿನಲ್ಲೆ ಮಲಗುವನು. ಅವನು ದೂರದೂರಕ್ಕೆ ನಡೆದು ಹೋಗುತಿದ್ದಂತೆ ಆ ಕಾಲದ ಯಾವ ಬಾಲಕನಿಂದಲೂ ಆಗು ತಿರಲಿಲ್ಲ.

4. ಕೃಷ್ಣನು ಧರ್ಮಶಾಸ್ತ್ರವನ್ನು ಕಲಿತುಕೊಳ್ಳಲು ತೊಡಗಿದನು. ಇತ್ತ ತನ್ನ ವಂಶದವರ ಕಸಬನ್ನೆ ಮಾಡುವನು; ಅತ್ತಯೋಗಸಾಧನೆ ಯನ್ನೂ ಮಾಡುವನು. ದೇವಧ್ಯಾನದಲ್ಲಿ ಅವನು ಮೈಮರೆವನು. ಹಾಗಿದ್ದರೂ ಅವನು ತಾನು ಮಾಡುತ್ತಿದ್ದ ಕೆಲಸವನ್ನು ಸರಾಗವಾಗಿ ಮಾಡುತ್ತಲೆ ಇರುವನು. ಅಲಸಗಾರರನ್ನು ಕಂಡರೆ ಅವನಿಗಾಗದು. ಇದಕ್ಕಾಗಿಯೆ ಕೃಷ್ಣನನ್ನು ಕರ್ಮವೀರನೆನ್ನುವರು. ಅವನು ಮಾಡ ಬೇಕಾದ ಪ್ರತಿಯೊಂದು ಕೆಲಸವನ್ನು ಮಾಡುತಿರುವನಾದರೂ, ಅದರ ಫಲದ ಮೇಲೆ ಆಸೆಯಿಟ್ಟವನಲ್ಲ. ತನ್ನ ದೇಶಕ್ಕೂ ವಂಶಕ್ಕೂ ಸಮಾಜಕ್ಕೂ ಹಿತ ವಾದ ಕೆಲಸಗಳನ್ನೆ ಅವನು ಮಾಡುವನು. ತನ್ನೊಬ್ಬನ ಸುಖಕ್ಕಾಗಿ ಅವನು ಎಂದೂ ಯಾವ ಕೆಲಸವನ್ನೂ ಮಾಡಿದುದಿಲ್ಲ. ಅವನು ಜನರೊ ಡನೆ ಬೆರಸಿರುವನಾದರೂ, ಸೇರಿಕೊಂಡಿಲ್ಲ. ಊರಲ್ಲಿದ್ದರೂ ಊರಹೊರಗಿ ದ್ದನು ಎಂಬಂತೆ ಅವನ ಮನಸ್ಸು. ಇಂತಹ ಜನರು ಸಿಗುವುದು ಅಪರೂಪ.

5. ಅವನು ಪ್ರಕೃತಿಯ ಮಗು. ದೇವರು ಉಂಟುಮಾಡಿರುವ ಪದಾರ್ಥಗಳ ಸೌಂದರ್ಯವನ್ನೆ ಭಾವಿಸಿ, ಪರಮಾತ್ಮನ ಮಹಿಮೆಯನ್ನು ಅವನು ಕೊಂಡಾಡಿ, ತಾನು ಸುಖವನ್ನು ಅನುಭವಿಸುವನು. ಆಗಾಗ ಬಹಳ ಹೊತ್ತಿನವರೆಗೆ ಅವನು ಪ್ರಕೃತಿಯ ಸೌಂದರ್ಯವನ್ನು ಭಾವಿಸಿಯೆ ಮೈಮರೆವನು. ಧರ್ಮಪರರಾದವರು ಹೀಗೆಯೆ ಧ್ಯಾನಸ್ಥರಾಗುವು ದುಂಟು.

6. ಕೃಷ್ಣನ ಗುಣಗಳನ್ನು ಕಂಡು ಸ್ತ್ರೀಪುರುಷರೆಲ್ಲರೂ ಸುಖ ಹೊಂದುತಿದ್ದರು. ಗುಣವು ಎಲ್ಲರಿಗೂ ಪ್ರಿಯವಲ್ಲವೆ? ಕೃಷ್ಣನು ಎಲ್ಲಿಯೋ ಅಲ್ಲಿಯೆ ಬಹು ಜನರು ಕೂಡುತಿದ್ದರು. ಅವನ ಮಾತುಗಳನ್ನು ಕೇಳು ವುದೆಂದರೆ ಅವರಿಗೆ ಬಹು ಪ್ರೀತಿ. ಅವನನ್ನು ಬಿಟ್ಟು ಇರುವುದಕ್ಕೆ ಯಾರೂ ಮನವೊಪ್ಪುತಿದ್ದಿಲ್ಲ.

7. ಈಗ ಶರತ್ಕಾಲವು. ಚಂದ್ರನ ಪ್ರಕಾಶವು ಅತಿ ಶುಭ್ರವಾಗಿದೆ. ಅದು ಎಷ್ಟು ಮನೋಹರ! ಬೆಳ್ಳನೆ ಹಾಲಿನಂತೆ ಅದು ನೆಲವನ್ನು ಮುಚ್ಚಿ ಹರಡಿರುವುದು. ಗುಡ್ಡ-ಬೆಟ್ಟ, ಹೊಳೆ-ಹಳ್ಳ, ಹಾದಿ-ಬೀದಿ, ಎಲ್ಲಿ ನೋಡಿದರೂ ಶುಭ್ರವಾದ ಸುಂದರ ತಿಂಗಳಬೆಳಕು ಚೆಲ್ಲಿರುವುದು. ಈ ಬೆಳಕಿನಿಂದ ಎಲ್ಲಕ್ಕೂ ಒಂದು ಬಗೆಯ ಅಲಂಕಾರವುಂಟಾಯಿತು. ಕೃಷ್ಣನು ಈ ಸೌಂದರ್ಯವನ್ನು ನೋಡುವುದರಲ್ಲಿ ಮನಸೋತನು. ಅವನು ಧ್ಯಾನಸ್ಥನಾದನು. ಅಂದಿನ ಆ ಸೌಂದರ್ಯ ಮೂರ್ತಿಯನ್ನು ಅವನು ಎಂದೂ ಮರೆಯಲಿಲ್ಲ. ಆದರೆ ಅವನು ಒಬ್ಬನೇ ಆ ಸೌಂದರ್ಯವನ್ನು ಅನುಭವಿಸ ಬಲ್ಲನೆ? ಎಲ್ಲರಿಗೂ ಈ ಸೌಂದರ್ಯವನ್ನು ವಿವರಿಸಿ ಹೇಳಿ, ಅವರೂ ತನ್ನಷ್ಟೆ ಸುಖಹೊಂದುವ ಹಾಗೆ ಪ್ರಯತ್ನಮಾಡಿದನು. ಅವನ ಬಳಿಯಲ್ಲಿ ಎಷ್ಟೋ ಜನರಿದ್ದರು. ಇಂತಹ ರಾತ್ರಿಯಲ್ಲಿ ವಿನೋದದಿಂದ ಇರಬೇಕಲ್ಲವೆ? 'ಪ್ರಕೃತಿಯು ಎಷ್ಟು ಮನೋಹರವಾಗಿದೆ, ಪರಮಾತ್ಮನ ಪ್ರಕಾಶವು ಹೇಗಿದೆ,— ನೋಡಬನ್ನಿರಿ,' ಎಂದು ಎಲ್ಲರನ್ನೂ ತನ್ನ ಜತೆಯಲ್ಲಿ ಕರೆದುಕೊಂಡು ವಿನೋದವನ್ನು ಹೂಡಿದನು. ಅವರ ವಂಶದ ಪದ್ಧತಿಯಂತೆ, ವಿನೋದವೆಂದರೆ, ಗೂಳಿಗಳೊಳಗೆ ಯುದ್ಧವಾಯಿತು. ಬಲಿಷ್ಟರೊಳಗೆ ಮಲ್ಲಯುದ್ಧವಾಯಿತು. ಬಲಿಷ್ಠವಾದ ಗೂಳಿಯೊಡನೆ ಬಲಿಷ್ಠನಾದ ಮನುಷ್ಯನೊಬ್ಬನು ಹೋರಾಡಿದನು. ಎತ್ತುಹಾಯುವುದು, ಯುವಕನು ಅದನ್ನು ಹಾಯದಂತೆ ತಡೆಯುವನು. ಹೀಗೆ ಆಟಗಳು ಆಗಿ ಮುಗಿಯಲು, ಎಲ್ಲರೂ ಗಾಯನ ನರ್ತನಗಳನ್ನು ಪ್ರಾರಂಭಿಸಿದರು.

8. ಕೃಷ್ಣನು ಚೆನ್ನಾಗಿ ಹಾಡಲೂ ಬಲ್ಲನು, ಕುಣಿಯಲೂ ಬಲ್ಲನು. ಅವನ ಸುತ್ತಲು ಅವನ ಸ್ನೇಹಿತರೆಲ್ಲ ನಾಲ್ಕು ಕಡೆ ನಿಂದರು. ವೃಂದಾವನದಲ್ಲಿ ಯಾವಾಗಲು ಬಾಲಕ-ಬಾಲಿಕೆಯರು ಹಾಡಿ ಕುಣಿದು ವಿನೋದಗೊಳ್ಳುವರಲ್ಲವೆ? ಯಾವ ಹೆಣ್ಣುಮಗುವಿಗೆ ಹಾಡಲೂ ಕುಣಿಯಲೂ ಬಾರದೋ ಅದನ್ನು ಎಲ್ಲರೂ ನಿಂದಿಸುತಿದ್ದರು. ಆದರೆ ಈ ಪ್ರಕಾರದ ನರ್ತನದ ನಾನಾ ನಿಯಮಗಳಿದ್ದುವು. ಇಬ್ಬಿಬ್ಬರಾಗಿ ಅವರು ಕೈಗೆ ಕೈ ಹಿಡಿದು ನಿಂತು ಕುಣಿಯುವರು. ಕುಣಿಯುತ್ತ ದೂರದೂರಕ್ಕೆ ಸರಿವರು; ಪುನಃ ತೀರ ಸಮೀಪವಾಗುವರು. ಆಟವು ಮುಗಿಯಿತೆಂದರೆ ಎಲ್ಲ

ಬಾಲಿಕೆಯರು ಒಂದಾಗಿ ಸೇರಿ ತಾವು ತಾವಾಗಿ ಹಾಡಿಕೊಳ್ಳುತ್ತ ಕುಣಿಯುವರು.

9. ಕೃಷ್ಣನು ಸೂಚಿಸಿದಂತೆ, ವಿನೋದಕ್ಕಾಗಿ ನೂರಾರು ಬಾಲಕ ಬಾಲಕಿಯರು ಬಂದರು. ಅಣ್ಣ ಬಲರಾಮನೂ ಅಲ್ಲಿಗೇ ಬಂದನು. ಕೃಷ್ಣನು ಆ ದಿನ ಮುಖ್ಯ ಹಾಡುಗಾರನು; ಮುಖ್ಯ ನರ್ತಕನು. ಬಾಲಿಕೆಯರು ಸಾಲಾಗಿ ನಿಂತುಕೊಂಡರು. ಕೊಳಲೂದಲು ಆರಂಭ ವಾಯಿತು. ಎಲ್ಲರೂ ಸರಿಯಾಗಿ ತಾಳಕ್ಕೆ ತಕ್ಕ ಹಜ್ಜೆ ಇಟ್ಟರು. ಕೃಷ್ಣನು ಹಾಡಿ ಕುಣಿದನು. ಅವನ ಹಾಡುಗಳೆಲ್ಲವೂ ಭಗವಂತನ ಮಹಿಮೆ ಕೊಂಡಾಡುವ ಗೀತಗಳು; ದೇವರ ಪ್ರೇಮವನ್ನು ಬೋಧಿಸ ತಕ್ಕವು. ಅವನು ಹಾಡುತಿದ್ದಂತೆ, ಇಬ್ಬರಿಬ್ಬರಾಗಿ ಬಾಲಿಕೆಯರು ಅವನ ಜತೆಯಲ್ಲಿ ಕುಣಿದು, ಮರಳಿ ತಮ್ಮ ಸ್ಥಳಕ್ಕೆ ತೆರಳುವರು. ಕ್ರಮೇಣ, ಕೃಷ್ಣನು ಭಗವಂತನ ಪ್ರೇಮವನ್ನು ಧ್ಯಾನಮಾಡುತ್ತ ಮೈಮರೆದನು. ಹಾಡುನಾಟ್ಯಗಳು ಹೆಚ್ಚುತಿದ್ದಂತೆ, ಅವನು ಹೆಚ್ಚು ಹೆಚ್ಚಾಗಿ ಮೈಮರೆದು, ದೇವರ ಧ್ಯಾನದಲ್ಲಿ ಮುಳುಗಿದನು. ಅವನಲ್ಲಿ ದೈವಭಕ್ತಿಯು ಹೆಚ್ಚಾಗುತ್ತ ಬಂದಿತು. ಆಗ ಅವನ ಮೋಹನವಾದ ಕೊಳಲಧ್ವನಿಯನ್ನೂ, ಮೋಹನ ವಾದ ನರ್ತನವನ್ನೂ ಎಲ್ಲರೂ ನೋಡಿ ತುಂಬಾ ಕಣ್ಣುದಣಿದರು. ಎಲ್ಲ ರಲ್ಲಿಯೂ ದೈವಭಕ್ತಿಯು ಉಕ್ಕುತ್ತ ಬಂದಿತು. ಗೋವಳರೂ, ಗೋಪಿ ಯರೂ ಕೃಷ್ಣನೊಡನೆಯೆ ಕುಣಿಯುತ್ತ ಹಾಡುತ್ತ ಆ ರಾಸಕ್ರೀಡೆಯನ್ನು ಮುಗಿಸಿದರು.

10. ಆದರೂ ಕೃಷ್ಣನಿಗೆ ಧ್ಯಾನಭಂಗವಾಗಲಿಲ್ಲ. ಈ ಹಾಡು ಈ ನಾಟ್ಯ ಒಂದೂ ಅವನ ಮನಸ್ಸಿನಲ್ಲಿ ಇರಲಿಲ್ಲ. ಕಾಲುಗಳು ಕುಣಿಯು ತಿದ್ದುವು. ನಾಲಗೆ ಹಾಡುತಿತ್ತು. ಅವನು ಪರಮಾತ್ಮನ ಸೃಷ್ಟಿಯ ಸೌಂದರ್ಯವನ್ನೆ ಭಾವಿಸಿ ಭಾವಿಸಿ ಭಗವಂತನಲ್ಲೆ ಮನನೆಟ್ಟಿದ್ದನು. ಗೋಪರೂ, ಗೋಪಿಯರೂ ಮಹಾ ಆನಂದದಿಂದ ಮನೆಸೇರಿದರು. ಕೃಷ್ಣನ ಜತೆಯಿಂದ ತಮಗೆ ಇಷ್ಟು ಆನಂದ ಲಭಿಸಿತೆಂದು ಅವನನ್ನು ಕೊಂಡಾಡಿದರು.

# ೫. ಪರಾಕ್ರಮ.

1. ಕೃಷ್ಣನ ದೇಹಬಲವು ಚೆನ್ನಾಗಿದ್ದಿತು. ಪರಾಕ್ರಮವು ಎಲ್ಲಿ ಅಗತ್ಯವೊ, ಅಲ್ಲಿ ಅವನು ತನ್ನ ಪರಾಕ್ರಮವನ್ನು ತೋರಿಸುತಿದ್ದನು. ಯಾರೂ ಅದಕ್ಕಾಗಿ ಅವನನ್ನು ಹೊಗಳಬೇಕಾದ ಆವಶ್ಯಕತೆ ಇದ್ದಿಲ್ಲ.

2. ರಾತ್ರಿಕಾಲ. ಬೆಳದಿಂಗಳು ನಲಿಯುತ್ತಲಿದೆ. ಕೃಷ್ಣನು ಒಂದು ಕಡೆ ಒಬ್ಬನೇ ಕುಳಿತಿದ್ದು ತನ್ನ ಮನಸ್ಸನ್ನು ಅರಳಿಸಿರುವನು. ಈ ಲೋಕದ ಸುಖದುಃಖಗಳನ್ನು ಮರೆತು ಭಗವಂತನನ್ನು ಕುರಿತು ಧ್ಯಾನ ಮಾಡುತ್ತಲಿರುವನು. ಅವನು ದೇವಧ್ಯಾನದಲ್ಲಿರುವಾಗ, ದನಗಳು ಮೇಯುತಿದ್ದುವು. ದನಗಳಿಗೆ ಕೃಷ್ಣನೆಂದರೆ ಬಹಳ ಪ್ರೀತಿ. ಕೃಷ್ಣನು ದನಗಳ ಸೇವೆಮಾಡುವುದರಲ್ಲಿ ಗಟ್ಟಿಗನಾಗಿದ್ದನು.

3. ಈ ಮಧ್ಯೆ, ಫಕ್ಕನೆ ದನಗಳು ಬೆಚ್ಚಿದಂತೆ ತೋರಿತು. ನಾಲ್ಕೂ ಕಡೆ ಬಾಲ ಎತ್ತಿ ಬೆದರಿ ಓಡಾಡಿದುವು. ಹಂಭೇ-ಹಂಭೇ ಎಂದು ಕೂಗಿದುವು. ಆ ಕೂಗಿಗೆ ಕೃಷ್ಣನು ಎಚ್ಚರ ಹೊಂದಿದನು. ಅತ್ತ ನೋಡಿದನು. ದೊಡ್ಡದೊಂದು ಹೋರಿಯು ಕೊಂಬು ಚಾಚಿ ಅವುಗಳನ್ನು ಹಾಯುತ್ತ ಕೆಲವನ್ನು ಗಾಯಪಡಿಸಿದೆ! ಕೂಡಲೆ ಕೃಷ್ಣನು ಅಲ್ಲಿಂದ ಎದ್ದನು. ಗೋವುಗಳನ್ನು ಯಾರೂ ಬಾಧಿಸಿದರೆ ಅವನು ಸಹಿಸಲಾರನು. ಅವನು ಎದ್ದು ನಿಂತ ಕೂಡಲೆ ಆ ಗೂಳಿಯು ಅವನನ್ನು ಹಾಯಲು ಬಂದಿತು. ಕೊಂಬುಗಳಿಂದ ಕೃಷ್ಣನನ್ನು ಎತ್ತಿಕೊಂಡು, ದೂರಕ್ಕೆ ಬೀಸಿ ಒಗೆಯಬೇಕೆಂದೇ ಅದರ ಆಸೆ. ಕೃಷ್ಣನು ಅದರ ಕೊಂಬುಗಳಿಂದ ಅದನ್ನು ಬಿಗಿ ಹಿಡಿದು, ಅದರ ಬೆನ್ನ ಮೇಲೆ ಹಾರಿದನು. ಅವನ ತೋಳುಬಲದಿಂದ ಅದರ ಕೊಂಬುಗಳನ್ನು ಬೇರಿನಿಂದ ಕಿತ್ತು, ಅವೇ ಕೊಂಬುಗಳಿಂದ ಅದನ್ನು ಚುಚ್ಚಿ ಬಡೆದು ಅದಕ್ಕೆ ಬುದ್ಧಿ ಕಲಿಸಿದನು. ಹಾಯಿದರೆ ಗೋವುಗಳಿಗೆ ಹೇಗೆ ನೋವಾಗುವುದೆಂದು ಆಗ ಅದಕ್ಕೆ ಚೆನ್ನಾಗಿ ತಿಳಿಯಿತಲ್ಲವೆ? ಗರ್ವದ ಗೂಳಿಯು ಸೋತು, ಅಲ್ಲೆ ಬಿದ್ದುಕೊಂಡಿತು.

4. ಗೋವಳರು ಆ ಕಡೆಗೆ ಬಂದರು. ಆ ಗೂಳಿಯು ಎಷ್ಟೋ ದನಗಳನ್ನೂ ಕರುಗಳನ್ನೂ ಹಿಂದೆ ಕೊಂದಿದ್ದಿತು! ಅದನ್ನು ಕೃಷ್ಣನಲ್ಲದೆ

ಇನ್ನಾರೂ ಹದಮಾಡಲಾರದಿದ್ದರು. ದುಷ್ಟ ಗೂಳಿಯು ರಾಕ್ಷಸರಂತೆ ಗೋಹತ್ಯ ಮಾಡಿತಲ್ಲವೆ? ಅದೇ **ವೃಷಭಾಸುರ**ನೆಂದಾಯಿತು. ಕೃಷ್ಣನು ವೃಷಭಾಸುರನನ್ನು ಗೆದ್ದು ಕೊಂದಿಕ್ಕಿದನು.

5. ಕೃಷ್ಣನ ಅದ್ಭುತ ಪರಾಕ್ರಮದ ವೃತ್ತಾಂತವು ನಾಲ್ಕೂ ಕಡೆ ಹಬ್ಬಿತು. ಮಥುರೆಯಲ್ಲಿದ್ದ ಕಂಸನ ಕಿವಿಗೂ ಮುಟ್ಟಿತು. ಅವನು ಆ ಸುದ್ದಿಯನ್ನು ಅಷ್ಟೊಂದು ಹೆಚ್ಚಾಗಿ ಮನಸ್ಸಿಗೆ ತೆಗೆದುಕೊಳ್ಳಲಿಲ್ಲ. 'ಬಲಶಾಲಿಯೊಬ್ಬನು ಇರುವನಾದರೆ ಇರಲಿ, ನನಗೇನು,' ಎಂದನು ? ಕೃಷ್ಣನು ಯಾರೆಂದು ಅದು ವರೆಗೂ ಅವನು ತಿಳಿದಿರಲಿಲ್ಲ.

6. ಅಂದಿನ ನಾರದರು ಇಂದೊಮ್ಮೆ ಅವನ ಸಭೆಗೆ ಬಂದೇ ಬಂದರು. ನಾರದನಿಗೆ ಅರಿಯದ ಮಾತಿದೆಯೆ? ಅವನು ಎಲ್ಲ ಅಂತರಂಗದ ಸುದ್ದಿಯನ್ನು ಕಂಸನಿಗೆ ವಿವರಿಸಿ ಹೇಳಿದನು. ಹೇಗೆ ಮಕ್ಕಳನ್ನು ಬದಲಾಯಿಸಿದರೆಂದೂ, ದೇವಕಿಯ ಎಂಟನೆ ಮಗನು ಈಗ ಎಲ್ಲಿರುವನೆಂದೂ, ಎಲ್ಲ ತಿಳುಹಲಾಯಿತು. ಆಗ ಕಂಸನಿಗಾದ ಭಯವನ್ನು ಬಣ್ಣಿಸುವರಾರು? ಅವನಿಗೆ ಇನ್ನು ಹಸಿವು ಉರಿಯದು; ನಿದ್ದೆ ಹತ್ತದು; ರಾಜ್ಯವು ಕಣ್ಣಿಗೆ ಕಾಣಿಸದು. ಆ ಕೃಷ್ಣನನ್ನು ಹೇಗೆ ತಾನೆ ವಿನಾಶಗೊಳಿಸಬಹುದು ಎಂಬುದೇ ಅವನಿಗೆ ಚಿಂತೆ.

7. ಅವನ ಸಭಿಕರೂ ಅವನಂತಹರೆ. ಧನುರ್ಯಜ್ಞವನ್ನು ಮಾಡೋಣ, ಎಂದರು. ಆ ಯಜ್ಞಕ್ಕೆ ಊರೊಳಗಣ ಮಲ್ಲರನ್ನು ಕರೆಯಬೇಕಾಗುವುದು. ಕೃಷ್ಣಬಲರಾಮರು ಮಲ್ಲಯುದ್ಧದಲ್ಲಿ ಪ್ರವೀಣರಲ್ಲವೆ? ಅವರನ್ನೂ ಕರೆತರಲು ಜನವು ಹೋಯಿತು. ಮಲ್ಲಯುದ್ಧದ ಹೆಸರು ಕೇಳಿಯೆ ಅವರು ಬರುವರು. ಯಾವನೊಬ್ಬ ಜಟ್ಟಿಯನ್ನು ಯುದ್ಧಕ್ಕೆ ಕರೆದ ಕೂಡಲೆ ಅವನು ಬಾರದಿದ್ದರೆ, ಅದು ಅವನಿಗೆ ಅಪಕೀರ್ತಿಯಲ್ಲವೆ? ಕೃಷ್ಣಬಲರಾಮರನ್ನು ಕರೆತರಲು ಹೋದ ದೂತನ ಹೆಸರು **ಅಕ್ರೂರ.** ಅವನು ಗೋಕುಲಕ್ಕೆ ಹೋದನು.

8. ಅದೇ ಸಮಯಕ್ಕೆ ಸರಿಯಾಗಿ, ಗೋಕುಲದಲ್ಲಿ ಮಹಾ ಬಾಧೆ ಕೊಡುವ ಕುದುರೆಯೊಂದು ಗೋವಳರಲ್ಲಿ ಬೆದರಿಕೆ ಉಂಟು ಮಾಡಿದ್ದಿತು. ಅದರ ಮೈತುಂಬ ಉದ್ದುದ್ದ ಕೂದಲು; ಅದರ ಹೆಸರು **ಕೇಶಿ.** ಅದು

ನರಮಾಂಸವನ್ನೆ ತಿನ್ನುವುದು, ಗೋವುಗಳನ್ನು ಕಂಡಲ್ಲಿ ಸೀಳುವುದು. ಎಂತಹ ರಾಕ್ಷಸ ಕುದುರೆ ಅದು! ಕಾಡು-ಕುದುರೆ. ಅದು ಸುಳಿದಲ್ಲಿಗೆ ಯಾರೂ ಹೋಗುವುದಿಲ್ಲ. ಕೃಷ್ಣನು ಮಾತ್ರ ಬೆದರಲಿಲ್ಲ. ಅದರ ಬಾಯಿಗೆ ಹತ್ತಿರವಾಗಿ ನಿಂತುಕೊಂಡನು. ಅದು ಅವನ ತೋಳನ್ನು ಕಡಿಯಿತು. ಕೃಷ್ಣನು ಮಾತೆತ್ತಲಿಲ್ಲ. ಮರಳಿ ಕಡಿಯಲು ಬಾಯಿ ತೆರದ ಕೂಡಲೆ, ಬರ್ಚಿ ಹಿಡಿದಿದ್ದ ತನ್ನ ಇಡೀ ತೋಳನ್ನೆ ಅದರ ಬಾಯಿ ಯೊಳಕ್ಕೆ ತುರುಕಿದನು. ಕುದುರೆ ನೆತ್ತರು ಕಾರಿತು; ಅದರ ಪ್ರಾಣವು ಹಾರಿತು. ರಾಕ್ಷಸ-ಕುದುರೆಯಾದ ಕೇಶಿಯನ್ನು ಕೃಷ್ಣನು ಕೊಂದು **ಕೇಶವನಾದನು.**

9. ಈ ವೃತ್ತಾಂತವೂ ನಾರದನಿಗೆ ತಿಳಿಯದೆ ಇಲ್ಲ. ಅವನು ಪುನಃ ಮಥುರೆಗೆ ಬಂದನು. ಕಂಸನಿಗೆ ಈ ಪರಾಕ್ರಮದ ವೃತ್ತಾಂತವನ್ನು ತಿಳುಹಿದನು. ಈ ಮಲ್ಲಯುದ್ಧದ ತಂತ್ರದಿಂದ ಕೃಷ್ಣನಿಗೆ ಯಾವ ಅಪಾ ಯವೂ ಉಂಟಾಗದು ಎಂದೂ ಕೂಡಿಸಿ ಹೇಳಿದನು.

10. ಅಕ್ರೂರನು ಗೋಕುಲಕ್ಕೆ ತೆರಳಿ, ಕೃಷ್ಣಬಲರಾಮರು ಮಥು ರೆಗೆ ಮಲ್ಲಯುದ್ಧಕ್ಕೆ ಬರಬೇಕೆಂದು ಅವರನ್ನು ಕಂಸನ ಹೆಸರಲ್ಲಿ ಕರೆದನು. ಕೃಷ್ಣಬಲರಾಮರು ಕ್ಷತ್ರಿಯರಲ್ಲವೆ? ಕೂಡಲೆ ಮಥುರೆಗೆ ಹೋಗಲು ಒಪ್ಪಿದರು. ಗೋಪಬಾಲಕರೆಷ್ಟೋ ಮಂದಿ ಈ ವಿನೋದವನ್ನು ನೋಡು ವುದಕ್ಕಾಗಿ ಕೃಷ್ಣನ ಸಂಗಡ ಹೊರಟರು. ಕೃಷ್ಣಬಲರಾಮರು ಅಕ್ರೂರ ನೊಡನೆ ರಥವನ್ನೇರಿ ಮಥುರೆಗೆ ನಡೆದರು. ರಾಜಪುರದಿಂದ ಸ್ವಲ್ಪ ದೂರದಲ್ಲಿಯೆ ಅಕ್ರೂರನು ಅವರಿಬ್ಬರನ್ನು ರಥದಿಂದ ಕೆಳಕ್ಕಿಳಿಸಿದನು. ಕೃಷ್ಣ ಬಲರಾಮರು ಗೋಪರ ವೇಷವನ್ನು ಧರಿಸಿದ್ದರು. ಅವರು ರಾಜ ರಂತೆ ವೇಷ ಧರಿಸಿ ಮುಂದರಿಸಬೇಕೆಂದು ನಿಶ್ಚಯ ಮಾಡಿದರು.

11. ಕಂಸರಾಜನ ಅಗಸನ ಮನೆ ಸಮೀಪದಲ್ಲೆ ಇದ್ದಿತು. ಅಲ್ಲಿ ರಾಜನು ಧರಿಸಿಕೊಳ್ಳುತ್ತಿದ್ದ ನಾನಾ ವೇಷಭೂಷಗಳನ್ನು ಒಗೆದು ಒಣಗಲು ಹಾಕಿದ್ದರು. ಇವರು ಅವನಿಂದ ಕೆಲವು ಬಟ್ಟೆಗಳನ್ನು ಬೇಡಿದರು. ಅಗ ಸನು ನಕ್ಕು ಇವರನ್ನು ನಿಂದಿಸಿದನು. ಇವರನ್ನು ಓಡಿಸಬೇಕೆಂದು ಬಗೆ ದನು, ಬೈದನು. ಕೃಷ್ಣನು ಅವನ ಬಾಯಿ ತಡೆಯಲು ಒಂದೇಟು

ಕೊಟ್ಟನು. ಅಗಸನು ಬಾಯಿ ಮುಚ್ಚಿ ಮಲಗಿದನು; ಮತ್ತೆ ಏಳಲಿಲ್ಲ; ಅಣ್ಣತಮ್ಮಂದಿರಿಬ್ಬರೂ ಮನವೊಪ್ಪುವಂತೆ ಉತ್ತಮ ಪೋಷಾಕುಗಳನ್ನು ಹಾಕಿಕೊಂಡರು. ಮಾಲೆಕಾರರು ಇವರನ್ನು ಕಂಡು ಇವರು ರಾಜ ಪುತ್ರರೆಂದು ಬಗೆದು, ಮಾಲೆಗಳನ್ನು ತೊಡಿಸಿ, ಇವರನ್ನು ಸುಂದರವಾಗಿ ಸಿಂಗರಿಸಿದರು. ಸ್ವಲ್ಪ ಮುಂದೆ ನಡೆವಾಗ, ಕುಬ್ಜೆಯಾದೊಬ್ಬ ದಾಸಿಯು ನಾನಾ ಸುಗಂಧ ದ್ರವ್ಯಗಳನ್ನು ಅವರಿಗೆ ಒಪ್ಪಿಸಿದಳು. ಹೀಗೆ, ಗೋವ ಳರಂತೆ ತೋರುತಿದ್ದ ಬಾಲಕರಿಬ್ಬರೂ ರಾಜಪುತ್ರರಂತೆ ಅಲಂಕಾರ ಮಾಡಿ ಕೊಂಡರು.

12. ಸೋದರರಿಬ್ಬರೂ ರಾಜಪುರಿಯೊಳಕ್ಕೆ ನಡೆದರು. ಅವರು ನೆಟ್ಟಗೆ ಧನುಃಶಾಲೆಗೆ ಹೋದರು. ಯಾವ ಧನುಸ್ಸನ್ನು ಧನುರ್ಯಜ್ಞ ದಲ್ಲಿ ಪೂಜಿಸಬೇಕೆಂದು ಅಲ್ಲಿ ಇಟ್ಟಿದ್ದರೊ, ಅದನ್ನು, ಅವರು ನೋಡು ತಿದ್ದಂತೆ ಪುಡಿಗೈದರು.

13. ಇದನ್ನೂ ಕಂಸನು ಕೇಳಿದನು. ಅವನಿಗೆ ಬಹಳ ಸಿಟ್ಟು. ಕೃಷ್ಣ-ಬಲರಾಮರನ್ನು ಹೇಗಾದರೂ ಕೊಲ್ಲಬೇಕೆಂದನು. ಲೋಕದಲ್ಲಿ ಪ್ರಾಣಭಯಕ್ಕಿಂತ ಹೆಚ್ಚಿನ ಭಯವಿಲ್ಲ. ಆಗ ನ್ಯಾಯ-ಅನ್ಯಾಯಗಳ ವಿಚಾರದ ಕಡೆಗೆ ಮನಸ್ಸು ಒಗ್ಗದು. ಕಂಸನು ಭೀತನಾಗಿ, 'ಕುವಲಯಾ ಪೀಡ' ಎಂಬ ಹೆಸರಿನ ದೊಡ್ಡ ಮದ್ದಾನೆಯನ್ನು ರೇಗಿಸಿ ಅವರ ಮೇಲೆ ಹಾಯಿಸಬೇಕೆಂದು ಅಪ್ಪಣೆಕೊಟ್ಟನು. **ಚಾಣೂರ-ಮುಷ್ಟಿಕ**ರೆಂಬುವ ಇಬ್ಬರು ಮುಖ್ಯ ಜಗಜಟ್ಟಿಗಳನ್ನು ಕೃಷ್ಣನನ್ನು ಕೊಲ್ಲುವುದಕ್ಕಾಗಿಯೆ ವೀಳೆಯ ಕೊಟ್ಟು ಕಳುಹಿಸಿದನು.

14. ಕೃಷ್ಣನು ಯುದ್ಧರಂಗದ ಬಳಿಗೆ ಬಂದನು. ಕುವಲಯಾ ಪೀಡವು ಸೊಂಡಿಲನ್ನು ಬೀಸುತ್ತ ಬೀಸುತ್ತ ಕೃಷ್ಣನ ಕಡೆಗೆ ಓಡಿ ಬಂದಿತು. ಕೃಷ್ಣನಿಗೆ ಭಯವಿಲ್ಲ. ಆದರೆ ಸುತ್ತಲಿದ್ದ ಜನರು, 'ಹಾ ಹಾ' ಎಂದರು. ಕೃಷ್ಣನು ಕೂಡಲೆ ಆ ಮತ್ತಗಜದ ನೆತ್ತಿಗೆ ನೆಗೆದು, ಅದರ ಪಕ್ಕಕ್ಕೆ ಫಕ್ಕನೆ ಒಂದು ಬಲವಾದ ಗುದ್ದು ಹೊಡೆದನು. ಅದು ಯಾವ ನರಕ್ಕೆ ತಗಲಿತೊ ತಿಳಿಯದು, ಅದರ ಕಾಲುಗಳೆರಡೂ ಚಲಿಸದಾದುವು. ಅದನ್ನು ಬೀಳಿಸುವುದು ಒಂದು ನಿಮಿಷದ ಕೆಲಸ. ಅದಕ್ಕೆ ಓಡಲು ಬರು

ವುದಿಲ್ಲ. ಅದರ ದಾಡೆಗೆ ತೂಗಿ ಅದನ್ನು ಮುರಿದು, ಕೃಷ್ಣನು ಆ ದಾಡೆಯಿಂದಲೆ ಅದರ ಮೈಯನ್ನು ತಿವಿದು, ಅದನ್ನು ಕೊಂದಿಕ್ಕಿದನು. ಎಷ್ಟು ಜನರು ರಂಗಾಲಯಕ್ಕೆ ಬಂದಿದ್ದರು! ಅವರೆಲ್ಲರೂ ಕೃಷ್ಣನ ಪರಾಕ್ರಮಕ್ಕೆ ಬೆರಗಾಗಿ ತಲೆದೂಗಿದರು.

15. ಮದ್ದಾನೆಯು ಬಿದ್ದುಹೋಯಿತು. ಅಬ್ಬಬ್ಬಾ, ಕಂಸನ ಸಿಟ್ಟೇ! ಕೂಡಲೆ ಇಬ್ಬರೂ ಜಗಜಟ್ಟಿಗಳು ಬಾಲಕರಿಬ್ಬರನ್ನು ಆಕ್ರಮಿಸಬೇಕೆಂದನು. ಅವರು ಇಬ್ಬರೂ ಯುದ್ಧಸನ್ನದ್ಧರಾಗಿ ಓಡಿ ಹಾರಿ ಬಂದರು. ಇದು ಅನ್ಯಾಯವೆಂದು ಜನರೆಲ್ಲರೂ ಕೂಗಿದರು. ಆದರೆ ಜನರ ಮಾತು ಕೇಳುವುದಕ್ಕೆ ಕಂಸನ ಕಿವಿ ಕಿವುಡುಕಟ್ಟಿದೆ. ಚಾಣೂರನು ಕೃಷ್ಣನನ್ನೂ ಮುಷ್ಟಿಕನು ಬಲರಾಮನನ್ನೂ ಹಿಡಿದುಕೊಂಡರು. ಕೃಷ್ಣನ ಆಯುಧವೆಂದರೆ ಅದೇ ಕೊಳಲು. ಚಾಣೂರನು ಸೋಲುತ್ತಾನೆಂದು ತಿಳಿದು, ಕಂಸನು ಗಂಟೆ ಬಾರಿಸಿ, ಯುದ್ಧ ತಡೆಯಬೇಕೆಂದಿದ್ದನು. ಆದರೆ, ಚಾಣೂರನನ್ನು ಕೃಷ್ಣನು ಆಗಲೆ ಬೀಳಿಸಿ, ಅವನ ಎದೆಯ ಮೇಲೆ ಮಂಡಿಹಾಕಿ ಕುಳಿತುಕೊಂಡು, ನಾಲ್ಕಾರು ಥಪರಾಕುಗಳನ್ನು ಬಲವಾಗಿ ಹೊಡೆದನು. ಚಾಣೂರನು ನಂತರ ಏಳಲಿಲ್ಲ. ಬಲರಾಮನು ಕಡಿಮೆಯವನೆ? ಮುಷ್ಟಿಕನನ್ನು ಮುಷ್ಟಿಹೊಡೆದು ಅವನು ಎಂದೋ ಕೊಂದಿದ್ದನು.

16. ಬಳಿಕ ಒಬ್ಬೊಬ್ಬರಾಗಿ ಎಷ್ಟೋ ಮಲ್ಲರು ಕೃಷ್ಣನೊಡನೆ ಯುದ್ಧ ಮಾಡಿದರು. ಅವರೊಳಗೆ ಸತ್ತವರೇ ಹೆಚ್ಚು; ಉಳಿದವರು ಬಿದ್ದಲ್ಲೇ ಉಸಿರು ತಡೆದು ಸುಮ್ಮನಿದ್ದರು.

17. ಕಂಸನು ತಲೆಗೆಟ್ಟು, 'ಈಗಲೆ ಈ ಗೋವಳರನ್ನು ಬಡೆದು ಹೊರಕ್ಕೆ ದೂಡಿರಿ! ಇವರ ದನಕರುಗಳನ್ನು ಹಿಡಿದು ಇಲ್ಲಿಗೆ ತನ್ನಿರಿ!' ಎಂದು ಯಾರಿಗೋ ಕೂಗಿಕೊಂಡನು. ಈ ಅಪ್ಪಣೆಯನ್ನು ಕೇಳಿ ಕೃಷ್ಣನು ನಕ್ಕನು. 'ಇರಲಿ, ಈ ಅಪ್ಪಣೆಯನ್ನು ಅಬ್ಬರದಿಂದ ಕೊಟ್ಟಿರಿ! ಗೋವಳರು ಹೊರಕ್ಕೆ ಹೋಗದೆ ಉಳಿದರೆ, ಅವರಿಗೆ ಶಿಕ್ಷೆ ಏನಿದೆ?' ಎಂದು ಕೇಳಿದನು.

18. 'ಶಿಕ್ಷೆ ಏನಿದೆಯೇ? ಕೊರಳಿಗೆ ನನ್ನ ಪಾದುಕೆಗಳನ್ನು ಕಟ್ಟಿಸಿ, ಹೊರಗಟ್ಟುವೆನು' ಎಂದು ಅವನು ಒದರಿದನು.

19. ಕೃಷ್ಣನು ತನ್ನವರಿಗೆ ಇಂತಹ ಅವಮಾನವನ್ನು ಇವನು ಆಡಿದುದರಿಂದ ಸಿಟ್ಟಾಗಿ, ಕಂಸನಿದ್ದಲ್ಲಿಗೆ ನಡೆದು, ಅವನನ್ನೇ ಆಕ್ರಮಿಸಿದನು. ಅವನ ಕೇಶದಾಮವನ್ನು ಹಿಡಿದು, ಅವನನ್ನು ನೆಲಕ್ಕೆ ಎಳೆದು ಕೆಡವಿದನು. ಕೂಡಲೇ ಅವನ ಎದೆಯ ಮೇಲೆ ಕುಳಿತು ಅವನನ್ನು ಕೊಂದೇ ಬಿಟ್ಟನು. ಯುದ್ಧರಂಗದಲ್ಲಿ ಅವನನ್ನು ಕೃಷ್ಣನು ಎಷ್ಟು ಬಲವಾಗಿ ಒತ್ತಿದ್ದನೆಂದರೆ, ಅವನ ದೇಹವು ಮಣ್ಣಿನಲ್ಲಿ ಹೂತುಹೋಗಿದ್ದಿತು!

20. ಕಂಸನ ತಮ್ಮನಾದ ಸುನಾಮನು ಕೃಷ್ಣನ ಮೇಲೆ ಈಗ ಎರಗಲು, ಅವನು ಬಹಳ ಮುಂದಕ್ಕೆ ನಡೆದು ಬರುವ ಮೊದಲೇ ಅವನನ್ನು ಅರೆಹಾದಿಯಲ್ಲಿ ಬಲರಾಮನು ಇರಿದನು. ರಾಜ್ಯದಲ್ಲಿ ದೊಡ್ಡ ಗಲಭೆ ಉಂಟಾಯಿತು. ಇಬ್ಬರು ರಾಜರೂ ಮಡಿದರಲ್ಲವೇ? ರಾಜನ ಪಕ್ಷದವರು ಮಾತ್ರ ಮುಂದಕ್ಕೆ ಅಡಿ ಇಡಲಿಲ್ಲ. ಫಕ್ಕನೆ ಸಾಯುವುದಕ್ಕೆ, ಸತ್ತೇ ಬೀಳುವುದಕ್ಕೆ, ಯಾರು ತಾನೆ ಸುಲಭವಾಗಿ ಒಪ್ಪುವರು?

21. ಕಂಸನು ಮಡಿದನು. ಕೃಷ್ಣ-ಬಲರಾಮರು ಮೊದಲು ವಸುದೇವ-ದೇವಕಿಯರಿದ್ದಲ್ಲಿಗೆ ತೆರಳಿ, ಅವರನ್ನು ಕಾರಾಗೃಹದಿಂದ ಸೆರೆ ಬಿಡಿಸಿದರು. ಇಬ್ಬರು ಸೋದರರೂ ಅವರ ಕಾಲಿಗೆ ಎರಗಿದರು; ತಂದೆ ತಾಯಿಯರ ದುಃಖವನ್ನು ಕಂಡು ಇವರಿಬ್ಬರ ಎದೆ ಒಡೆಯಿತು, ಕಣ್ಣೀರು ಮಿಡಿಯಿತು, ಹಲ್ಲು ಕಡಿಯಿತು. 'ಬಾಲ್ಯದಲ್ಲಿ ನಾವು ತಾಯಿತಂದೆಯರ ಸೇವೆ ಮಾಡದಂತೆ, ಅವರು ಸಂತೋಷ ಪಡುವ ಹಾಗೆ ನಾವು ಆಡದಂತೆ, ಈ ದುಷ್ಟ ಕಂಸನು ನಮ್ಮ ಬಾಲ್ಯವನ್ನೇ ಹಾಳುಮಾಡಿದನಲ್ಲ!' ಎಂದು ಅವರಿಬ್ಬರೂ ಮನದಲ್ಲಿ ನೊಂದರು.

22. ಬಳಿಕ, ಕಂಸನ ಮಡದಿಯರು ಅಲ್ಲಿಗೆ ಬಂದು ಕಂಸನ ದೇಹವನ್ನು ಬಳಸಿ ನಿಂದು, ಬಹಳವಾಗಿ ಗೋಳಾಡಿದರು. ಕೋಮಲ ಹೃದಯವುಳ್ಳ ಕೃಷ್ಣನ ಕಣ್ಣಿನಲ್ಲಿ, ಈ ನೋಟದಿಂದ ನೀರು ಒಸರಿತು. ಅವರನ್ನು ಅವನು ನಾನಾ ಬಗೆಯಾಗಿ ಸಮಾಧಾನ ಪಡಿಸಿದನು. ಅವರ ದುಃಖವು ಸಮಾಧಾನ ಹೊಂದುವುದುಂಟೇ? ಅವರು ಹುಚ್ಚರಂತಾದರು.

23. ಕಂಸನ ತಂದೆಯಾದ ಉಗ್ರಸೇನನು ಕಾರಾಗೃಹದಲ್ಲಿ ಇದ್ದನಲ್ಲವೆ? ಅವನಿಗೂ ಬಿಡುಗಡೆಯಾಯಿತು. ತನ್ನ ಮಕ್ಕಳು ಮಡಿದರೆಂದು

ತನ್ನ ರಾಣಿಯೊಡನೆ ಗೋಳಿಡುತ್ತ ಅವನು ಕೃಷ್ಣನಿರುವಲ್ಲಿಗೆ ಬಂದನು. ಇಂತಹ ಹಣ್ಣಾದ ಮುದುಕರು ಬಾಯಿಬಿಡುವುದನ್ನು ನೋಡಿ, ಅಲ್ಲಿದ್ದವರೆಲ್ಲರೂ ದುಃಖಿತಡಿದು ತಣ್ಣಗಾದರು. 'ನನ್ನದೆಲ್ಲವನ್ನೂ ಪಡೆಯಿರಿ. ನನ್ನ ರಾಜ್ಯವೂ ನಿಮ್ಮದಾಗಲಿ; ಆದರೆ ಕಂಸನಿಗೆ ಉತ್ತರಕ್ರಿಯೆ ಮಾಡಲು ಅನುಮತಿ ಪಾಲಿಸಬೇಕು. ಅಲ್ಲದಿದ್ದರೆ ಸತ್ತವನಿಗೆ ನರಕವಲ್ಲವೆ?' ಎಂದು ಮುದುಕನು ಪ್ರಾರ್ಥಿಸಿಕೊಂಡನು.

24. 'ಇಷ್ಟು ಜನರಿಗೆ ಹೇಗೆ ಸಮಾಧಾನವಾಗುವುದು? ಇದಕ್ಕೆ ಉಪಾಯವು ಯಾವುದು?' ಎಂದು ಕೃಷ್ಣನು ಚೆನ್ನಾಗಿ ಆಲೋಚಿಸಿದನು. ಅವನು ಉಗ್ರಸೇನನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಮೃತ ರಾಜರುಗಳಿಗೆ ಎಂತಹ ರೀತಿಯಲ್ಲಿ ಉತ್ತರಕ್ರಿಯೆಯನ್ನು ಮಾಡುವರೊ ಅದನ್ನೆ ಕಂಸನಿಗೂ ಮಾಡಿಸಲು ಅಪ್ಪಣೆಕೊಟ್ಟನು. ನಂತರ,—ಮಹಾ ರಾಜನೆ, ನನಗೆ ರಾಜ್ಯವು ಬೇಡ, ರಾಜ್ಯಕ್ಕೂ ನಾನು ಬೇಡ. ರಾಜ್ಯದ ಆಸೆಯಿಂದ ನಾನು ಇತ್ತ ಬಂದವನಲ್ಲ. ರಾಜ್ಯ ಬೇಕೆಂದು ನಿಮ್ಮ ಮಗನನ್ನು ನಾನು ಕೊಂದುದಲ್ಲ. ಜನರಿಗೆ ಹಿತವಾಗಲೆಂದೂ, ಅಧರ್ಮವು ಸಾಯಲೆಂದೂ, ದುಷ್ಟತನವು ದಮನವಾಗಲೆಂದೂ ಈ ರೀತಿ ಮಾಡಿದೆನು. ನಿಮ್ಮ ಪುತ್ರನು ನಿಮ್ಮ ಕುಲದಲ್ಲಿ ನೀಚನು. ಅಧರ್ಮದ ದಾಸನೇ ಅವನು. ಅದಕ್ಕಾಗಿಯೆ ನಾನು ಅವನನ್ನೂ ಅವನ ಒಡನಾಡಿಗಳನ್ನೂ ಕೊಂದಿಕ್ಕಿದೆನು. ನಾನು ಕಾಡಾಡಿಯು; ಕಾಡಿಗೇ ಹೋಗಲು ನನ್ನ ಮನ ಒಪ್ಪುವುದು. ಈ ಗೋವಳರೆ ನನಗೆ ಬಂಧುಗಳು. ಅವರೊಡನೆ ನಾನು ದನಮೇಯಿಸುವೆನು, ಅದೇ ನನಗೆ ಸುಖವು. ರಾಜ್ಯವನ್ನು ಕಟ್ಟಿಕೊಂಡು ನಾನು ಬಿದ್ದುಕೊಳ್ಳುವವನಲ್ಲ. ಹುಲ್ಲುಗಾವಲಿನ ಮೇಲೆ ಮದ್ದಾನೆಯಂತೆ ನಾನು ತಿರುಗುವೆನು. ನನಗೆ ರಾಜಪದವಿಯು ಬೇಡವಾಗಿದೆ. ಅದರಿಂದ ನನಗೇನು ಪ್ರಯೋಜನ? ನಾನು ಹೇಳುವುದನ್ನು ಮನ್ನಿಸಬೇಕು. ತಾವು ರಾಜರು; ನಮಗೆ ವಂದ್ಯರು; ತಾವೇ ಯದುಕುಲದಲ್ಲಿ ಶ್ರೇಷ್ಠರು; ಯದು ಕುಲಕ್ಕೆ ತಾವೇ ಒಡೆಯರು. ತಾವು ಇನ್ನು ರಾಜರಾಗಿ, ಪ್ರಜೆಗಳನ್ನು ಪಾಲಿಸಿರಿ. ತಾವು ಹಾಗೆ ಮಾಡಿದರೆ ನನಗೆ ಅದೇ ಸುಖವು' ಎಂದು ಉಗ್ರಸೇನಮಹಾರಾಜನಲ್ಲಿ ಹೇಳಿಕೊಂಡನು.

25. ಕೃಷ್ಣನ ಮಾತುಗಳಿಂದ ರಾಜನು ಸಮಾಧಾನಹೊಂದಿದನು. ಅವನ ರಾಣಿಯೂ ಸ್ವಲ್ಪ ಶೋಕವನ್ನು ಮರೆತಳು. ಕೃಷ್ಣನು ರಾಜ್ಯವನ್ನು ಗೆದ್ದುಕೊಂಡನು. ಆದರೆ ಹೇಗೆ ಹೇಳಿದನು! ರಾಜ್ಯದಲ್ಲೆಲ್ಲರೂ ಚಕಿತ ರಾದರು. ಇದೀಗ ಸ್ವಾರ್ಥತ್ಯಾಗವು. ದೊಡ್ಡದೊಂದು ರಾಜ್ಯವು ಅವನ ಕೈಗೆ ದೊರೆತರೂ, ಎಷ್ಟು ಸುಲಭವಾಗಿ ಅವನು ಅದನ್ನು ಮರಳಿ ಒಪ್ಪಿಸಿ ಕೊಟ್ಟನು! ಇತರರು ಯಾರಾದರೂ ಹಾಗೆ ಮಾಡುತಿದ್ದರೆ? ಕೃಷ್ಣನು ಯೋಗಿಯು, ಅವನು ಒಂದೂ ವಿಷಯದಲ್ಲಿ ಆಸೆಯಿಟ್ಟವನಲ್ಲ. ಭೂಮಿ ಯನ್ನು ಪಡೆಯಬೇಕೆಂಬ ಸ್ವಾರ್ಥವನ್ನು ಅವನು ಏತಕ್ಕೆ ಅಂಟಿಸಿಕೊಳ್ಳು ವನು? ಇಷ್ಟು ಕಡಿಮೆ ವಯಸ್ಸಿನಲ್ಲಿ, ಇಂತಹ ಸ್ವಾರ್ಥತ್ಯಾಗವನ್ನೂ, ವಿಲಾಸದ ಕಡೆಗೆ ವಿರಕ್ತಿಯನ್ನೂ ಕಟ್ಟಿಕೊಂಡವರು ಎಷ್ಟು ಮಂದಿ ಇರುವರು?

26. ಉಗ್ರಸೇನನು ಕೃಷ್ಣನ ಮಾತುಗಳಿಗೆ ನಾಚಿಕೊಂಡನು. ಅವನು ತಲೆಬಾಗಿ ನಿಂತನು. ಕೃಷ್ಣನು ಅವನಿಗೆ ಅಭಿಷೇಕವನ್ನು ಮಾಡಿಸಿ ದನು. ಕೆಲವು ದಿನಗಳ ತನಕ ಕೃಷ್ಣಬಲರಾಮರು ಮಥುರೆಯಲ್ಲೆ ಉಳಿದುಕೊಂಡರು.

---

# ೬. ಯುದ್ಧವಿದ್ಯೆ.

1. ಮಥುರೆಯಲ್ಲಿ ಹೊಸ ಅರಸುತನವಲ್ಲವೆ? ಕಂಸನ ಒಡನಾಡಿ ಗಳು ರಾಜ್ಯದಲ್ಲಿ ಪೀಡಿಸದಂತೆ, ಕೆಲವು ದಿನ ಕೃಷ್ಣಬಲರಾಮರು ಮಥುರೆ ಯಲ್ಲಿಯೆ ಉಳಿದರು. ಆದರೆ ಯಾವ ಉಪದ್ರಗಳೂ ಅಲ್ಲಿ ಉಂಟಾಗಲಿಲ್ಲ. ಪ್ರಜೆಗಳೂ ಸಂತುಷ್ಟರಾದರು. ಇನ್ನು ಅಲ್ಲಿಂದ ಹೊರಟು ಇಬ್ಬರೂ ಸೋದರರು ಯುದ್ಧವಿದ್ಯೆಯನ್ನು ಕಲಿಯಲು ತೊಡಗಿದರು. ಮಥುರೆ ಯಲ್ಲಿ **ಸಂದೀಪನೆಂಬ** ಋಷಿಯ ವಿಷಯವಾಗಿ ಅವರು ತುಂಬಾ ಕೇಳಿ ದ್ದರು. ಶಾಸ್ತ್ರ-ಶಸ್ತ್ರ ಇವೆರಡರಲ್ಲೂ ಆ ಋಷಿಯು ಪಂಡಿತನು. ಅವ ನಂತಹ ಪ್ರವೀಣರು ಆಗ ಇನ್ನಾರೂ ಇದ್ದಿಲ್ಲ. ಆ ಋಷಿಯು **ಕಾಶಿಯಲ್ಲಿ** ಹುಟ್ಟಿದವನು; ಅವಂತಿಪುರದಲ್ಲಿ ಅವನ ಆವಾಸವಿದ್ದಿತು.

2. ಸಂದೀಪನು ಇವರಿಬ್ಬರನ್ನೂ ಶಿಷ್ಯರನ್ನಾಗಿ ಮಾಡಿಕೊಂಡನು. ಇವರೆಷ್ಟು ಬೇಗನೆ ಎಲ್ಲ ವಿದ್ಯೆಯನ್ನು ಕಲಿತುಕೊಂಡರು! ತೈಲಬುದ್ಧಿಯ ಬಾಲಕರಲ್ಲಿ ಏಕಾಗ್ರತೆಯು ಎಷ್ಟು! ಕೆಲವೇ ದಿನಗಳಲ್ಲಿ ಇವರು ಅಸ್ತ್ರ-ಶಸ್ತ್ರ ವಿದ್ಯೆಗಳಲ್ಲಿ ಸಮರ್ಥರಾದರು. ಕೃಷ್ಣನಂತಹ ಬಿಲ್ಲಾಳುಗಳು ಇಲ್ಲವೆಂದಾಯಿತು.

3. ಇಬ್ಬರೂ ಸೋದರರು ಪಾಠ ಮುಗಿದ ಬಳಿಕ ಮಥುರೆಗೆ ಮರಳುವ ಸಮಯ ಬಂದಿತು. ಗುರುದಕ್ಷಿಣೆಯನ್ನು ಸಲ್ಲಿಸದೆ ಮರಳ ಲಾಗುವುದೆ? ಅವರಿಬ್ಬರೂ ಗುರುವನ್ನು ವಂದಿಸಿ,—'ಮಹಾಶಯ! ನಾವು ಇನ್ನು ಮನೆಗೆ ಮರಳುವೆವು. ಈಗ ಯಾವ ಬಗೆಯಲ್ಲಿ ತಮಗೆ ದಕ್ಷಿಣೆ ಯನ್ನು ಅರ್ಪಿಸಬೇಕಾಗಿದೆ?' ಎಂದು ಕೇಳಿದರು.

4. ಗುರುವು ಉತ್ತರಕೊಡುವುದಕ್ಕೆ ಸಮಯ ಕಳೆದನು. ಏಕೆಂ ದರೆ, ಅವನ ಮನಸ್ಸು ಶಾಂತನಾಗಿದ್ದಿಲ್ಲ. ಅವನ ಒಬ್ಬನೆ ಮಗನನ್ನು ಕಳ್ಳರು ಎತ್ತಿಕೊಂಡು ಹೋಗಿದ್ದರು. 'ಮಕ್ಕಳಿರಾ, ನನಗೆ ಇನ್ನೇನು ದಕ್ಷಿಣೆ ಕೊಡುವಿರಿ? ನೀವು ವೀರರಾಗಿರುವಿರಿ. ನೀವು ಸಾಹಸದಿಂದ ನನ್ನ ಮಗನನ್ನು ತಂದು ನನಗೆ ಒಪ್ಪಿಸಿದರೆ ಸಾಕಾಗುವುದು. ಆಗ ನನ್ನ ಪ್ರಾಣವೇ ಉಳಿಯುವುದು. ಇದೇ ನನಗೆ ಗುರುದಕ್ಷಿಣೆಯಲ್ಲವೆ?' ಎಂದು ಅವನೆಂದನು.

5. **ಪಂಚಜನ** ಎಂಬ ಹೆಸರಿನ ಒಬ್ಬ ಅಸುರನು, (ಕಾಡು-ಜಾತಿ ಯವನು) ಸಮುದ್ರದ್ವೀಪದಲ್ಲಿ ನೆಲೆಮಾಡಿಕೊಂಡಿದ್ದನು. ಅವನು ಕೆಲವು ಜನರನ್ನು ಕಟ್ಟಿಕೊಂಡು, ಸಮುದ್ರತೀರಕ್ಕೆ ಬಂದಿಳಿದು, ಸಿಕ್ಕ ಜನರನ್ನೆಲ್ಲ ಎತ್ತಿಕೊಂಡು ಹೋಗುತಿದ್ದನು. ಸಂದೀಪನ ಪುತ್ರನೂ ಈ ಅಸುರನ ಸೆರೆಯಲ್ಲಿದ್ದನು. ಎಷ್ಟೋ ದಿನ ಹುಡುಕಿದರೂ, ಅವನು ಎಲ್ಲಿ ಇದ್ದನೆಂದೂ ತಿಳಿಯಬರಲಿಲ್ಲ. ಆಗ ಅವನು ಸತ್ತನೆಂದೇ ಜನರು ಆಡಿಕೊಂಡರು. ಆಗಾಗ ಈ ನೀರುಕಳ್ಳರು ಜನರನ್ನು ಸೆರೆಹಿಡಿದುಕೊಂಡು ಒಯ್ಯುತಲಿದ್ದು ದರಿಂದ, ಸಂದೀಪನು ತನ್ನ ಮಗನೂ ಅವರ ಸೆರೆಯಲ್ಲಿ ಇರಬಹುದೆಂದು ಭಾವಿಸಿದ್ದನು. ಈ ಜಲದಸ್ಯುಗಳ ರಾಜನ ಹೆಸರು '**ತಿಮಿ.**' ತಿಮಿಂಗಿಲ ಮೀನಿನ ವಿಷಯ ಬಲ್ಲಿರಷ್ಟೆ; ಈ ಕಳ್ಳ ಅರಸೂ ಸಮುದ್ರ ಮಧ್ಯದಲ್ಲಿ

ನಿವಾಸಮಾಡುವನೆಂದು ಅವನನ್ನು ಹಾಗೆ ಕರೆದಿರಬಹುದು. ಈ ತಿಮಿಯೇ ಜನರನ್ನು ಅಪಹರಿಸುತಿದ್ದನು. ಅಂತಹರನ್ನು ತನ್ನ ದಾಸರನ್ನಾಗಿ ಇಟ್ಟು ಕೊಳ್ಳುತಿದ್ದನು. ಕಾಡುಜನರಾದ ಅನಾರ್ಯರು ಯಾವಾಗಲು ಆರ್ಯ ರಾದವರನ್ನು ಈ ರೀತಿಯಾಗಿ ಹಿಂಸೆಮಾಡುತಿದ್ದರು. ಅವರ ಹಗೆ ತೀರಿ ಸುವ ಸುಲಭ ಉಪಾಯವು ಇದೇ ಆಗಿದ್ದಿತು. ದಸ್ಯುಗಳು ನೀರಲ್ಲಿ ಈಜುತ್ತ ಮೀನುಗಳಂತೆ ದಡಕ್ಕೆ ಬಂದು, ಆ ಸ್ಥಾನಕ್ಕೆ ಬರುತ್ತಿದ್ದ ಆರ್ಯ ರನ್ನು ಕದ್ದುಕೊಂಡು ಮರಳುತಿದ್ದರು.

6. ಕೃಷ್ಣನು ಗುರುವಿಗೆ ಆತನು ತಿಳುಹಿದಂತೆ ದಕ್ಷಿಣೆಕೊಡಲು ಒಪ್ಪಿಕೊಂಡನು. ತಿಮಿಯನ್ನು ಕೊಂದನು. ಅವನ ಮರಣಾನಂತರ ಉಳಿದ ಕಳ್ಳರನ್ನೂ ಕೊಂದನು. ತನಗೆ ಜಯ ದೊರೆತುದಕ್ಕಾಗಿ ಆ ಅಸುರನ ಶಂಖವನ್ನು ತನಗಾಗಿ ಇಟ್ಟುಕೊಂಡನು. ಕೃಷ್ಣನು ಯಾವಾ ಗಲು ಅದೇ ಶಂಖವನ್ನು ಉಪಯೋಗಿಸುತಿದ್ದನು. ತಿಮಿಯ ಹೆಸರು ಪಂಚಜನ; ಅವನ ಶಂಖವು ಅದುಕಾರಣ ಪಾಂಚಜನ್ಯವು.

7. ಕೃಷ್ಣನು, ಗುರುಪುತ್ರನನ್ನು ಸೆರೆಬಿಡಿಸಿ ತಂದು, ತನ್ನ ಗುರು ವಿಗೆ ಒಪ್ಪಿಸಿದನು. ಗುರುವಿನ ಸಂತೋಷಕ್ಕೆ ಮಿತಿ ಇರಲಿಲ್ಲ. ಗುರುವಿನ ಚರಣಧೂಳಿಯನ್ನು ಹಣೆಗೆ ಹಚ್ಚಿಕೊಂಡು, ಆತನಿಂದ ಆಶೀರ್ವಾದ ಪಡೆದು, ಸೋದರರಿಬ್ಬರೂ ಮಥುರೆಗೆ ಮರಳಿದರು.

8. ಕಂಸನು ಮಡಿದನಷ್ಟೆ, ಅವನ ಇಬ್ಬರು ಹೆಂಡಿರು ಅಸ್ತಿ, ಮತ್ತು ಪ್ರಾಪ್ತಿ ಎಂಬವರು; ಇವರು ಮಗಧ ರಾಜ್ಯದ **ಜರಾಸಂಧನ** ಕನ್ಯೆಯರು. ಕಂಸನು ಸತ್ತ ಬಳಿಕ, ಇವರಿಬ್ಬರೂ ತಮ್ಮ ತಂದೆಯ ಮನೆಗೆ ತೆರಳಿದರು. ಕೃಷ್ಣನು ತಮ್ಮ ಪತಿಯನ್ನು ಕೊಂದನೆಂದು ತಂದೆಗೆ ದೂರುಕೊಟ್ಟರು. ಅವರು ಅಳುತಳುತ್ತ, ಅವನಲ್ಲಿ ಇನ್ನೂ ಕರುಣೆ ಹುಟ್ಟುವಂತೆ, ಒಂದನ್ನು ನೂರಾಗಿ ಏರಿಸಿ ವಿವರಿಸಿ, ಗೋಳಾಡಿ ದರು. ಅವನು ಭಯಂಕರವಾಗಿ ಕೆರಳಿದನು. ಅವನ ಹೆಸರು ಜರಾ ಸಂಧ; ಅವನ ದೇಹದ ಎರಡೂ ಭಾಗಗಳು ಒಂದನ್ನೊಂದು ಬಹಳ ಚೆನ್ನಾಗಿ ಹೋಲುತಿದ್ದುವು. ಒಂದೇ ಅಚ್ಚಿನಲ್ಲಿ ಎರಡೂ ಭಾಗಗಳನ್ನು ಎರೆದು ಕೂಡಿಸಿದ್ದರೊ ಎಂಬಂತೆ ಕಾಣುತಿತ್ತು. ಅವನಷ್ಟು ಪ್ರತಾಪ

ಶಾಲಿಗಳು ಆ ಕಾಲದಲ್ಲಿ ಯಾರೂ ಇದ್ದಿಲ್ಲ; ಅವನು ಮಥುರೆಗೆ ಸೈನ್ಯದೊಡನೆ ಬಂದು ಮುತ್ತಿಗೆ ಹಾಕಿದನು. ಕೃಷ್ಣನನ್ನು ತಾನು ಕೊಲ್ಲುವೆನೆಂದು ಆಣೆಯಿಟ್ಟುಕೊಂಡನು. ಒಂದಲ್ಲ, ಎರಡಲ್ಲ, ಹದಿನೇಳು ಸಾರಿ ಮಥುರೆಗೆ ಮುತ್ತಿಗೆ ಹಾಕಿದರೂ, ಅವನಿಂದ ಮಥುರೆಯನ್ನು ಜಯಿಸಲಾಗಲಿಲ್ಲ. ಪ್ರತಿಯೊಂದು ಸಾರಿಯೂ ಕೃಷ್ಣನು ಯುದ್ಧಕ್ಕೆ ಬಂದು, ಜರಾಸಂಧನನ್ನು ಸೋಲಿಸಿದನು.

9. ಇನ್ನು ಜರಾಸಂಧನು ತನ್ನಿಂದ ಕೃಷ್ಣನನ್ನು ಸೋಲಿಸಲಾಗುವುದಿಲ್ಲೆಂದು ತಿಳಿದು, ಅನ್ಯರ ಸಹಾಯವನ್ನು ಕೇಳಹೊರಟನು. **ಕಾಲಯವನನೆಂಬವನು** ಮಹಾವೀರನೆಂದು ಹೆಸರುಪಡೆದಿದ್ದನು. ಇವನು ಜಾತಿಯಲ್ಲಿ ಮ್ಲೇಂಛನು. ಇವನ ಕೈಕೆಳಗೆ ಶಿಖ, ತುಮಾರ, ದರದ, ಪಾರದ, ಪಲ್ಲವ ಮೊದಲಾದ ಕುಲಗಳು ಇದ್ದುವು. ಯಾದವರ ವೀರತ್ವವನ್ನು ಅವನೂ ನಾರದನಿಂದಲೆ ಕೇಳಿದ್ದನು. ಯಾದವರೊಡನೆ ತಾನು ಯುದ್ಧಮಾಡಿ ಗೆಲ್ಲಬೇಕೆಂದು ಬಹುಕಾಲದಿಂದಲೂ ಅವನು ಕಾದುಕೊಂಡಿದ್ದನು. ಜರಾಸಂಧನು ಇದೆಲ್ಲವನ್ನೂ ತಿಳಿದಿದ್ದು, ಅವನಿಗೆ ಪ್ರೋತ್ಸಾಹಕೊಟ್ಟನು. ಕಾಲಯವನನು ಸೈನ್ಯದೊಡನೆ ಮಥುರೆಗೆ ಬಂದನು.

10. ಕೃಷ್ಣನು ಹೀಗೆಲ್ಲ ಆಗುವುದೆಂದು ಮೊದಲೇ ತಿಳಿದಿದ್ದನು. ಇಂತಹ ಸಂಕಟಗಳು ಉಂಟಾಗಬಹುದೆಂದು ತಿಳಿದೇ ಅವನು ಸಮುದ್ರದ ಮಧ್ಯದಲ್ಲಿ ದ್ವಾರಕಾಪುರವನ್ನು ನಿರ್ಮಾಣಮಾಡಿದ್ದನು. ತನ್ನವರನ್ನು ಕಾಪಾಡುವುದಕ್ಕೆ ಅದೇ ಸುಲಭ ಉಪಾಯವಲ್ಲವೆ? ಅವನ ಸೈನ್ಯಗಳೂ ಯಾದವರ ಸ್ತ್ರೀಯರೂ ಮಕ್ಕಳೂ ಅಲ್ಲಿ ಯಾರ ಉಪದ್ರವೂ ಇಲ್ಲದೆ ಸುಖದಿಂದ ಇರಬಹುದೆಂದೇ ಈ ಹೊಸನಗರದ ರಚನೆ. ಕಾಲಯವನನು ಅತ್ತ ಬರುವ ಮೊದಲೇ, ಕೃಷ್ಣನು ಮಥುರೆಯಲ್ಲಿಂದ ಎಲ್ಲವನ್ನೂ ದ್ವಾರಕೆಗೆ ಕಳುಹಿದನು. ತಾನೊಬ್ಬನೆ ಮಥುರೆಯಲ್ಲಿ ಉಳಿದನು.

11. ಕಾಲಯವನನು ಬಹಳ ಜಂಬದಿಂದ ಸೈನ್ಯಗಳನ್ನು ಕಟ್ಟಿಕೊಂಡು ಮಥುರೆಗೆ ಬಂದನು. ಸೈನ್ಯಗಳ ಅಬ್ಬರದಿಂದ ಮಥುರೆಯೆಲ್ಲ ನಡುಗಿತು. ಕೃಷ್ಣನು ಒಬ್ಬಂಟಿಗನಾಗಿಯೆ ಆಯುಧಗಳೊಂದನ್ನೂ

ಧರಿಸಿಕೊಳ್ಳದೆ ಮನೆಯಿಂದ ಹೊರಟನು. ಕೃಷ್ಣನೊಬ್ಬನೆ ಮಾತ್ರ ತನಗೆ ಇದಿರಾದನೆಂದು ಕಾಲಯವನನಿಗೆ ಅತ್ಯಾಶ್ಚರ್ಯವಾಯಿತು. ಕೃಷ್ಣನು ಒಂದನ್ನೂ ಆಡದೆ, ಎತ್ತಲೊ ಒಂದು ದಿಕ್ಕು ಹಿಡಿದು ನಡೆದನು. ಕಾಲ ಯವನನು ಆಯುಧಗಳನ್ನು ಧರಿಸಿಕೊಂಡು ಅವನನ್ನು ಹಿಂಬಾಲಿಸಿದನು. ಕೃಷ್ಣನು ಹಠಾತ್ತಾಗಿ ಒಂದು ಬೆಟ್ಟದ ಗುಹೆಯೊಳಗೆ ಕಾಲಿಟ್ಟನು. ಕಾಲಯವನನೂ ಅಲ್ಲಿಗೆ ಬಂದು ಗುಹೆಯೊಳಗೆ ನೋಡಿದನು. ಕೃಷ್ಣನಿಲ್ಲ. ಕತ್ತಲಲ್ಲಿ ಚೆನ್ನಾಗಿ ಇಣಿಕಿನೋಡಿದನು. ಯಾರೊ ನೆಲದ ಮೇಲೆ ಮಲಗಿಬಿದ್ದಂತೆ ತೋರಿತು. ಅವನ ದೇಹವು ಬಿಳೀ ಬಟ್ಟೆಯಿಂದ ಮುಚ್ಚಿದ್ದಿತು. ಕಾಲಯವನನು ಅವನೇ ಕೃಷ್ಣನೆಂದು ಭಾವಿಸಿ, ಇದೇ ಸಮಯವೆಂದು, ನಿದ್ದೆಹೋಗುತ್ತಿರುವವನನ್ನು ಕಾಲಿನಿಂದ ಒದ್ದು ಎಬ್ಬಿಸಿದನು. ಎದ್ದವನು ಒದ್ದವನನ್ನು ನೋಡುತಿದ್ದಂತೆಯೆ ಕ್ಷಣದಲ್ಲಿ ಒಂದು ಅಸ್ತ್ರವನ್ನು ಎಸೆದು, ಅವನು ಸುಟ್ಟು ಬೂದಿಯಾಗುವ ಹಾಗೆ ಮಾಡಿದನು.

12. ನಿದ್ದೆಹೋದಂತೆ ನೆಲದ ಮೇಲೆ ಬಿದ್ದುಕೊಂಡವನು **ಮುಚುಕುಂದ**ನೆಂಬ ಅರಸು. ಆರ್ಯರ ಶತ್ರುಗಳನ್ನು ವಿನಾಶಮಾಡುವುದೆ ಅವನ ಉದ್ಯೋಗ. ಎಲ್ಲಿಯೊ ಯುದ್ಧಕ್ಕೆ ತೆರಳಿದ್ದು, ದಣಿದವನಾಗಿ, ಈ ಗುಹೆಯಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಬೇಕೆಂದು ಅವನು ಬಿದ್ದಿದ್ದನು. ದುಷ್ಟರಾದ ಅನಾರ್ಯರು ತನ್ನನ್ನು ನಿದ್ದೆಯಲ್ಲಿದ್ದಾಗ ಕೆಣಕಬಹುದೆಂದು ಅವನು ಅಸ್ತ್ರಹಿಡಿದು ಸಿದ್ಧನಾಗಿಯೆ ಮಲಗಿದ್ದನು. ಕಾಲಯವನನು ತಾನಾಗಿ ಅವನ ಬಾಯಿಯಲ್ಲಿ ಬಿದ್ದಂತಾಯಿತು. ಕೃಷ್ಣನಿಗೆ ಈ ಮುಚುಕುಂದನು ಅಲ್ಲಿದ್ದನೆಂಬುದು ತಿಳಿದೇ ಇದ್ದಿತು. ಇಷ್ಟು ಸುಲಭವಾಗಿ ಮಹಾಜಂಬದ ಕಾಲಯವನನು ಮಡಿದನು.

13. ಅವನ ಸಾವಿನಿಂದ ಅವನ ಸೈನ್ಯದ ತಲೆ ಹೋದಂತೆಯೂ, ಬೆನ್ನೆಲುವು ಮುರಿದಂತೆಯೂ ಆಯಿತು. ನಂತರ ನಾಯಕನಿಲ್ಲದ ಹಿಂಡನ್ನು ಕೃಷ್ಣನು ಸುಲಭವಾಗಿ ಗೆದ್ದನು. ಅವನ ಹೇರಳ ಧನವೂ, ಆನೆಕುದುರೆಗಳೂ ಕೃಷ್ಣನ ಕೈಸೇರಿದುವು. ಇವನ್ನೆಲ್ಲ ತನ್ನ ಸೈನ್ಯದ ಸಂಗಡವಿರಿಸಿ, ಮಥುರೆಗೆ ಹಿಂತಿರುಗಿಸಿ, ತಾನೂ ಬಲರಾಮನೂ ಬೇರೆ ಹಾದಿಯಿಂದ ಮರಳಿದರು. ದಾರಿಯಲ್ಲಿ ಜರಾಸಂಧನು ತನ್ನ ಸೈನ್ಯಗಳೊಡನೆ ವನವನ್ನು ಕವಿದನು. ಕೃಷ್ಣಬಲರಾಮರಿಗೆ ಇದು ಭಯದ

ಪ್ರಸಂಗವಾಯಿತು. ಅವರ ಸಂಗಡ ಯಾರೂ ಇಲ್ಲ, ಆಯುಧಗಳೂ ಇಲ್ಲ. ಸಮೀಪದಲ್ಲಿ ಪ್ರವರ್ಷಣ ಎಂಬ ಒಂದು ಬೆಟ್ಟವಿದ್ದಿತು. ಸೋದರರಿಬ್ಬರು ಆ ಬೆಟ್ಟವನ್ನೇರಿದರು. ಜರಾಸಂಧನು ಆ ಬೆಟ್ಟದಲ್ಲಿ ಬೆಳೆದ ಹುಲ್ಲುರಾಶಿಗೆ ಬೆಂಕಿ ಹಿಡಿಸಿದನು. ಅವರಿಬ್ಬರೂ ಈ ಬೆಂಕಿಗೆ ಆಹುತಿಯಾಗುವರೆಂದು ಅವನು ನಂಬಿದನು. ಆದರೆ ಅವರು ಬೆಟ್ಟದಾಚೆಗೆ ಕಣಿವೆಗೆ ಇಳಿದು, ನೆಟ್ಟಗೆ ದ್ವಾರಕೆಯನ್ನು ಒಳಮಾರ್ಗದಿಂದ ಸೇರಿದರು.

---

# ೭. ಪತ್ನೀಪ್ರೇಮ.

1. ಇದು ವರೆಗೆ ಕೃಷ್ಣನು ಬ್ರಹ್ಮಚರ್ಯವನ್ನು ಪಾಲಿಸುತ್ತ ಇದ್ದನು. ಇನ್ನೂ ಅವನಿಗೆ ವಿವಾಹವಾಗಿರಲಿಲ್ಲ. ತೀರ ಬಾಲ್ಯದಲ್ಲಿಯೆ ವಿವಾಹವಾಗುವ ರೂಢಿಯು ಆ ಕಾಲದಲ್ಲಿ ಇದ್ದಿಲ್ಲ. ಇನ್ನು ಸಂಸಾರ ಕಟ್ಟಿಕೊಳ್ಳುವುದು ತನಗೆ ಅಗತ್ಯವೆಂದು ಅವನು ಎಂದಿಗೆ ತಿಳಿದನೊ, ಆಗಲೆ ಇನ್ನು ವಿವಾಹವಾಗಲೆಂದನು. ಸಾಂಸಾರಿಕರಾಗಿ ಮನುಷ್ಯರು ಹೇಗೆ ಬಾಳಬೇಕೆಂಬುದನ್ನು ಜಗತ್ತಿಗೆ ಪ್ರಕಟಿಸಬೇಕೆಂಬುದೇ ಅವನ ಇಚ್ಛೆಯಾಗಿದ್ದಿತು. ಸಂಸಾರ ಕಟ್ಟಿಕೊಂಡರೆ ಧರ್ಮಕಾರ್ಯಗಳನ್ನು ಸಾಧಿಸ ಬರುವುದಿಲ್ಲ ಎಂದು ಯಾರು ಹೇಳುವರೊ, ಇವರು ಕೃಷ್ಣಚರಿತ್ರದಿಂದ ಜ್ಞಾನವನ್ನು ಪಡೆಯ ಬಹುದಾಗಿದೆ.

2. **ಭೀಷ್ಮಕನು** ವಿದರ್ಭದೇಶದ ಅರಸು. **ರುಕ್ಮಿಣಿಯೇ** ಅವನ ಕನ್ಯೆ. ಅವಳು ಚೆಲುವೆ, ಗುಣವತಿ. ಅವಳೊಡನೆ ವಿವಾಹವಾಗಬೇಕೆಂದು ಕೃಷ್ಣನ ಅಪೇಕ್ಷೆ. ಭೀಷ್ಮಕನ ಮಗನಾದ **ರುಕ್ಮಿಗೆ** ಕೃಷ್ಣನ ಹೆಸರು ಸಹ ಒಪ್ಪದು. ಅಂತಹನು ಕೃಷ್ಣನಿಗೆ ತನ್ನ ಸೋದರಿಯನ್ನು ಕೊಡಲೊಪ್ಪುವನೇ? ಕೃಷ್ಣನ ಹಗೆಯಾಗಿ ಜರಾಸಂಧನಿರುವನಲ್ಲ, ಅವನ ಹೇಳಿಕೆಯ ಮೇರೆಗೆ, ಶಿಶುಪಾಲನಿಗೆ ರುಕ್ಮಿಣಿಯೊಡನೆ ವಿವಾಹವಾಗಲೆಂದು ನಿಶ್ಚಯವಾಯಿತು. 'ನನ್ನ ಮನವೊಪ್ಪುವ ಪತ್ನಿಯನ್ನು ಪಡೆಯಲಾರೆನೇ' ಎಂದು ಕೃಷ್ಣನು ಬೇಸರಗೊಂಡನು. ಕೃಷ್ಣನು ಬಲರಾಮನೊಡನೆ ಕೆಲವು ಮಂದಿ ಯಾದವರನ್ನು ಸಂಗಡವಿರಿಸಿಕೊಂಡು ವಿದರ್ಭದೇಶಕ್ಕೆ ತೆರಳಿದನು.

3. **ನಾಳೆಗೆ ವಿವಾಹ;** ಎಲ್ಲ ಸನ್ನಾಹವಾಗಿದೆ. ರುಕ್ಮಿಣಿಯು ದೇವೀಪೂಜೆಗಾಗಿ ದೇವೀಮಂದಿರಕ್ಕೆ ನಡೆತಂದಿರುವಳು. ಕೃಷ್ಣನು ಬಲರಾಮನಿಗೆ ತಿಳುಹಿ, ಆಗಲೆ ರುಕ್ಮಿಣಿಯುನ್ನು ಕದ್ದೊಯ್ಯುವೆನೆಂದನು. ಸರಿ! ಅದರಂತೆ ಎಲ್ಲ ವ್ಯವಸ್ಥೆ ಮಾಡಲಾಯಿತು. ಸಮಯ ಕಾದಿದ್ದು, ಕೃಷ್ಣನು ರುಕ್ಮಿಣಿಯ ದಾರಿ ತಪ್ಪಿಸಿ, ತನ್ನ ರಥದ ಕಡೆಗೆ ನಡಿಯಿಸಿ, ಅವಳೊಡನೆ ತನ್ನ ರಥವನ್ನೇರಿದನು. ರಾಜ್ಯದಲ್ಲಿ ಗಲಿಬಿಲಿಯುಂಟಾಯಿತು. ಸ್ವಯಂವರಕ್ಕಾಗಿ ಬಂದಿದ್ದ ರಾಜರುಗಳು ಸಿಟ್ಟೇರಿ ಕಿಡಿಕಿಡಿಯಾದರು. ರುಕ್ಮಿಯಂತೂ ಕೃಷ್ಣನನ್ನು ಕೊಂದೇ ಬರುವೆನೆಂದು ಆಣೆಯಿಟ್ಟುಕೊಂಡನು.

4. ಯಾದವರೊಡನೆ ಬಲರಾಮನು ಸೇರಿ, ಈ ರಾಜರನ್ನು ಕಾದಾಡಲು ಇದಿರುಬಂದನು. ಯುದ್ಧವಾಯಿತು, ರಾಜರು ಸೋತರು. ರುಕ್ಮಿಯು ಸಿಟ್ಟೇರಿ ಪ್ರತಿಜ್ಞೆಮಾಡಿದನಲ್ಲವೆ? ತನ್ನ ಸೈನಿಕರೊಡನೆ ನರ್ಮದಾ ತೀರದಲ್ಲಿ ಕೃಷ್ಣನಿಗೆ ಇದಿರಾದನು. ರುಕ್ಮಿ-ಕೃಷ್ಣರೊಳಗೆ ದ್ವಂದ್ವಯುದ್ಧವಾಯಿತು. ರುಕ್ಮಿಯು ಸೋತನು. ಬಲರಾಮನು ಸೋಲಿಸಿದ ರಾಜರೂ, ಅಲ್ಲಿಗೆ ಬಂದು ರುಕ್ಮಿಗೆ ನೆರವಾದರು. ಅಲ್ಲಿ ಸೋತವರು ಇಲ್ಲಿಯೂ ಸೋತರು. ರುಕ್ಮಿಯ ಅಸ್ತ್ರಗಳೆಲ್ಲ ದಿಕ್ಕುದಿಕ್ಕಿಗೆ ಚೆಲ್ಲಿಬಿದ್ದುವು; ರುಕ್ಮಿಯೋ ಕೆಸರಲ್ಲಿ ಬಿದ್ದುಕೊಂಡನು. ರುಕ್ಮಿಣಿಯು ತಮ್ಮನ ಪ್ರಾಣಕ್ಕಾಗಿ ಪ್ರಾರ್ಥಿಸಿಕೊಂಡುದರಿಂದ, ಕೃಷ್ಣನು ಅವನನ್ನು ಕೊಲ್ಲದೆ ಬಿಟ್ಟುದೇ ಧಾರಾಳವಾಯಿತು. ಪ್ರತಿಜ್ಞೆಯೇನು, ಆದುದೇನು ? ಅವಮಾನದ ಭಾರದಿಂದ ರುಕ್ಮಿಯು ಹಿಂದಣ ಬಾಗಿಲಿಂದ ಮರಳಿ ಮನೆ ಸೇರಿದನು.

5. ರುಕ್ಮಿಣಿಯೊಡನೆ ಕೃಷ್ಣನ ವಿವಾಹವಾಯಿತು. ಮುಂದೆ ಕೃಷ್ಣನಿಗೆ ಹತ್ತು ಮಂದಿ ಮಗಂದಿರೂ, ಒಬ್ಬ ಕನ್ಯೆಯೂ ಹುಟ್ಟಿದರು. ಅವನ ಮಕ್ಕಳಲ್ಲಿ ಪ್ರದ್ಯುಮ್ನನೆ ಮೊದಲನೆಯವನು. ಅವನಾದರೂ ಅಸುರರ ಭಾಧೆಯಿಂದ ಬದುಕಿದವನು. ತೊಟ್ಟಿಲಲ್ಲಿರುವಾಗಲೆ ಅವನನ್ನು ಶಂಬರನೆಂಬ ಅಸುರನು ಕದ್ದೊಯ್ಯಲು ಬಂದಿದ್ದನು. ಅವನು ಮಗುವನ್ನು ಕದ್ದುಕೊಂಡು ಹೋಗುವಾಗ, ದಾರಿಯಲ್ಲಿ ಕೃಷ್ಣನು ಆವನಿಗೆ ಇದಿರಾಗಿ ಅವನನ್ನು ಕೊಂದು, ಮಗುವನ್ನು ಮರಳಿ ಮನೆಗೆ ತಂದನು.

6. **ಸತ್ಯಭಾಮೆ** ಎಂಬುವಳು ಸತ್ರಾಜಿತರಾಜನ ಮಗಳು. ಕೃಷ್ಣನು ಅವಳನ್ನು ಮದುವೆಯಾದನು. ಸತ್ರಾಜಿತನ ಬಳಿಯಲ್ಲಿ ಸ್ಯಮಂತಕಮಣಿ

ಎಂಬುವ ಒಂದು ಅಮೂಲ್ಯ ರತ್ನವಿದ್ದಿತು. ಮದುವೆಯ ಕಾಲದಲ್ಲಿ ಸತ್ರಾಜಿತನು ಅವನ್ನು ಕೃಷ್ಣನಿಗೆ ಬಹುಮಾನವಾಗಿ ಕೊಟ್ಟರೂ ಕೃಷ್ಣನು ಅದನ್ನು ಸ್ವೀಕರಿಸಲಿಲ್ಲ.

7. ಸತ್ರಾಜಿತನು ಸೂರ್ಯನನ್ನು ಪೂಜಿಸುತಿದ್ದನು. ಅವನ ಬಳಿಯು ಈ ರತ್ನವನ್ನು ಕೃಷ್ಣನು ಉಗ್ರಸೇನ ರಾಜನಿಗಾಗಿ ಕೇಳಿದನು. ಅವನು ಕೊಡಲು ಒಪ್ಪಲಿಲ್ಲ. ಕೃಷ್ಣನು ಹೇಗಾದರೂ ಅದನ್ನು ಪಡೆದುಕೊಳ್ಳ ಬಹುದು ಎಂದು ಸತ್ರಾಜಿತನು ತಿಳಿದು, ಮೃಗಬೇಟೆಗಾಗಿ ಹೋಗುತಿದ್ದ ತನ್ನ ತಮ್ಮನಾದ **ಪ್ರಸೇನ**ನಿಗೆ ಆ ಮಣಿಯನ್ನು ಧರಿಸೆಂದು ಹೇಳಿದನು. ಸಿಂಹವಂಶದ ಯಾರೋ ಒಬ್ಬನು, ಪ್ರಸೇನನನ್ನು ಕೊಂದು, ಆ ಮಣಿಯನ್ನು ತಾನೇ ಒಯ್ದನು. ಭಲ್ಲೂಕ ವಂಶದ **ಜಾಂಬವಾನ**ನೆಂಬವನು ಅವನನ್ನು ಕೊಂದು, ಸ್ಯಮಂತಕ ಮಣಿಯನ್ನು ತಾನು ಒಯ್ದನು. ಊರಲ್ಲಿ ಎಲ್ಲರೂ ಕೃಷ್ಣನು ಆ ಮಣಿಗಾಗಿ ಪ್ರಸೇನನನ್ನು ಕೊಂದನು ಎಂದರು. ಇದನ್ನು ರುಕ್ಮಿಣಿಯು ಕೃಷ್ಣನಿಗೆ ತಿಳುಪಿದಳು. ಇದೆಂತಹ ಅಪವಾದವು! ಈ ಅಪವಾದವನ್ನು ಹೋಗಲಾಡಿಸುವುದಕ್ಕಾಗಿ, ಕೃಷ್ಣನು ಸೈನ್ಯದೊಡನೆ ವನಕ್ಕೆ ತೆರಳಿ ಪ್ರಸೇನನನ್ನು ಹುಡುಕತೊಡಗಿದನು. ಭಲ್ಲೂಕ ವಂಶದ ಜಾಂಬವಾನನೊಡನೆ ಕೃಷ್ಣನು ಇಪ್ಪತ್ತೊಂದು ದಿನ ಕಾದಾಡಬೇಕಾಯಿತು. ಜಾಂಬವಾನನಿಗೆ ಅಪಜಯವಾಯಿತು. ಅವನು ತನ್ನ ಮಗಳಾದ **ಜಾಂಬವತಿ**ಯನ್ನೂ ಸ್ಯಮಂತಕ ರತ್ನವನ್ನೂ ಕೃಷ್ಣನಿಗೆ ಒಪ್ಪಿಸಿದನು. ಅದಾದ ಬಳಿಕ ಕೆಲವು ದಿನಗಳ ತನಕ ಕೃಷ್ಣನು ಅಲ್ಲಿಯೆ ಉಳಿದನು.

8. ಅವನ ಜತೆಯಲ್ಲಿ ಬಂದು ವನಭಾಗದಲ್ಲೆ ತಂಗಿದ್ದ ಸೈನ್ಯವು, ಕೃಷ್ಣನು ಮಡಿದಿರಬೇಕೆಂದು ಊಹಿಸಿತು. ಅದೇ ರೀತಿ ಊರಿಗೆ ಹಿಂತೆರಳಿ ಕೃಷ್ಣನ ಮರಣವಾರ್ತೆಯನ್ನು ನಾಲ್ಕೂ ಕಡೆ ಹಬ್ಬಿಸಿತು.

9. ಕೃಷ್ಣನು ಮಾತ್ರ ಕೆಲವು ದಿನಗಳೊಳಗೆ ಊರಿಗೆ ಮರಳಿ, ಆ ಮಣಿಯನ್ನು ಸತ್ರಾಜಿತನಿಗೆ ಒಪ್ಪಿಸಿದನು. ಆಗ ಅಲ್ಲಿ, ಅಕ್ರೂರ, ಕೃತ ವರ್ಮ, ಶತಧನ್ವ ಎಂಬವರು ಸತ್ಯಭಾಮೆಯನ್ನು ವರಿಸಿಕೊಳ್ಳಲು ಆಶಿಸಿ ಬಂದಿದ್ದರು. ಸತ್ಯಭಾಮೆಯು ತಮ್ಮಲ್ಲಿ ಯಾರಿಗೂ ಸಿಗುವುದಿಲ್ಲ ಎಂದು ನಿರಾಶರಾಗಿ ಅವರು ಸತ್ರಾಜಿತನನ್ನೆ ವಧಿಸುವುದಕ್ಕೆ ಹಂಚಿಕೆ ಮಾಡಿದರು.

ಆಗಲೆ ಪಾಂಡವರನ್ನು ಕಾಣುವುದಕ್ಕಾಗಿ ಕೃಷ್ಣನು ಬಲರಾಮನೊಡನೆ ವಾರಣಾವತಿಗೆ ಹೋಗಿದ್ದನು. ಶತಧನ್ವನು ಅದೇ ಮುಹೂರ್ತವೆಂದು ಸತ್ರಾಜಿತನನ್ನು ಕೊಂದಿಕ್ಕಿ ಸ್ಯಮಂತಕ ರತ್ನವನ್ನು ಒಯ್ದನು. ತಂದೆಯ ಮರಣವನ್ನು ನೋಡಿ, ಮಗಳು ವಾರಣಾವತಿಗೆ ತೆರಳಿದಳು. ಕೃಷ್ಣನು ಈ ದುಃಖದ ವೃತ್ತಾಂತವನ್ನು ಕೇಳಿ, ಕೂಡಲೆ ಶತಧನ್ವನನ್ನು ಹಿಡಿಸುವುದಕ್ಕಾಗಿ ವಾರಣಾವತಿಯಿಂದ ಮರಳಿದನು.

10. ಕೃಷ್ಣನು ಮುನಿದರೆ ಏನಾಗುವುದೆಂದು ಶತಧನ್ವನು ಬಲ್ಲನು. ಅವನು ಕೃತವರ್ಮನ ಸಹಾಯವನ್ನು ಬೇಡಿದನು. ಕೃಷ್ಣನಿಗೆ ಬೆದರಿ ಅವನು ಸಹಾಯ ಮಾಡಲು ಒಪ್ಪಲಿಲ್ಲ. ಆಗ ಶತಧನ್ವನು, ಆ ಮಣಿಯೇ ಮಾರಿ ಎಂದು ಅದನ್ನು ಅಕ್ರೂರನ ಕೈಯಲ್ಲಿಟ್ಟನು. ತಾನು ಕುದುರೆ ಹತ್ತಿ ಊರುಬಿಟ್ಟು ಪಲಾಯನಮಾಡಿದನು. ಕೃಷ್ಣನೂ, ಬಲರಾಮನೂ ಅವನನ್ನು ಬೆನ್ನಟ್ಟಿದರು. ಮಿಥಿಲೆಯ ಕಾಡಿನಲ್ಲಿ ಶತಧನ್ವನ ಕುದುರೆಯು ಸತ್ತುಬಿದ್ದಿತು; ಆಗ, ಆವನು ಕಾಲ್ನಡೆಯಾಗಿ ಮುಂದೋಡಹತ್ತಿದನು.

11. ಬಲರಾಮನನ್ನು ರಥದಲ್ಲಿರಿಸಿ ಕೃಷ್ಣನು ಶತಧನ್ವನ ಬೆನ್ನು ಹಿಡಿದನು. ಶತಧನ್ವನನ್ನು ಸುಲಭವಾಗಿ ಕೊಂದುದಾಯಿತು, ಆದರೆ ಅವನ ಹತ್ತಿರ ಆ ರತ್ನವು ಮಾತ್ರ ದೊರೆಯಲಿಲ್ಲ. ಇದನ್ನು ಕೃಷ್ಣನು ಬಲರಾಮನಿಗೆ ತಿಳುಹಲು, ಬಲರಾಮನು ಆ ಮಣಿಯನ್ನು ಪಡೆಯದೆ ದ್ವಾರಕೆಗೆ ಮರಳುವುದಿಲ್ಲವೆಂದು ಮಿಥಿಲೆಗೆ ಅರಸಾದ ಜನಕರಾಜನಲ್ಲಿಗೆ ತೆರಳಿದನು. ಬಲರಾಮನು ಅಲ್ಲಿದ್ದಾಗಲೆ ಅವನಿಂದ ಗದಾಯುದ್ಧ ಪ್ರಕಾರವನ್ನು ದುರ್ಯೋಧನನು ಕಲಿತುಕೊಂಡನು. ಆವನನ್ನು ಜನಕನಲ್ಲಿಂದ ಮರಳಿಸಬೇಕಾದರೆ, ಕೃಷ್ಣನು ಶತಪ್ರಯತ್ನಗಳನ್ನು ಮಾಡಬೇಕಾಯಿತು.

12. ಅಕ್ರೂರನು ಮಣಿಯನ್ನು ಪಡೆದು ಯಜ್ಞಗಳನ್ನು ಮಾಡತೊಡಗಿದನು. ಯಜ್ಞವನ್ನು ಪ್ರಾರಂಭಿಸಿದ ಕ್ಷತ್ರಿಯನನ್ನು ಆ ಯಜ್ಞವು ಮುಗಿಯುವುದರೊಳಗೆ ಕೊಂದಲ್ಲಿ ಬ್ರಹ್ಮಹತ್ಯದೋಷವು ಬರುವುದೆಂದು ಶಾಸ್ತ್ರವು. ಅಕ್ರೂರನು ಪ್ರಾಣರಕ್ಷಣೆಗಾಗಿ ಈ ಯಜ್ಞಗಳನ್ನು ಮಾಡುವನು. ಅವನ ಪಕ್ಷದವರಾದ ಭೋಜರು ತಮ್ಮೊಳಗೇ ಕಚ್ಚಾಟವಾಗಿ ದ್ವಾರಕೆಯನ್ನು ಬಿಟ್ಟು ಎತ್ತಲೋ ಹೋದರು. ಆಗ ಅಕ್ರೂರನು ಅವರು ಹಿಡಿದ

ದಾರಿಯೇ ತನಗೆ ಎಂದು ಅವರೊಡನೆಯೆ ನಡೆದನು. ಅಕ್ರೂರನ ತಂದೆಯು ಬಹಳ ಧರ್ಮಾತ್ಮನಾಗಿದ್ದನು. ಅಂತಹನಿರುವಲ್ಲಿ ಬರಗಾಲದ ಹಾವಳಿ ಇರದೆಂದು ಜನರ ನಂಬುಗೆ ಇದ್ದಿತು. ಅಕ್ರೂರನು ಹೊರಟ ಬಳಿಕ ದ್ವಾರಕೆಯಲ್ಲಿ ಕ್ಷಾಮವುಂಟಾಯಿತು. ಧರ್ಮಾತ್ಮನ ಮಗನು ಹೊರಟುದರಿಂದ ಈ ದುರ್ಭಿಕ್ಷವೆಂದು ಜನರು ಆಡಿದರು. ಕೃಷ್ಣನು ಮಾತ್ರ ಇದನ್ನು ನಂಬುವನೆ? ಮಣಿಯು ಇಲ್ಲವಾದುದರಿಂದಲೇ ಈ ದುರ್ಭಿಕ್ಷವೆಂದು ಕೃಷ್ಣನು ಹೇಳಿದನು. ಜನರೆಲ್ಲರೂ ಆ ಮಣಿಯನ್ನು ದ್ವಾರಕೆಗೆ ತರಬೇಕೆಂದು ಆತುರಗೊಂಡರು.

13. ಒಂದು ದಿನ ಕೃಷ್ಣನು ಯಾದವರೆಲ್ಲರನ್ನು ತನ್ನ ಮನೆಗೆ ಭೋಜನಕ್ಕೆ ಕರೆಸಿಕೊಂಡನು. ಬಂದ ಜನರೊಳಗೆ ಅಕ್ರೂರನೂ ಒಬ್ಬನು. ಕೃಷ್ಣನು ವಿನೋದದಿಂದ,—ಅಕ್ರೂರದೇವಾ, ತಮ್ಮಲ್ಲಿ ಆ ಅಮೂಲ್ಯ ರತ್ನವಿದೆ. ನಾನು ಶತಧನ್ವನನ್ನು ಕೊಂದು ಅದನ್ನು ಅಪಹರಿಸಿದ್ದೇನೆಂದು ಅಣ್ಣನ ಮಾತು. ಒಮ್ಮೆ ಆ ರತ್ನವನ್ನು ಇಲ್ಲಿ ತೋರಿಸಿ ಅವರ ಸಂಶಯುವನ್ನು ತೊಲಗಿಸುವಿರಾ? ಭಯಪಡಬೇಡಿರಿ, ಅದು ನಿಮ್ಮ ಬಳಿಯಲ್ಲೇ ಇರಲಿ!' ಎಂದನು.

14. ಮಣಿಯು ನಿಜವಾಗಿಯೂ ಆಗ ಅಕ್ರೂರನಲ್ಲೇ ಇದ್ದಿತು. ಅವನು ತನ್ನ ಕೊರಳಿಗೆ ಇದ್ದ ಹಾರದಲ್ಲಿ ತೂಗಿಸಿದ ಆ ಮಣಿಯನ್ನು ಅಲ್ಲಿದ್ದ ಎಲ್ಲರಿಗೂ ತೋರಿಸಿದನು. ಬಲರಾಮನು ಅದನ್ನು ಕಂಡು ತನಗೆ ಬೇಕೆಂದು ಆಸೆಪಟ್ಟನು. ಸತ್ಯಭಾಮೆಯು ತನ್ನ ತಂದೆಯ ಮಣಿಯು ತನಗಾಗಬೇಕೆಂದಳು. 'ಬ್ರಹ್ಮಚಾರಿಯಲ್ಲದವರು ಯಾರೂ ಈ ಮಣಿಯನ್ನು ಧರಿಸಿಕೊಂಡರೆ ಅದರಿಂದ ರಾಜ್ಯಕ್ಕೆ ಅಮಂಗಲ ಉಂಟಾಗುವುದು. ನನಗೆ ಮದುವೆಯಾಗಿದೆ; ಅಣ್ಣನು ಮದ್ಯಪಾಯಿ; ಸತ್ಯಭಾಮೆಯಾದರೂ ಹೇಗೆ ಅದನ್ನು ಇಟ್ಟುಕೊಳ್ಳಬಹುದು? ಅಕ್ರೂರನೆ ಅದನ್ನಿಟ್ಟುಕೊಳ್ಳಲು ಯೋಗ್ಯನು. ಅದು ಅವನಲ್ಲೇ ಇರಲಿ!' ಎಂದು ಕೃಷ್ಣನೆಂದನು. ಮಣಿಯು ಅಕ್ರೂರನಿಗೆ ಆಯಿತು. ಅವನು ಕೃಷ್ಣನ ಮಾತಿಗೆ ಸಂತೋಷಪಟ್ಟನು.

15. ಕೃಷ್ಣನ ಮುಖ್ಯ ಪತ್ನಿಯರು ಎಂಟುಮಂದಿ. ಇವರಲ್ಲದೆ ಹದಿನಾರು ಸಾವಿರದ ಒಂದು ನೂರು ಇತರ ಸ್ತ್ರೀಯರು ಅವನ ಆಶ್ರಯ

ದಲ್ಲಿ ಇದ್ದರೆಂದು ಹೇಳುತ್ತಾರೆ. ಆ ಕಾಲದಲ್ಲಿ ಬಹುವಿವಾಹವು ದೋಷವೆಂದು ಎಣಿಸಲ್ಪಡುತ್ತಿರಲಿಲ್ಲ. ಅದಲ್ಲದೆ ಈ ರೀತಿ ಕೃಷ್ಣನು ನಡೆದಿರುವುದಕ್ಕೆ ಇನ್ನೊಂದು ಕಾರಣವೂ ಇದ್ದಿತು.

16. ಪ್ರಾಗ್ಜ್ಯೋತಿಷ ಎಂಬುವ ಪಟ್ಟಣದಲ್ಲಿ (ಕಾಮರೂಪ) **ನರಕ**ನೆಂಬ ಅರಸು ಇದ್ದನು. ಇವನು ಒಳ್ಳೆಯ ಬಲವಂತನು. ಇವನ ಪ್ರತಾಪಕ್ಕೆ ದೇವತೆಗಳು (ಆರ್ಯರಾಜರು) ಬೆದರುತಿದ್ದರು. ಇಂದ್ರನ ತಾಯಿಯಾದ ಅದಿತಿಯ ಕುಂಡಲಗಳನ್ನು ಈ ಅರಸು ಕದ್ದುಕೊಂಡನು. ಇಂದ್ರನು ನಾನಾ ಬಗೆ ಸಾಧಿಸಿದರೂ ಕುಂಡಲಗಳನ್ನು ದೊರಕಿಸಿಕೊಳ್ಳಲು ಆಗಲಿಲ್ಲ. ಆಗ ಅವನು ಈ ವಿಷಯವನ್ನು ಕೃಷ್ಣನಿಗೆ ಹೇಳಿದನು. ಕೃಷ್ಣನು ನರಕನಿಂದ ಆ ಕುಂಡಲಗಳನ್ನು ಪಡೆಯಲು ಯುದ್ಧ ಮಾಡಿದನು. ನರಕನು ಮಡಿದನು. ಅವನ ಸೆರೆಮನೆಯಲ್ಲಿದ್ದ ಹದಿನಾರು ಸಾವಿರದ ಒಂದು ನೂರು ಮಂದಿ ಕುಮಾರಿಯರೂ ದ್ರವ್ಯಸಂಚಯವೂ ಕೃಷ್ಣನ ಕೈಸೇರಿತು. ಕುಮಾರಿಯರನ್ನು ಅವರವರ ಹೆತ್ತವರಲ್ಲಿಗೆ ಕಳುಹಿಸಿ ಕೊಡಲು ಕೃಷ್ಣನು ಎಲ್ಲರನ್ನೂ ಸಿದ್ಧಪಡಿಸಿದನು. ಆದರೆ, ಕದ್ದುಕೊಂಡು ಹೋದ ಹೆಮ್ಮಕ್ಕಳನ್ನು ಪುನಃ ಮನೆಯಲ್ಲಿ ಸೇರಿಸಿಕೊಳ್ಳುವರೆ ? ಅವರು ತಾವು ಕೃಷ್ಣನ ಬಳಿಯಲ್ಲೆ ಇರಲು ಬೇಡಿಕೊಂಡರು. ಕೃಷ್ಣನಿಗೆ ಇದೊಂದು ವಿಪತ್ತಿನಂತಾಯಿತು. ಇಷ್ಟು ಮಂದಿ ಹೆಮ್ಮಕ್ಕಳ ಮಾನವನ್ನು ಕಾಪಾಡುವ ಭಾರವನ್ನು ಒಬ್ಬನು ಹೇಗೆ ನಿರ್ವಹಿಸಬಹುದು ? ಜನರು ಏನೆಂದಾರು ? ಅದಕ್ಕಾಗಿ ಕೃಷ್ಣನು ಬಹು ಕಡೆಗಳಲ್ಲಿ ಇವರಿಗಾಗಿ ವರರನ್ನು ಹುಡುಕಿದನು. ನರಕನ ಪಟ್ಟಣದಲ್ಲಿ ಸೆರೆಯಾಗಿದ್ದರೆಂಬ ಸಂದೇಹದಿಂದಲೆ ಇವರನ್ನು ಯಾರೂ ಮದುವೆಮಾಡಿಕೊಳ್ಳಲು ಒಪ್ಪಲಿಲ್ಲ. ಹಾಗಾದರೆ ಈ ಕನ್ಯೆಯರಿಗೆ ಗತಿಯೇನು? ಇವರು ಧರ್ಮಭ್ರಷ್ಟರಾಗುವುದೆ? ಬೇರೆ ಉಪಾಯವಿಲ್ಲದೆ, ಅವರ ಗೌರವ ಕಾಪಾಡುವ ಕರ್ತವ್ಯವನ್ನು ಕೃಷ್ಣನು ತಾನೆ ಹೊತ್ತನು. ಶುಭ ದಿವಸದಲ್ಲಿ ಇವರೆಲ್ಲರನ್ನು ತಾನೆ ವಿವಾಹಮಾಡಿಕೊಂಡನು. ಇಲ್ಲದಿದ್ದಲ್ಲಿ ಇಷ್ಟು ಆರ್ಯ ಸ್ತ್ರೀಯರು ಅನಾರ್ಯರ ಹಾಗೂ ಕಾಡುಜನಗಳ ಪಾಲಾಗುತಿದ್ದರು. ಈ ಸಾಹಸದಿಂದ ಕೃಷ್ಣನು ಜನರಿಗೆ ಕಠಿನ ಪ್ರಸಂಗಗಳಲ್ಲಿ ಆಚರಿಸಬೇಕಾದ ಧರ್ಮವನ್ನು ತೋರಿಸಿದನು. ಈ ಸ್ತ್ರೀಯರೆಲ್ಲ ಧರ್ಮವಿಚಾರಗಳಲ್ಲಿ ಮನಸ್ಸನ್ನು ಇರಿಸಿ, ಸನ್ಯಾಸಿನಿಯರಂತೆ

ಬಾಳಿದರು. ಕೃಷ್ಣನು ಎಂದೂ ಸ್ತ್ರೀಯ ಮಾತಿನ ಮೇಲೆ ಪಕ್ಷಪಾತವನ್ನಿಟ್ಟು ಮನೆಯಲ್ಲಿ ಒಳಜಗಳವು ಉಂಟಾಗಲು ಆಸ್ಪದಕೊಟ್ಟದಿಲ್ಲ. ಹೆಚ್ಚಾಗಿ ಅಣ್ಣತಮ್ಮಂದಿರೊಳಗೆ ಕಲಹವಾಗುವುದಕ್ಕೆ ಅವರವರ ಹೆಂಡಿರೇ ಕಾರಣರಾಗುವುದುಂಟು.

17. ರುಕ್ಮಿಯು ~~ಕೃಷ್ಣನಿಗೆ~~ ಮೈದುನನಲ್ಲವೆ? ಅವನ ಮುಮ್ಮಗಳೊಡನೆ, ಕೃಷ್ಣನ ಮುಮ್ಮಗನಿಗೆ ಮದುವೆಯಾಯಿತು. ಆ ವಿವಾಹಕಾಲದಲ್ಲಿ ಬಹು ಮಂದಿ ರಾಜರುಗಳು ಅಲ್ಲಿಗೆ ಬಂದಿದ್ದರು. ಕಳಿಂಗರಾಜನೂ ಅಲ್ಲಿದ್ದನು. ರುಕ್ಮಿಯು ಬಲರಾಮನೊಡನೆ ಪಗಡೆಯಾಟವಾಡುವುದೆಂದು ಕಳಿಂಗನ ಸೂಚನೆಯಾಯಿತು. ಆಟವಾಡಿದರು; ಬಲರಾಮನು ಸೋತನು. ಆಟದಲ್ಲಿ ಜಯ-ಅಪಜಯಗಳೆಂಬುವು ಆಡುವವರ ಬುದ್ಧಿವಂತಿಕೆಯನ್ನು ಆಧರಿಸಿರುವುದಿಲ್ಲ. ಪಕ್ಕನೆ ಗೆಲ್ಲಬಹುದು; ಸೋಲಲೂ ಬಹುದು. ಬಲರಾಮನು ಸೋತನೆಂದು ಕಳಿಂಗನೂ ರುಕ್ಮಿಯೂ ಅವನಿಗೆ ಪರಿಹಾಸ್ಯ ಮಾಡಿದರು. ಬಲರಾಮನು ಯಾವಾಗಲು ಸಿಡುಕುಳ್ಳವನು; ಈ ನಗುವಿನಿಂದ ಕೆರಳಿದನು. ಆದರೂ ಸ್ವಲ್ಪ ತಡೆದುಕೊಂಡನು. ಮರಳಿ ಇನ್ನೊಮ್ಮೆ ಆಡಿದರು. ಆಗಲೂ ಎಲ್ಲರು ಬಲರಾಮನು ಸೋಲುವನೆಂದರು. ರುಕ್ಮಿಯು ನಕ್ಕುನೂರಾದನು. ಆಗ ಬಲರಾಮನು ಸಿಟ್ಟನ್ನು ಸಹಿಸಲಾರದೆ, ಆಡುತಿದ್ದ ದಾಳಗಳನ್ನು ಬಲವಾಗಿ ಬೀಸಿ ರುಕ್ಮಿಯ ಕಪಾಲಕ್ಕೆ ಒಡೆದನು. ರುಕ್ಮಿಯು ತಲೆಯೊಡೆದು ಮಡಿದನು. ಕಳಿಂಗರಾಜನು ನಗುವಾಗ ಅವನ ಎರಡು ಹಲ್ಲುಗಳು ಹೊರಬಿದ್ದು ವಿಕಾರವಾಗಿ ತೋರುತಿದ್ದಿತು. ಬಲರಾಮನು ಸಿಟ್ಟಾಗಿ ಆ ಹಲ್ಲುಗಳನ್ನೆ ಕಿತ್ತನು.

18. ರುಕ್ಮಿಯ ಮರಣದಿಂದ ರುಕ್ಮಿಣಿಯು ದುಃಖಪಟ್ಟು ಏನೇನನ್ನೆಲ್ಲ ಆಡಿದಳು! ಕೃಷ್ಣನು ಹ್ಞಾಂ-ಹ್ಞೂಂ ಎನ್ನದೆ ಮೌನ ತಳೆದಿದ್ದನು. ಅಣ್ಣನನ್ನು ದೂರುವುದೆ? ಹೆಂಡತಿಯನ್ನು ತಡೆವುದೆ? ಅಣ್ಣನಲ್ಲಿ ಭಕ್ತಿ, ಹೆಂಡತಿಯಲ್ಲಿ ಪ್ರೀತಿ ಎರಡೂ ಅವನಿಗೆ ಸಮಾನವಾಗಿದ್ದುವು. ಒಬ್ಬರ ಪಕ್ಷವಾಗಿ ಆಡಿದರೆ, ಮತ್ತೊಬ್ಬರಿಗೆ ಸರಿಯಾಗದು. ಆದುದರಿಂದ ಅಲ್ಲಿ ಏನೂ ಸಂಭವಿಸಿಲೆ ಇಲ್ಲ ಎಂಬಂತೆ ಕೃಷ್ಣನು ಸುಮ್ಮನಿದ್ದನು. ಯಾರೊಬ್ಬರ ಕಡೆಯಾಗಿ ಅವನು ಮಾತೆತ್ತಿದರೆ ರಗಳೆಯುಂಟಾಗುತಿದ್ದಿತು. ತಾನು

ಮಾಯೆ ಮೋಹಗಳಿಗೆ ಮಿಾರಿದ್ದವನೆಂದು ಈ ರೀತಿ ಅವನು ತೋರಿಸಿ ಕೊಟ್ಟನು.

19. ಕೃಷ್ಣನು ಪವಡಿಸಿರುವನು. ರುಕ್ಮಿಣಿಯು ಅವನ ಪಾದ ಗಳನ್ನು ಒತ್ತುತಿರುವಳು 'ರುಕ್ಮಿಣೀ, ನೀನು ರಾಜಕನ್ಯೆ. ಎಂತೆಂತಹ ಅರಸುಗಳು ನಿನ್ನನ್ನು ಮದುವೆಯಾಗಲು ಅಂದು ಬಂದಿದ್ದರಲ್ಲವೆ? ಅವ ರನ್ನು ತಿರಸ್ಕರಿಸಿ ನನ್ನನ್ನು ನೀನು ಮದುವೆಯಾದುದು ಅನ್ಯಾಯವಾಗ ಲಿಲ್ಲವೆ? ಹಗೆಗಳಿಗೆ ಹೆದರಿ ನಾನು ಸಮುದ್ರಮಧ್ಯದ ದ್ವೀಪದಲ್ಲಿ ನೆಲೆ ನಿಂದಿರುವೆನು. ನನಗೆ ರಾಜ್ಯವೂ ಇಲ್ಲ, ಸಿಂಹಾಸನವೂ ಇಲ್ಲ. ಇನ್ನು ನೋಡು. ನನಗೆ ಮಾಯೆ ಮೋಹ ಒಂದೂ ಇಲ್ಲ. ನಾನು ಎಂತಹನು ಏನು ಮಾಡುವೆನು ಎಂಬುದನ್ನು ಯಾರೂ ತಿಳಿಯರು. ಜನರೆಲ್ಲ ಹೆಂಡತಿ ಮಕ್ಕಳಿಗೆ ಅಧೀನರು. ನಾನು ಹಾಗೆ ಎಂದೂ ಇರುವುದಿಲ್ಲ. ನನ್ನ ದಾರಿಯಂತೂ ಮುಳ್ಳು ಮುತ್ತಿದುದು; ಸ್ತ್ರೀಯರಿಗೆ ಇದೇ ಎಂದಿಗೂ ಒಪ್ಪಲಾರದು. ನಾನು ಬಡವನು; ದೀನದರಿದ್ರರೆ ನನಗೆ ಪ್ರಿಯರು. ಈ ದೆಸೆಯಿಂದ ಶ್ರೀಮಂತರು ನನ್ನ ಕೂಡೆ ಇರುವುದಿಲ್ಲ. ಅವರು ನನ್ನನ್ನು ಮೆಚ್ಚುವುದೂ ಇಲ್ಲ. ಪತಿ-ಪತ್ನಿಯರ ಎರಡೂ ಪಕ್ಷದ ಸಂಪತ್ತು ವಂಶ ಮೊದಲಾದುವು ಒಂದೇ ಸಮಾನವಾಗಿದ್ದರೆ ಅವರೊಳಗೆ ಪ್ರೀತಿ ಹುಟ್ಟು ವುದು. ನನ್ನಂತಹ ದೀನನನ್ನು ನಿನ್ನಂತಹ ಶ್ರೀಮಂತ ರಾಜಕನ್ಯೆಯು ಮೋಹಿಸುವಳೆ? ನೀನು ಯಾವನೊಬ್ಬ ರಾಜನನ್ನೆ ವರಿಸಿದ್ದರೆ ಎಷ್ಟು ಸುಖಿ ಯಾಗುತಿದ್ದೆ! ಶಿಶುಪಾಲನಂತಹ ಗರ್ವಿಷ್ಟರನ್ನು ಮುರಿಯುವುದಕ್ಕಾಗಿಯೆ ನಾನು ನಿನ್ನನ್ನು ಅಪಹರಿಸಿ ತಂದೆನು. ಆದರೆ ನಾನು ಮನೆಯ ಮೇಲೆ ಯಾವುದೊಂದು ಪ್ರೀತಿಯಿಲ್ಲದವನು. ನನ್ನ ಮೇಲೆಯೆ ನನಗೆ ಮಮತೆ ಇಲ್ಲ. ಸ್ತ್ರೀ, ಪುತ್ರ, ಧನ ಇವುಗಳಲ್ಲಿ ಒಂದನ್ನೂ ನಾನು ಮೆಚ್ಚುವುದಿಲ್ಲ. ನನ್ನಲ್ಲೆ ನಾನು ಸಂತುಷ್ಟನಾಗಿರುವೆನು.' ಎಂದು ಕೃಷ್ಣನು ರುಕ್ಮಿಣಿಗೆ ಹೇಳಿದನು.

20. ರುಕ್ಮಿಣಿಯು ಈ ಮಾತುಗಳನ್ನು ಕೇಳಿ ಬೇಸರಹೊಂದಿದಳು. ಅತ್ತುಕೊಂಡಳು. 'ನನಗೆ ನೀವಲ್ಲದೆ ಇತರರಾರೂ ಇಲ್ಲ. ನೀವಲ್ಲದೆ ಬೇರೇನೂ ನನಗೆ ಬೇಡವಾಗಿದೆ. ನಿಮ್ಮನ್ನು ಪಡೆದುದೇ ನನಗೆ ಸ್ವರ್ಗವು. ನನ್ನ ಸುಖವು ಈ ಜಗತ್ತಿನಲ್ಲಿ ಇನ್ನಾರಿಗಿದೆ?' ಎಂದಳು.

21. ಕೃಷ್ಣನಂತೆ ರುಕ್ಮಿಣಿಯೂ ಧರ್ಮಪ್ರಾಣಳು. ಕೃಷ್ಣನಂತಹ ಪತಿಯಿಲ್ಲ, ರುಕ್ಮಿಣಿಯಂತಹ ಸತಿಯಿಲ್ಲ. ಯಾವ ಪಾಪವೂ ಯಾವ ದೋಷವೂ ಇಂತಹ ಸಮಾನಗುಣವುಳ್ಳ ಪತಿ-ಸತಿಯರು ಇರುವಲ್ಲಿ ತಟ್ಟ ಲಾರವು.

---

# ೮. ಸಾರ್ವಭೌಮ.

1. ಕೃಷ್ಣನ ಹೆಸರು ಎಲ್ಲೆಲ್ಲಿಯೂ ಮುಟ್ಟಿತು. ನಾಲ್ಕೂ ದಿಕ್ಕು ಗಳಲ್ಲಿದ್ದ ರಾಜರುಗಳು ಅವನಿಗೆ ಭಯಪಡುತಿದ್ದರು. ಮನ್ನಣೆ ತೋರಿಸು ತಿದ್ದರು, ಅವನೇ ಶ್ರೇಷ್ಠನೆಂದು ಒಪ್ಪಿಕೊಳ್ಳುತಿದ್ದರು. ಕೃಷ್ಣನ ವೀರತ್ವ, ಧರ್ಮಜ್ಞಾನ, ಯೋಗಾಭ್ಯಾಸ, ರಾಜನೀತಿಜ್ಞಾನ, ರಾಜ್ಯಶಾಸನ ಶಕ್ತಿ, ತೀಕ್ಷ್ಣಬುದ್ಧಿ ಮೊದಲಾದವುಗಳನ್ನು ತಿಳಿದು, ಅವರೆಲ್ಲರೂ ಅವನಿಗೆ ಗೌರವ ಕೊಡುತಿದ್ದರು. ಅಧರ್ಮಿಗಳಿಗೆ ಅವನು ಯಮನು; ಅನ್ಯಾಯಿಗಳಿಗೆ ಅವನು ಮೃತ್ಯು. ಈ ದೇಶಕ್ಕೆ ಸರಿಯಾದ ಒಂದು ಧರ್ಮವನ್ನು ರಚಿಸಿ ಕೊಡಬೇಕು; ಎಲ್ಲ ರಾಜರುಗಳನ್ನು ಒಬ್ಬ ಸಾರ್ವಭೌಮನ ಕೆಳಗೆ ಇರಿಸ ಬೇಕು,— ಇಷ್ಟೆ ಅವನ ಉದ್ದೇಶವಾಗಿದ್ದಿತು. ಅಂತಹನಿಗೆ ಯಾರು ತಾನೆ ಶ್ರೇಷ್ಠನೆನ್ನರು ? ಎಲ್ಲರೂ ಅವನ ಸಹಾಯವನ್ನೂ, ಗೆಳೆತನವನ್ನೂ ಪಡೆ ಯಲು ಸಾಧಿಸುತಿದ್ದರು. ಪಾಂಡವರೂ ಹಾಗೆಯೆ, ಕೌರವರೂ ಅದ ರಂತೆಯೆ.

2. ಶೋಣಿತಪುರದಲ್ಲಿ **ಬಾಣ**ನೆಂಬ ಅರಸು ಇದ್ದನು. ಅವನ ಮಗಳ ಹೆಸರು **ಉಷಾದೇವಿ.** ಇವಳನ್ನು ಕೃಷ್ಣನ ಪುತ್ರನಾದ ಪ್ರದ್ಯು ಮ್ನನು ಗಾಂಧರ್ವ ವಿವಾಹಮಾಡಿಕೊಂಡಿದ್ದನು. ಪ್ರದ್ಯುಮ್ನನು ಮಾವನ ಮನೆಗೆ ಹೋಗಲು, ಅವನನ್ನು ಬಾಣನು ಸೆರೆಹಿಡಿದನು. ನಾರದನು ಈ ವೃತ್ತಾಂತವನ್ನು ಕೃಷ್ಣನಿಗೆ ತಿಳುಹಿದನು. ಸರಿ, ಯುದ್ಧಕ್ಕೆ ಸಿದ್ಧ ವಾಯಿತು. ಬಾಣನು ಶಿವನ ಭಕ್ತನು. ಅವನು ಶಿವನಿಗೆ ಈ ಯುದ್ಧ ವೃತ್ತಾಂತವನ್ನು ಹೇಳಲು, ಶಿವನು ಭಕ್ತನ ಸಲುವಾಗಿ, ತಾನೆ ತ್ರಿಶೂಲ ವನ್ನು ಹಿಡಿದುಕೊಂಡು ಯುದ್ಧಕ್ಕೆ ಬಂದನು. ಕೃಷ್ಣನು ಚಕ್ರವನ್ನು

ಬಿಸುಟು ಬಾಣನ ತೋಳುಗಳನ್ನು ಕತ್ತರಿಸಿದನು. ಶಿವನು ಬಾಣನನ್ನು ಮರೆಯಿರಿಸಿದ ಕಾರಣ ಮಾತ್ರ ಬಾಣನು ಜೀವಸಹಿತ ಉಳಿದನು. ಕೃಷ್ಣನು ಮಗನನ್ನೂ, ಸೊಸೆಯನ್ನೂ ಕರೆದುಕೊಂಡು ದ್ವಾರಕೆಗೆ ಮರಳಿದನು. ಒಂದು ಕಾಲದಲ್ಲಿ ಶಿವನು ಮಹಾವೀರನೆಂದು ಹೆಸರು ಪಡೆದಿದ್ದನು. ಇನ್ನು ಕೃಷ್ಣನೆ ಅವನಿಗೂ ಮಿಗಿಲಾದವನೆಂದು ಕೀರ್ತಿ ಹೊಂದಿದನು. ಕೃಷ್ಣನು ಸಾಮಾನ್ಯವೀರನೆ ?

3. ಬಾಣನೊಡನೆ ಯುದ್ಧವಾದ ಬಳಿಕ, ಕೃಷ್ಣನು ಯುಧಿಷ್ಠಿರ ನಲ್ಲಿಗೆ ರಾಜಸೂಯಯಾಗದ ಉತ್ಸವಕ್ಕೆ ಬಂದನು. ಭಾರತವರ್ಷದ ಎಲ್ಲ ಮುಖ್ಯ ರಾಜರು ಈ ಯಾಗಕ್ಕೆ ಬಂದಿದ್ದರು. ಯಜ್ಞವಾದ ಬಳಿಕ, ಸರ್ವಶ್ರೇಷ್ಠನಾದವನಿಗೆ ಅರ್ಘ್ಯವನ್ನು ಕೊಡಬೇಕಾಗಿದೆ. ಸಭೆಯಲ್ಲಿದ್ದ ಭೀಷ್ಮ ದ್ರೋಣ ಮೊದಲಾದವರೆಲ್ಲರೂ ಒಮ್ಮತವಾಗಿ, ಕೃಷ್ಣನಿಗೇ ಅರ್ಘ್ಯ ವನ್ನು ಕೊಡಬೇಕೆಂದರು. 'ಕೃಷ್ಣನು ಜಗತ್ತಿನಲ್ಲಿ ಮಹಾಪುರುಷನು; ಅವನೆ ಅರ್ಘ್ಯಪೂಜೆಗೆ ಯೋಗ್ಯನು.' ಎಂದು ಭೀಷ್ಮನು ಕೊಂಡಾಡಿ ದನು. ಯುದ್ಧ, ಜ್ಞಾನ, ಯೋಗ, ಬುದ್ಧಿ, ರಾಜನೀತಿ, ಧರ್ಮಸಂಸ್ಥಾ ಪನ, ಮೊದಲಾದ ಎಲ್ಲ ವಿಷಯಗಳಲ್ಲೂ, ಕೃಷ್ಣನಿಗೆ ಯಾರೂ ಎಣೆಯಾ ಗಿರಲಿಲ್ಲ. ಯುಧಿಷ್ಠಿರನು ಸಭೆಯಲ್ಲಿ ಕೃಷ್ಣನಿಗೇ ಅರ್ಘ್ಯಪ್ರದಾನವನ್ನು ಮಾಡಿದನು. ಅರಸುಗಳು ಇದರಿಂದ ಅಪಮಾನಹೊಂದಿದವರಂತೆ ಸಿಟ್ಟಾ ದರು. ಚೇದೀರಾಜನಾದ ಶಿಶುಪಾಲನು ಇವರಲ್ಲಿ ಮುಂದಾಗಿ ಬಂದು, ಬಾಯಿಗೆ ಬಂದ ರೀತಿಯಲ್ಲಿ ನಿಂದೆಯ ಮಾತುಗಳನ್ನು ಕೃಷ್ಣನ ಮೇಲೆ ಸುರಿದನು. ಕೃಷ್ಣನು ಎಷ್ಟೋ ತಾಳಿಕೊಂಡನು. ಶಿಶುಪಾಲನ ಮಾತು ಗಳು ಇನ್ನೂ ಕಠಿಣವಾದುವು. ಇನ್ನು ಕೃಷ್ಣನು ಸಹಿಸಲಾರನು. ಆ ಮಹಾಸಭೆಯಲ್ಲಿ ಎಲ್ಲ ಅರಸುಗಳ ಸಮಕ್ಷದಲ್ಲಿ ಅವನು ಶಿಶುಪಾಲ ನನ್ನು ಕೊಂದಿಕ್ಕಿದನು. ಅಧರ್ಮಿಯೊಬ್ಬನು ಮಡಿದಂತಾಯಿತು. ದುಷ್ಟ ನಿಗೆ ಯೋಗ್ಯವಾದ ದಂಡನೆಯಾಯಿತು. ರಾಜಸೂಯಯಜ್ಞವು ಸಂಭ್ರಮ ದಿಂದ ಕೊನೆಗೊಂಡಿತು. ಕೃಷ್ಣನು ದ್ವಾರಕೆಗೆ ಹಿಂತಿರುಗಿದನು.

4. ಕೃಷ್ಣನು ಶಿಶುಪಾಲನನ್ನು ಕೊಂದನಂತೆ ! ಸೌತಪತಿ ಸಾಲ್ವನು ಈ ಸುದ್ದಿಯನ್ನು ಕೇಳಿದನು. ಕೇಳಿ, ಸೈನ್ಯದೊಡನೆ ದ್ವಾರಕೆಗೆ ಬಂದು ಯುದ್ಧವನ್ನು ಆರಂಭಿಸಿದನು. ಕೃಷ್ಣನು ಇನ್ನೂ ದ್ವಾರಕೆಗೆ ಬಂದಿರಲಿಲ್ಲ.

ಪ್ರದ್ಯುಮ್ನನೇ ಯುದ್ಧವನ್ನು ವಹಿಸಿಕೊಳ್ಳಬೇಕಾಯಿತು. ಸಾಲ್ವನು ಸೋತನಾದರೂ, ರಾಜ್ಯವನ್ನೂ ಜನರನ್ನೂ ಧ್ವಂಸಮಾಡಿದನು. ಅವನು ಮರಳಿದ ತರುವಾಯ, ಕೃಷ್ಣನು ಮನೆಗೆ ಬಂದು ನಡೆದ ಸಂಗತಿಯನ್ನು ಕಂಡು, ಸಾಲ್ವನ ಹಾವಳಿಗಾಗಿ ನೊಂದನು. ನೊಂದು, ಸೈನ್ಯದೊಡನೆ ಸಾಲ್ವನ ಮೇಲೆ ಯುದ್ಧಕ್ಕೆ ನಡೆದನು. ಕೆಲವು ದಿನಗಳ ತನಕ ಯುದ್ಧ ನಡೆಯಿತು. ಸಾಲ್ವನು ಗೆಲುವುದುಂಟೆ? ಸೋತನು, ಸತ್ತನು. ಕೃಷ್ಣನು ಅವನನ್ನು ಈ ರೀತಿಯಾಗಿ ದಂಡಿಸಿ ದ್ವಾರಕೆಗೆ ಬಂದನು.

5. ಅದೇ ಸಮಯದಲ್ಲಿ, ಪಾಂಡವರು ವನವಾಸಕ್ಕೆ ತೆರಳಿರುವ ವೃತ್ತಾಂತವು ಕೇಳಿ ಬರಲು, ಕೃಷ್ಣನು ಅವರ ದುಃಖಕಾಲದಲ್ಲಿ ಅವರನ್ನೊಮ್ಮೆ ಕಂಡು ಬರುವುದಕ್ಕಾಗಿ, ಅವರು ಇದ್ದ ಕಾಮ್ಯಕವನಕ್ಕೆ ನಡೆದನು. ಪಾಂಡವರ ಆ ಸಂಕಟಕಾಲದಲ್ಲಿ, ಕೃಷ್ಣನು ಅವರು ಧರ್ಮಾತ್ಮರೆಂದು ತಿಳಿದವನಾದ ಕಾರಣ, ಎಷ್ಟೋ ಬಾರಿ ನಾನಾ ರೀತಿಯಲ್ಲಿ ಅವರಿಗೆ ಸಹಾಯ ಮಾಡಿದನಲ್ಲದೆ, ಯೋಗ್ಯವಾದ ಬುದ್ಧಿವಾದವನ್ನೂ ಹೇಳಿಕೊಟ್ಟು, ಅವರ ಪಕ್ಷವಾಗಿ ಇದ್ದನು.

6. ಮುಂದೆ, ಪಾಂಡವರ ಅಜ್ಞಾತವಾಸವು ಮುಗಿಯಿತು. ಅವರು ಊರಿಗೆ ಹಿಂತಿರುಗಿದರು. ಕೃಷ್ಣನು ಅವರನ್ನು ಕಂಡು, ಅವರ ಸಾಹಸ ಸತ್ಯಗಳಿಗೆ ಮೆಚ್ಚಿ, ಅವರಿಂದಲೇ ಧರ್ಮವನ್ನು ನೆಲೆಗೊಳಿಸಲು ಯತ್ನಿಸುವೆನೆಂದನು. ಎಲ್ಲ ರಾಜರುಗಳಿಗೂ ದುರ್ಯೋಧನ ಮೊದಲಾದವರು ಮಾಡಿದ ಅನ್ಯಾಯಗಳನ್ನು ಅವನು ವಿವರಿಸಿದನು; ಆದಲ್ಲದೆ, ರಾಜರೆಲ್ಲರೂ ಸೇರಿ ಕೌರವ-ಪಾಂಡವರೊಳಗೆ ಇಬ್ಬರಿಗೂ ಹಿತವಾಗುವಂತೆ ಗೆಳೆತನವನ್ನು ಹೂಡಬೇಕೆಂದೂ, ಹಾಗೆಮಾಡದಿದ್ದರೆ ಯುದ್ಧವಾಗಿ, ಭಾರತ ವರ್ಷದ ರಾಜರೆಲ್ಲರೂ ನಾಶಹೊಂದುವರೆಂದೂ ಹೇಳಿದನು.

7. ಕೃಷ್ಣನು ತಾನೆ, ಧೃತರಾಷ್ಟ್ರನ ಬಳಿಗೆ ಸಂಧಾನಕ್ಕಾಗಿ ದೂತನನ್ನು ಕಳುಹಿದನು. ಸಂಧಿಯಾಗಲಿಲ್ಲ. ಯುದ್ಧವೇ ಆಗಬೇಕೆಂದು ನಿಶ್ಚಯವಾಯಿತು. ಕೃಷ್ಣನು ಮನಸ್ಸಿನಲ್ಲಿ ಬೇಸರವಾಗಿ ದ್ವಾರಕೆಗೆ ಹೋದನು. ತನ್ನ ಮಾತು ಹಿಡಿಯಲಿಲ್ಲವೆಂದೇ ಅವನ ಕಳವಳ. ಉತ್ತಮ; ಇದೇ ಸಮಯ; ಇನ್ನು ಭಾರತದಲ್ಲಿ ಧರ್ಮವನ್ನು ಸ್ಥಾಪಿಸಲು ಪೇಚಾಡುವೆನೆಂದನು.

8. ಕೌರವ-ಪಾಂಡವರು ತಂತಮ್ಮ ಸೈನ್ಯಗಳನ್ನು ಸಿದ್ಧಗೊಳಿಸಿದರು. ಕೃಷ್ಣನು ಆ ಕಾಲದಲ್ಲಿ ಎಣೆಯಿಲ್ಲದ ವೀರನಲ್ಲವೆ? ಅವನು ಯಾವ ಪಕ್ಷಕ್ಕೋ, ಅದೇ ಜಯಹೊಂದುವುದು. ದುರ್ಯೋಧನನು ಅದಕ್ಕಾಗಿ ಅವನ ಬಳಿಗೆ ಬಂದನು. ಆಗ ಕೃಷ್ಣನು ನಿದ್ದೆಹೋಗಿದ್ದನು. ದುರ್ಯೋಧನನು ಕೃಷ್ಣನ ತಲೆಯ ಬಳಿ ಕುಳಿತನು.

9. ಅರ್ಜುನನೂ, ಸ್ವಲ್ಪ ಹೊತ್ತಿನ ತರುವಾಯ, ಅಲ್ಲಿಗೇ ಬಂದನು. ಅವನು ಕೃಷ್ಣನ ಪಾದಗಳ ಬಳಿ ಕುಳಿತನು. ಕೃಷ್ಣನು ನಿದ್ದೆ ತಿಳಿದು ಎದ್ದನು. ಅವನು ಕಣ್ತೆರದು, ಮೊದಲಾಗಿ ಅರ್ಜುನನನ್ನು ಕಂಡನು. ಕಣ್ಣೆತ್ತಿ ತಿರುಗಿ ನೋಡಿದನು,—ಅತ್ತ ದುರ್ಯೋಧನನು! ಯೋಗಕ್ಷೇಮವನ್ನು ಕುರಿತು ಮಾತುಗಳು ಮುಗಿದ ಬಳಿಕ, ಯುದ್ಧದಲ್ಲಿ ಕೃಷ್ಣನು ತನಗೆ ಸಹಾಯಕನಾಗ ಬೇಕೆಂದು ದುರ್ಯೋಧನನು ಹೇಳಿದನು. ಕೃಷ್ಣನು ಮರುಮಾತೆತ್ತಲಿಲ್ಲ, ನಂತರ, 'ಇಬ್ಬರೂ ನಿಮಗೆ ಆತ್ಮೀಯರು ಎಂಬುದು ನಿಜ; ಆದರೆ ನಾನು ಮೊದಲು ಬಂದವನು. ಆದುದರಿಂದ ನೀವು ನನ್ನ ಪಕ್ಷವಾಗಿಯೆ ಬರಬೇಕು' ಎಂದು ದುರ್ಯೋಧನನು ಎಂದನು. ಕೃಷ್ಣನು, "ಮೊದಲು ಬಂದಿರ ಬಹುದು; ಆದರೆ ನಾನು ಅರ್ಜುನನನ್ನೆ ಮೊದಲು ಕಂಡೆನು. ನಾನು ಇಬ್ಬರಿಗೂ ಸಹಾಯಮಾಡುವೆನು. ಅರ್ಜುನಾ, ನನ್ನ ಒಂದು ಅರ್ಬುದ ನಾರಾಯಣೀಸೇನೆ ಇದೆ. ಅದರಲ್ಲಿ ಎಲ್ಲರೂ ನನ್ನಂತೆಯೆ ಕಾದಾಡಬಲ್ಲವರು. ಆ ಸೇನೆಯೆಲ್ಲವೂ ಒಂದು ಪಕ್ಷವಾಗಿರಲಿ; ನಾನು ಒಂದು ಪಕ್ಷವಾಗುವೆನು, ಆದರೆ ಅಸ್ತ್ರಗಳನ್ನು ಹಿಡಿಯೆನು; ಯುದ್ಧ ಮಾಡೆನು. ಈಗ ನಿನಗೆ ಯಾವುದು ಬೇಕೊ, ಅದನ್ನು ಪಡೆ!' ಎಂದನು.

10. ಅರ್ಜುನನು, ಕೃಷ್ಣನೊಬ್ಬನೆ ತನಗೆ ಗತಿಯೆಂದನು. ದುರ್ಯೋಧನನು ಒಂದು ಅರ್ಬುದ ನಾರಾಯಣೀಸೇನೆಯನ್ನು ಪಡೆದು ಸಂತೋಷದಿಂದ ಊರಿಗೆ ಹಿಂತೆರಳಿದನು. ಕೃಷ್ಣನು ಯುದ್ಧವನ್ನೂ ಮಾಡುವುದಿಲ್ಲವಂತೆ; ಅಸ್ತ್ರಹಿಡಿಯನಂತೆ; ಯುದ್ಧದಲ್ಲಿ ಸೈನಿಕರೇ ಬೇಕಲ್ಲವೆ,—ಇಂತಹನೇತಕ್ಕೆ? ಎಂದು ಅವನು ಭಾವಿಸಿದನು.

11. ಬುದ್ಧಿಯೇ ಬಲವು ಎಂಬುದನ್ನು ದುರ್ಯೋಧನನು ಹೇಗೆ ತಿಳಿಯಬಹುದು? ಸಾಮಾನ್ಯಸೈನ್ಯದೊಡನೆ ತೀಕ್ಷ್ಣನಾದೊಬ್ಬ ಸೇನಾಧಿ

ಪತಿಯು ಎಂತಹ ಯುದ್ಧದಲ್ಲಾದರೂ ಜಯ ಹೊಂದುವನಲ್ಲವೆ? ಅಯೋಗ್ಯನಾದ ಸೇನಾಧಿಪತಿಯು ಎಂತಹ ಸೈನ್ಯದಿಂದಲಾದರೂ ಜಯ ಹೊಂದಲಾರನು. ಕೃಷ್ಣನು ಮಾತ್ರ ಎಂತಹ ವೀರನೆಂದು ದುರ್ಯೋಧನನು ಎಣಿಸಲೆ ಇಲ್ಲ. ಬುದ್ಧಿಬಲವು ಪ್ರಬಲವೊ, ಸೈನ್ಯಬಲವೊ ಎಂಬದನ್ನು ಸಾಮಾನ್ಯರಾದವರು ಎಣಿಸುವುದಿಲ್ಲ.

12. ಹೀಗೆ ಯುದ್ಧಕ್ಕೆ ಎಲ್ಲ ಸನ್ನಾಹ ಮಾಡಲಾಯಿತು. ಎರಡು ಪಕ್ಷಗಳೊಳಗೆ ಎಂತಹ ಹಗೆ! ಮುಕ್ಕಾಲು ಪಾಲು ಅರಸುಗಳು ಕೌರವನ ಸಹಾಯಕ್ಕೆ ಸೇರಿದರು. ಇಷ್ಟಾದರೂ ಪಾಂಡವರಿಗೆ ಇನ್ನೂ ಯುದ್ಧ ಮಾಡುವುದಕ್ಕೆ ಮನವೊಪ್ಪದು. ಅವರು ಹೆಸರಿಗೆ ಮಾತ್ರ ಐದು ಊರು ಗಳನ್ನು ಬೇಡಿದರು. ಅವನ್ನು ಕೊಡುವುದಕ್ಕಾದರೂ ಕೌರವರು ಒಡಂಬಡ ಲಿಲ್ಲ. ಯುದ್ಧವಾಗದೆ, ಸೂಜಿಯ ಮೊನೆ ಚುಚ್ಚುವಷ್ಟು ಸ್ಥಳವನ್ನಾದರೂ ಕೊಡುವುದಿಲ್ಲವೆಂದೇ ದುರ್ಯೋಧನನ ಪ್ರತಿಜ್ಞೆ. ಇನ್ನು ಯುದ್ಧವಲ್ಲದೆ ಬೇರೆ ಉಪಾಯವೇನಿದೆ? ಆದರೂ ಪಾಂಡವರೂ ಯುದ್ಧವಾಗದ ಹಾಗೆ ಕೌರವರಿಗೆ ಬೋಧಿಸಿ ನೋಡಬೇಕೆಂದು ಕೃಷ್ಣನನ್ನೇ ಪ್ರಾರ್ಥಿಸಿಕೊಂಡರು. ಕೃಷ್ಣನು ತಾನೇ ಪಾಂಡವರ ದೂತನಾಗಿ ಕೌರವರ ಸಭೆಗೆ ತೆರಳಿದನು.

---

## ೯. ರಾಜದೂತ.

1. ಕೃಷ್ಣನು ರಾಜದೂತನಾಗಿ ಧೃತರಾಷ್ಟ್ರನ ಸಭೆಗೆ ಬಂದನು ಅವನನ್ನು ಸೆರೆಹಿಡಿದು ತಡೆಯಬೇಕೆಂದು ದುರ್ಯೋಧನನ ಹಂಚಿಕೆ ಯಾಯಿತು. ಅದಕ್ಕಾಗಿ ತನ್ನಲ್ಲಿ ಊಟಕ್ಕೆ ಬರಬೇಕೆಂದು ಕೃಷ್ಣನಿಗೆ ಹೇಳಿ ಕಳುಹಿದನು. ಅವನ ಬಾಯಿಯಿಂದ ಧರ್ಮವಿಷಯಕವಾದ ಕೆಲವು ವಿಚಾರಗಳನ್ನು ತಿಳಿಯುವ ಇಚ್ಛೆ ಉಂಟೆಂದು ತೋರಿಸಿಕೊಂಡನು. ದುರ್ಯೋಧನನು ಎಂತಹನೆಂದು ಕೃಷ್ಣನು ತಿಳಿದೇ ಇದ್ದನು. ಅವನು ದುರ್ಯೋಧನನ ಮನೆಗೆ ಹೋಗಲಿಲ್ಲ. 'ದೂತರಾದವರು ತಮ್ಮ ಕಾರ್ಯ ದಲ್ಲಿ ಜಯಹೊಂದಿದರೆ ಮಾತ್ರ, ಭೋಜನ ತಾಂಬೂಲಗಳನ್ನು ಅಂಗೀ

ಕರಿಸುವರು. ಯಾವಾಗ ಸಂಧಿಯಾಗಲಿಲ್ಲವೊ ನಿಮ್ಮ ಆಹಾರವನ್ನು ಸ್ವೀಕರಿಸಲಾರೆನು. ನಾನು ಕಾಮ ಕ್ರೋಧ ಲೋಭ ಕಪಟತೆ ದ್ವೇಷ ಇವುಗಳಲ್ಲಿ ಬೆರಸಿದೆನಾದರೆ, ಧರ್ಮವನ್ನು ಹೇಗೆ ಕಾಪಾಡಿಕೊಳ್ಳುವೆನು?' ಎಂದು ಉತ್ತರ ಕಳುಹಿಸಿದನು. ದುರ್ಯೋಧನನು ತನ್ನಲ್ಲಿ ನಾಚಿಕೊಂಡನು.

2. ಅಂದಿನ ಸಭೆಯಲ್ಲಿ ದ್ರೋಣ-ಭೀಷ್ಮ-ಕರ್ಣರೇ ಮೊದಲಾದ ವೀರರೇ ಸೇರಿದ್ದರು. ಕೃಷ್ಣನು ಆ ಮಹಾಸಭೆಯಲ್ಲಿ ಅನೇಕ ಮಾತುಗಳನ್ನು ಆಡಿದನು. ಅವನು ಧೃತರಾಷ್ಟ್ರ ಮಹಾರಾಜನನ್ನು ಕುರಿತು ಹೀಗೆಂದನು:—

3. 'ಮಹಾರಾಜ! ನೀವು ಭರತ ಕುಲಕ್ಕೆ ಸೂರ್ಯನಂತಿರುವವರು. ಯಾವ ಉಪಾಯಗಳಿಂದ ಪಾಂಡವ-ಕೌರವರೊಳಗೆ ಸಂಧಿಯಾಗಬಹುದೊ ತಾವು ಅವನ್ನೆ ಸಾಧಿಸತಕ್ಕುದಲ್ಲವೆ? ಯುದ್ಧದಿಂದ ಲಾಭವೇನಿದೆ? ಎರಡೂ ಕಡೆಯ ಬಹು ಮಂದಿ ಮಡಿಯಬೇಕಾಗುವುದು. ಯಾರು ಮಡಿಯುವರು ಯಾರು ಉಳಿಯುವರು ಎಂದು ಈಗ ಹೇಳಬರುವುದೇ? ಈ ರೀತಿಯಾಗಿ ಮಡಿಯುವುದಕ್ಕೆ ಯಾರೂ ಆಸೆ ಕಟ್ಟಿಕೊಂಡಿದ್ದಾರೆಯೇ? ಅದಕ್ಕಾಗಿಯೆ ಸಂಧಿಯಾಗಲೆಂದು ಇತ್ತ ಬಂದಿರುವೆನು. ನಾನು ಯಾರಿಗೂ ಉಪದೇಶಕೊಡಲು ಬಂದವನಲ್ಲ. ಉಪದೇಶ ಕೊಡುವುದಕ್ಕೂ ನನ್ನಲ್ಲಿ ಯೋಗ್ಯತೆಯಿಲ್ಲ. ಯುದ್ಧವು ಯೋಗ್ಯವೊ ಅಲ್ಲವೊ ಎಂಬುದನ್ನು ತಾವೆಲ್ಲರೂ ತಂತಮ್ಮೊಳಗೆ ಆಲೋಚಿಸಿಕೊಳ್ಳಬಹುದು.

4. 'ಇನ್ನೊಂದು ಮಾತು ಇದೆ. ನಿಮ್ಮ ಕುಲವೂ ವಿದ್ಯೆಯೂ ಸದಾಚಾರವೂ ಜಗತ್ತಿನಲ್ಲಿ ಎಲ್ಲರಿಗೂ ತಿಳಿದ ವಿಷಯವಾಗಿದೆ. ಇತರ ಎಲ್ಲ ರಾಜರುಗಳಿಗಿಂತಲೂ ಎಲ್ಲ ವಿಷಯಗಳಲ್ಲಿಯೂ ನೀವು ಶ್ರೇಷ್ಠರು. ದಯಾ, ಮಮತೆ, ಕ್ಷಮೆ, ಸತ್ಯ, ಮೊದಲಾದ ಶ್ರೇಷ್ಠ ಗುಣಗಳಿಗಾಗಿ ಈ ಕುರುಕುಲವು ಹೆಸರುಗೊಂಡಿದೆ. ಅಂತಹ ಕುಲದ ಪ್ರತಿನಿಧಿಗಳಾಗಿ ನೀವು ಜೀವಿಸಿರುವಾಗ, ಆಗಬಾರದ್ದು ಯಾವುದೂ ಆಗಿಹೋದರೆ, ಅದು ಅನ್ಯಾಯವಲ್ಲವೆ? ಕುರುಕುಲದವರೆಲ್ಲರನ್ನು ಕಾಪಾಡಿ ನಡೆಯಿಸುವ ಕರ್ತವ್ಯವು ನಿಮ್ಮದು. ನಿಮ್ಮ ಇದಿರಿನಲ್ಲಿಯೆ ಕೌರವರು ಎಂತಹ ಎಷ್ಟು

ನೀಚ ಅಯೋಗ್ಯ ಕೆಲಸಗಳನ್ನು ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಮಾಡಿರುವರು? ಇದು ಅನ್ಯಾಯವಲ್ಲವೆ? ಲೋಭಿಗಳಾಗಿರುವ ನಿಮ್ಮ ಮಕ್ಕಳು ನಡತೆಯಲ್ಲಿ ಹೀನರಾಗಿ, ಲೋಕದಲ್ಲಿ ಕುಲಕ್ಕೆ ನಿಂದೆಯನ್ನು ಉಂಟು ಮಾಡುವರಲ್ಲವೆ? ಅವರಿಗೆ ಧರ್ಮಜ್ಞಾನವಿಲ್ಲ, ಪೂರ್ವಾಪರ ಜ್ಞಾನವಿಲ್ಲ, ತಾನು-ಅವನು ಎಂಬುವ ವಿಚಾರವೆ ಇಲ್ಲ. ಧರ್ಮಕ್ಕೆ ಎಂದೊ ತಿಲತರ್ಪಣವನ್ನು ಕೊಟ್ಟು ಸೋದರರ ಮೇಲೆಯೆ ವಿರೋಧವನ್ನು ಸಾಧಿಸುತ್ತಿರುವರು. ತಮಗೆ ಆತ್ಮೀಯರಾದವರನ್ನು ಈ ರೀತಿ ಹಗೆಗಳನ್ನಾಗಿ ಮಾಡಿಕೊಳ್ಳುವುದು ಉತ್ತಮವೆ? ಈಗ ತಿಳಿದ ಮಟ್ಟಿಗೆ, ಇದರಿಂದ ಕೆಡುಕಲ್ಲದೆ ಬೇರೆ ಇಲ್ಲ. ಸುಮ್ಮನೆ ದುಡುಕುವುದೇಕೆ? ಇದರಿಂದ ಮಹಾಯುದ್ಧವು ಉಂಟಾಗುವುದು. ಎರಡೂ ಪಕ್ಷದ ಬಹು ಜನರು ಮಡಿಯುವರು; ಇನ್ನಷ್ಟು ಮುಂದಿಗೆ ದುಃಖವು ಉಂಟಾಗುವುದು. ಭಾರತವರ್ಷವು ವೀರಶೂನ್ಯವಾಗುವುದು. ದೇಶದಲ್ಲಿ ಹಾಹಾಕಾರ ಕೇಳ ಬರುವುದು. ಈಗಲೆ ಅವಕಾಶವಿದೆ. ನೀವೇ ಪೇಚಾಡಿದರೆ ಯುದ್ಧವಾಗದಂತೆ ತಡೆದು, ಕುಲಕ್ಷಯವನ್ನು ನಿವಾರಿಸಬಹುದು. ನೀವು ಸುಮ್ಮನೆ ಇರುವಿರಾದರೆ, ರಾಜ್ಯವೂ ಹಾಳಾಗುವುದು, ಕುರುಕುಲವೇ ಉಳಿಯಲಾರದು. ಪುತ್ರಶೋಕವನ್ನು ಅನುಭವಿಸಲು ಯಾರೂ ಆಸೆಪಡುವುದುಂಟೆ?

5. 'ಈ ಸಂಕಟವನ್ನು ನೀವು ಮನಸ್ಸಿಗೆ ತಂದುಕೊಂಡರೆ, ಯುದ್ಧವಾಗದಂತೆ ಇವರನ್ನು ನಡೆಯಿಸಬಹುದು. ನಿಮ್ಮ ಮಾತನ್ನು ಮೀರುವವರು ಇತ್ತಂಡದವರಲ್ಲಿ ಯಾರೂ ಇರಲಾರರು. ಕೌರವ-ಪಾಂಡವರ ಶಾಂತಿ-ಸೌಖ್ಯಗಳು ನಿಮ್ಮ ಮತ್ತು ನನ್ನ ಕೈಯಲ್ಲಿವೆ. ನಿಮ್ಮ ಮಕ್ಕಳಿಗೆ ನೀವು ಬುದ್ಧಿ ತಿಳುಹಿಸಿರಿ; ಪಾಂಡವರು ಅಸ್ತ್ರ ಧರಿಸದಂತೆ ನಾನು ನೋಡುವೆನು. ಸಂಧಿಯಾದರೆ, ಇವರಿಬ್ಬರಿಗೂ ದೊಡ್ಡ ಉಪಕಾರ ಮಾಡಿದಂತಾಗುವುದು.

6. 'ಇನ್ನೂ ಆಲೋಚಿಸಿರಿ. ಪಾಂಡವರನ್ನು ಜಯಿಸುವುದು ಸುಲಭವೇ? ಅವರು ವೀರರು, ಅದಲ್ಲದೆ ಧಾರ್ಮಿಕರು. ನೀವು ಅವರೊಡನೆ ಸಂಧಿ ಮಾಡಿಕೊಂಡರೆ, ದೇವತೆಗಳು ನಿಮಗೆ ಸಹಾಯಕರಾಗುವರು. ಅವರ ಸಹಾಯದಿಂದ ನೀವು ಇಡೀ ಭೂಮಂಡಲವನ್ನೆ ಜಯಿಸಿ ಆಳಬಹುದಲ್ಲವೆ?

7. 'ಯುದ್ಧದಲ್ಲಿ ವಿನಾಶವಲ್ಲದೆ ಬೇರೇನೂ ಇಲ್ಲ. ಯಾವ ಪಕ್ಷವು ಸೋತರೂ ದುಃಖವು ನಿಮ್ಮ ಪಾಲಿಗೇ ಬರುವುದಲ್ಲವೆ? ಅದಕ್ಕಾಗಿ ಸಂಧಿಯನ್ನು ಮಾಡಿಸಿರಿ. ಪಾಂಡವರು ಬಾಲ್ಯದಿಂದಲೂ ಪಿತೃಹೀನರು. ನೀವೇ ಅವರಿಗೆ ತಂದೆಯಂತಿರುವಿರಿ. ಅವರನ್ನು ವಿಪತ್ತಿನಿಂದ ಕಾಪಾಡು ವುದು ನಿಮ್ಮನ್ನೇ ಸೇರಿರುವುದು. ಹಾಗೆ ನೀವು ಮಾಡದಿದ್ದರೆ, ಸ್ವಕರ್ತವ್ಯ ವನ್ನು ಮಾಡದೆ ಉಳಿದ ದೋಷವೂ ನಿಮಗೇ ತಟ್ಟುವುದು.

8. ಅವರ ರಾಜ್ಯವನ್ನು ಅವರಿಗೆ ಹಿಂದಕ್ಕೆ ಕೊಡಿಸಿರಿ. ಇಷ್ಟ ನ್ನಲ್ಲದೆ ನಾನು ಬೇರೆ ಏನನ್ನೂ ಹೇಳುವುದಿಲ್ಲ. ಮರಳಿ ರಾಜ್ಯವನ್ನು ನಿಮ್ಮಿಂದ ಪಡೆದು, ಪಾಂಡವರು ನಿಮ್ಮನ್ನು ಸೇರಿ, ಉಭಯತರೂ ಸುಖಿ ಗಳಾಗಿರಿ. ಅವರಿಗೆ ಕೊಟ್ಟಿರುವ ಕಷ್ಟ ಪರಂಪರೆಗಳನ್ನು ನೆನೆಸಿಕೊಳ್ಳಿರಿ. ಪಾಂಡವರನ್ನು ಇಲ್ಲಿಂದ ಹೊರಡಿಸಿದಿರಿ; ಅರಗಿನ ಮನೆಯಲ್ಲಿ ಸುಡಲು ಯತ್ನಿಸಿದಿರಿ; ಶಕುನಿಯೊಡನೆ ಕಪಟದ ಜೂಜನ್ನು ಆಡಿಸಿದಿರಿ. ಅವರ ರಾಜ್ಯ, ದನ ಸಂಪತ್ತುಗಳನ್ನು ಸುಲಿದುಕೊಂಡಿರಿ; ದ್ರೌಪದಿಯುಟ್ಟ ಸೀರೆ ಯನ್ನು ಎಳೆಸಿ ಅವಳ ಮಾನಭಂಗವನ್ನು ಮಾಡಿದುದನ್ನು ಬೇರೆಯಾಗಿ ನೆನೆಸಿರಿ. ಇಷ್ಟು ಅಪಮಾನಗಳನ್ನು ಸಹಿಸಿಯೂ ಪಾಂಡವರು ನಿಮಗೇ ಶರಣೆಂದಿರುವರು. ಹೆಚ್ಚೇನು ಹೇಳಲಿ? ಪಾಂಡವರು ಸಂಧಿಗೂ ಯುದ್ಧಕ್ಕೂ ಸಿದ್ಧರು. ಯಾವುದು ಉತ್ತಮವೆಂದು ನಿಮಗೆ ತೋರುವುದೊ ಅದನ್ನೆ ಮಾಡಿರಿ. ಏಕೆಂದರೆ,—ಇತ್ತಂಡದ ದುಃಖಭೋಗಗಳನ್ನೂ ನೀವೆ ಅನು ಭವಿಸಬೇಕಾಗುವುದೆಂಬುದನ್ನು ಮರೆಯಬೇಡಿರಿ.'

9. ಹೀಗೆ ಭಾಷಣ ಮಾಡಿದನು. ಎಲ್ಲರೂ ಅವಾಕ್ಕಾದರು. ಭೀಷ್ಮ ದ್ರೋಣರೂ ಧೃತರಾಷ್ಟ್ರಗಾಂಧಾರಿಯರೂ ದುರ್ಯೋಧನನು ಸಂಧಿ ಮಾಡ ಬೇಕೆಂದು ಬೋಧಿಸಿದರು; ಬೆದರಿಸಿದರು.—ಆದರೆ ಅವನು ಎಳ್ಳಷ್ಟೂ ಒಪ್ಪಲಿಲ್ಲ. ದುರ್ಯೋಧನನು ಇನ್ನೂ ಸಿಟ್ಟಾಗಿ, ಎಲ್ಲರ ಇದಿರಿನಲ್ಲಿ, "ಯುದ್ಧ ವಾಗದೆ, ಮರಳು ಹರಳಿನಷ್ಟಾದರೂ ನೆಲ ದೊರೆಯದು. ಬೇಕಾದಂತೆ ಮಾಡಿರಿ!" ಎಂದು ಖಂಡಿತವಾಗಿ ನುಡಿದನು.

10. ಈ ಮಾತನ್ನು ಕೃಷ್ಣನು ಕೇಳಿ, ಸಹಿಸಲಾರದಷ್ಟು ಕೋಪ ಗೊಂಡನು. ಅವನ ಕಣ್ಣುಗಳು ಕೆಂಪೇರಿದುವು. ಆದರೆ ಪಕ್ಕನೆ ಶಾಂತ

ನಾಗಿ ನಕ್ಕನು. "ದುರ್ಯೋಧನಾ! ಇನ್ನು ಬಹಳ ಕಾಯಬೇಕಾಗಿಲ್ಲ. ಯುದ್ಧವಾಗುವುದು, ಮಹಾಯುದ್ಧವಾಗುವುದು; ಮಹಾ ಪ್ರಲಯವಾಗುವುದು. ಇವೇ ದೊರೆತಷ್ಟು ದಿನ, ರಾಜ್ಯಭೋಗವನ್ನು ಅನುಭವಿಸು. ಬಹುಕಾಲ ಬಾಳಲಾರೆ. ಮಣ್ಣಿನ ದೇಹವು ಮರಳಿ ಮಣ್ಣಾಗುವುದು. ಧರ್ಮವು ಲೋಕದಲ್ಲಿ ಬಾಳುವುದೆಂದಾದರೆ, ನಿನಗೆ ದಂಡನೆಯಾಗದೆ ಇರಲಾರದು. ಆ ಕಪಟದ ಜೂಜಾಟವನ್ನು ನೆನೆ; ದ್ರೌಪದಿಯ ಮಾನಭಂಗದ ಪ್ರಸ್ತಾಪವನ್ನು ಮರೆಯ ಬೇಡ. ದುರಾತ್ಮನಾದ ದುಃಶಾಸನನ ಮಾತುಗಳು ನೆನಪಿನಲ್ಲಿವೆಯಷ್ಟೆ. ತಾಯಿಯ ಸಮೇತವಾಗಿ ವಾರಣಾವತದಲ್ಲಿ ಪಾಂಡವರನ್ನು ಸುಟ್ಟುಹಾಕಲು ಪ್ರಯತ್ನಿಸಿದುದನ್ನು ಭಾವಿಸಿಕೊ,—ನಿನ್ನಂತಹ ಪಾಪಿಯು ತನ್ನ ಪಾಪಫಲವನ್ನು ಬೇಗನೆ ಉಣ್ಣದಿರುವನೆ?" ಎಂದು ದುರ್ಯೋಧನನಿಗೆ ಎಂದನು.

11. ಈ ಮಾತುಗಳನ್ನು ಕೇಳುತಿದ್ದಂತೆಯೇ, ದುರ್ಯೋಧನನ ಮುಖವು ಕೆಂಪೇರಿ, ಕೈಮುಂದರಿಸಿ, ಅವನು ಕೃಷ್ಣನನ್ನು ಹೊಡೆಯುವನೊ ಎಂಬಂತಿದ್ದಿತು. ಅವನು ಎಷ್ಟು ಬಗೆಯಾಗಿ ಕೃಷ್ಣನನ್ನು ಜರೆದು ನಿಂದಿಸಿ ಬೈದನೊ, ಅಷ್ಟೆ ಚೆನ್ನಾಗಿ ಕೃಷ್ಣನು ನಗುತಿದ್ದನು. ಕೊನೆಗೆ ಧೃತರಾಷ್ಟ್ರನನ್ನು ಕುರಿತು,—'ಮಹಾರಾಜರೆ, ಎಲ್ಲವನ್ನು ಕೇಳಿದಿರಲ್ಲವೆ? ಇವರು ನನ್ನನ್ನು ಹೊಡೆಯಲಿ, ಇಲ್ಲವೆ ನಾನು ಇವರನ್ನು ಹೊಡೆಯಲಿ,—ನೀವಂತೂ ಇದನ್ನೆಲ್ಲ ಅನುಮೋದಿಸುವಿರಲ್ಲವೆ? ಆದರೆ,—ನಾನೊಬ್ಬನೆ ಇವರಿಷ್ಟೂ ಮಂದಿಗೆ ತಕ್ಕ ಬುದ್ಧಿಯನ್ನು ಕಲಿಸಬಲ್ಲೆನು. ಅಷ್ಟು ನೀಚವಾದ ಕೆಲಸವನ್ನು ಮಾತ್ರ ನಾನು ಮಾಡಲಾರೆನು. ಅಂತಹ ಹೀನ ಕೆಲಸವನ್ನು ಯಾರೂ ಮಾಡುವರಾದರೂ ನಾನು ಸಹಾಯ ಮಾಡೆನು. ಇವರಿಷ್ಟೂ ಮಂದಿಯನ್ನು ಪಾಂಡವರ ಕೈಗೆ ಒಪ್ಪಿಸಿಕೊಡಬಲ್ಲೆನು, ನೋಡುವಿರಾ? ಆದರೂ ನಾನಾಗಿ ಹಾಗೆ ಮಾಡುವುದಿಲ್ಲ. ದುರ್ಯೋಧನನೆ ಬೇಕಾದಂತೆ ವರ್ತಿಸಲಿ, ನಾನು ಅವನನ್ನು ತಡೆಯುವವನಲ್ಲ. ಅವನನ್ನು ನಾನು ಮತ್ತೂ ಪ್ರೋತ್ಸಾಹಿಸುವೆನು.' ಎಂದು ಸೂಚಿಸಿಕೊಂಡು,—ದುರ್ಯೋಧನನಿಗೆ 'ಏನು? ಮನಸ್ಸಿನಲ್ಲಿ ಎಣಿಸಿದಂತೆ ನನ್ನನ್ನು ದಂಡಿಸಬಲ್ಲೆಯೆಂದು ಭಾವಿಸಿರುವೆಯಲ್ಲವೆ? ನಾನು ದೂತನಾಗಿ ಒಬ್ಬನು ಬಂದಿರುವೆನು; ಕಾದಾಡಿ ನನ್ನನ್ನು ಸೆರೆಯಲ್ಲಿರಿಸಬಲ್ಲೆಯೆಂದು ಭಾವಿಸು

ವೆಯಾ ? ಮೂರ್ಖಾ,—ನಾನೊಬ್ಬನೆ ? ನಾನೊಬ್ಬನಲ್ಲ. ಅಂಧಕ—ವೃಷ್ಣಿವಂಶಗಳ ಯೋದ್ಧರು ಇಲ್ಲೀ ಆಯುಧ ಜಳಪಿಸಿ ನಿಂದಿರುವರು. ನಿನ್ನ ತಲೆ ಹಾರಿಸುವುದಕ್ಕೆ ನನ್ನ ಕಣ್ಣುಸನ್ನೆ ಕಾಯುತ್ತಿರುವರು, ಬಲ್ಲೆಯಾ ?' ಎಂದು ಕೇಳಿದನು.

12. ಇಂತೆಂದು ನಗುತ್ತ, ಸಭಾಸದರ ಮತ್ತು ಋಷಿಗಳ ಅಪ್ಪಣೆ ಪಡೆದು ಕೃಷ್ಣನು ಅಲ್ಲಿಂದ ಹಿಂತಿರುಗಿ, ಸಾತ್ಯಕಿ ಕೃತವರ್ಮರೊಡನೆ ಪಾಂಡವರಲ್ಲಿಗೆ ಮರಳಿ ಬಂದನು. ಕೃಷ್ಣನು ಅಲ್ಲಿಂದ ತೆರಳಿದ ಬಳಿಕ, ಕೌರವ ಸಭೆಯಲ್ಲಿ ದುರ್ಯೋಧನನು ಬಹಳ ಗರ್ವದಿಂದ ತನ್ನ ಪರಾಕ್ರಮವನ್ನು ಎಲ್ಲರ ಮುಂದೆ ಹೊಗಳಿ ತೋರಿಸಿದನು. ನಂತರ ಯುದ್ಧವೇ ಆಗಲೆಂದು ನಿಶ್ಚಯವಾಯಿತು. ಭೀಷ್ಮದ್ರೋಣರು ಚಿಂತೆ ತುಂಬಿದ ತಮ್ಮ ತಲೆಗಳನ್ನು ಬಾಗಿಸಿಕೊಂಡು, 'ದುಷ್ಟರು ಕುಲವನ್ನು ಧ್ವಂಸ ಮಾಡುತ್ತಾರಲ್ಲ ! ಇನ್ನು ಭಾರತವರ್ಷದಲ್ಲಿ ವೀರರು ಇಲ್ಲದಂತಾಗುವುದಲ್ಲ ! ರಾಜ್ಯದಲ್ಲಿ ಹಾಹಾಕಾರವು ತುಂಬುವುದಲ್ಲ !' ಎಂದು ಸಭೆಯಿಂದ ತೆರಳಿದರು.

13. ಎರಡೂ ಕಡೆ, ಯುದ್ಧಸನ್ನಾಹವು ಮುಗಿಯಿತು.

---

# ೧೦. ಬಂಡಿಯಾಳು.

1. ಕೃಷ್ಣನು ದೌತ್ಯಕಾರ್ಯವನ್ನೆಲ್ಲ ಮುಗಿಸಿ ಮರಳಿದನು. ಅವನು ಪಾಂಡವರ ಶಿಬಿರವನ್ನು ಸೇರಿದೊಡನೆಯೆ, ಯುದ್ಧವಾಗದೆ ನಿರ್ವಾಹವೆ ಇಲ್ಲವೆಂದು ಯುಧಿಷ್ಠಿರನು ತಿಳಿದು, ಮನಸ್ಸಿನಲ್ಲಿ ಕಳವಳಪಟ್ಟನು. ಆದರೆ ಬೇರೆ ಉಪಾಯವೇನಿದೆ? ಯುದ್ಧಕ್ಕೆ ಅವನೂ ಸಮ್ಮತಿಕೊಟ್ಟನು.

2. ಅರ್ಜುನನಿಗೆ ಕೃಷ್ಣನಂತಹ ಬೇರೆ ಗೆಳೆಯರಿಲ್ಲ. ಅವರಿಬ್ಬರೂ ಮಹಾವೀರರು. ಒಂದೇ ಬಗೆಯ ಗುಣವೂ ಯೋಗ್ಯತೆಯೂ ಯಾರಲ್ಲಿರುವುವೊ, ಅಂತಹರು ಗೆಳೆಯರಾಗಿರುವುದು ನಿಯಮವಲ್ಲವೆ ! ಯೋಗ್ಯನು ಯೋಗ್ಯನನ್ನು ಮನ್ನಣೆಯಿಂದ ಕಾಣುವನು. ಯುದ್ಧವಾಗುವುದು,

ಜ್ಞಾತಿಗಳು ಸಾಯುವರು, ಸ್ವಜನರು ಧ್ವಂಸರಾಗುವರು, ಭೀಷ್ಮದ್ರೋಣ ರನ್ನು ಬಾಣಗಳಿಂದ ನೋಯಿಸುವುದು ಅಗತ್ಯವಾಗುವುದು, ಎಂದು ಚಿಂತಿಸಿ ಅರ್ಜುನನು ಕಂಗೆಟ್ಟನು. ಇದರಿಂದ ಮೋಸ! ಇಂತಹ ಸಮಯದಲ್ಲಿ ಮೋಹವೆ? ಭ್ರಾಂತಿಯೆ? ಭ್ರಮೆಯೆ? ಕೃಷ್ಣನು ಎಷ್ಟೋ ಜ್ಞಾನವನ್ನು ಹೇಳಿದನು. ಅರ್ಜುನನು ಯುದ್ಧ ಮಾಡಲು ಒಪ್ಪಲಿಲ್ಲ. ಆಗ ಕೃಷ್ಣನು ಭಗವಂತನ ಲೀಲಾಪ್ರಕಾರಗಳನ್ನು ವಿವರಿಸಿದನು. ಎಲ್ಲಿ ಅಧರ್ಮವೊ, ಎಲ್ಲಿ ಅಧರ್ಮಿಗಳೊ ಅಲ್ಲಿಗೆ ಕೃಷ್ಣನು ತೆರಳಿ, ಅಧರ್ಮಿಗಳ ಸಂಹಾರ ಮಾಡಿದ್ದನು. ಧರ್ಮವನ್ನು ಕಾಪಾಡುವುದಕ್ಕಾಗಿಯೆ ಈ ಯುದ್ಧವು; ಯುದ್ಧವಾಗದೆ ಧರ್ಮವನ್ನು ನೆಲೆನಿಲ್ಲಿಸುವುದಕ್ಕಾಗದು. ವೀರಕ್ಷತ್ರಿಯರು ಧರ್ಮಕ್ಕಾಗಿ ಹೋರಾಡುವಾಗ ಇದಿರಿರುವವನನ್ನು ನೋಡುವುದಲ್ಲ, ಅವನು ಬಳಸಿರುವ ಅಧರ್ಮವನ್ನು! ಎಂಬ ಜ್ಞಾನಮಾರ್ಗವನ್ನು ಆಗ ಣಿಂದಲೂ ಅವನು ಅರ್ಜುನನಿಗೆ ಬೋಧಿಸಿದನು.

3. ಈ ಬೋಧೆಗೆ ಭಗವದ್ಗೀತೆ ಎಂದು ಹೆಸರು ಬಂದಿದೆ. ಅದ ರಂತಹ ಮತ್ತೊಂದು ಜೀವನಧರ್ಮಗ್ರಂಥವು ಅಪೂರ್ವ. ವೇದ-ಶಾಸ್ತ್ರ ಪುರಾಣ-ಇತಿಹಾಸ ಮೊದಲಾದುವೆಲ್ಲವುಗಳ ಸಾರವೇ ಭಗವದ್ಗೀತೆಯು.

4. ಗೀತಾಬೋಧೆಯಿಷ್ಟೆ. ಈ ದೇಹವು ಏನೂ ಅಲ್ಲ; ಇದು ಇಂದೋ ನಾಳಿಗೋ ಮಾಯವಾಗುವಂತಹದು. ಕಣ್ಣಿಗೆ ಕಾಣುತ್ತಿರು ವುದೆಲ್ಲವೂ ನಿತ್ಯವಾದುದಲ್ಲ. ಶರೀರವು ಉಳಿಯುವುದರಿಂದ ಅಥವಾ ಅಳಿಯುವುದರಿಂದ, ಆಗುವುದೂ ಹೋಗುವುದೂ ಏನೂ ಇಲ್ಲ. ಆತ್ಮವೇ ಪ್ರಾಮುಖ್ಯವಾದುದು. ಅದೇ ಸತ್ಯವಾದುದು. ಅದೇ ನಿತ್ಯವಾದುದು; ಅದನ್ನು ಯಾರೂ ವಿನಾಶಗೊಳಿಸಲಾರರು. ಆತ್ಮದ ಪರಿಚಯವು ಯಾರಿಗೆ ಇದೆಯೊ, ಯಾರು ಸತ್ಯವಾದುದನ್ನು ತಿಳಿದಿರುವರೊ, ಅವರು, ದೇಹವು ಮಡಿಯುವುದೆಂದಾಗಲಿ, ದೇಹವನ್ನು ನಾಶಗೊಳಿಸಬೇಕಾಗು ತ್ತದೆಂದಾಗಲಿ ಎಂದಿಗೂ ಕಳವಳಿಸರು. ಏಕೆಂದರೆ ಆತ್ಮವನ್ನು ಲಭಿಸಿಕೊಳ್ಳು ವವರಿಗೆ ದೇಹವು ಅನಾವಶ್ಯಕವೆಂದೇ ತೋರುವುದು. ಆತ್ಮದ ಮುಖಾಂತ ರವಾಗಿ ಪರಮಾತ್ಮನನ್ನೂ ಲಭಿಸಿಕೊಳ್ಳಲಾಗುವುದು. ಇದಕ್ಕಿಂತ ಹೆಚ್ಚಿನ ಲಾಭವು ಮನುಷ್ಯರಿಗೆ ಇನ್ನಾವುದು?

5. ಕೃಷ್ಣನೇ ಈ ರೀತಿ ಜ್ಞಾನವನ್ನು ತಿಳುಹಿದನೆಂದ ಬಳಿಕ, ಅರ್ಜುನನಲ್ಲಿ ಇನ್ನಾವ ಸಂಶಯುವೂ ಉಳಿಯುಲಿಲ್ಲ. ಅವನು ತನ್ನ ದೇಹವನ್ನೆ ತಾನು ಮರೆದನು 'ಬಂಧುಬಾಂಧವರು' ಎಂಬುದನ್ನು ಮರೆದನು. ಮೋಹಮಮತೆಗಳೆಂಬವು ಅವನನ್ನು ತೊಲಗಿದುವು. ಸಂಸಾರವು ವ್ಯರ್ಥವೆಂದನು. ಅವನು ಪ್ರತಿಯೊಂದೂ ಕಡೆ ಪರಮಾತ್ಮನನ್ನೆ ಕಂಡನು. ವಿಶ್ವದಲ್ಲಿ ಎಲ್ಲೆಲ್ಲಿಯೂ, ಪ್ರತಿ ಅಣುವಿನಲ್ಲಿಯೂ ಅವನೇ. ಅವನ ಮನಸ್ಸು ಅಲ್ಲಿಗೆ ಶಾಂತವಾಯಿತು. ಅವನ ಬುದ್ಧಿಯು ಸ್ಥಿರವಾಯಿತು. ಇನ್ನು, ಜಗತ್ತಿನಲ್ಲಿ ಧರ್ಮಸ್ಥಾಪನೆಯನ್ನು ಮಾಡಲು ಯುದ್ಧವಾಗಬೇಕಾದರೆ ಹಾಗೆಯೆ ಆಗಲೆಂದು, ಅವನು ತನ್ನ ಧನುಸ್ಸನ್ನು ಕೈಯಲ್ಲಿ ಧರಿಸಿದನು. ಕ್ಷತ್ರಿಯನಿಗೆ ಯುದ್ಧಮಾಡುವುದೇ ಧರ್ಮವು. ಧರ್ಮಯುದ್ಧದಲ್ಲಿ ಮಡಿದರೆ ವೀರಸ್ವರ್ಗವು ದೊರೆಯುವುದು. ಧರ್ಮಯುದ್ಧವನ್ನು ಮಾಡದೆ ಹಿಂಜರಿಯುವವನೆ ಪಾಪಿಯು. ಅವನಿಗೆ ನರಕವೇ ಯೋಗ್ಯಸ್ಥಾನವು.

6. ಬಳಿಕ ಕುರುಕ್ಷೇತ್ರದಲ್ಲಿ ಮಹಾಯುದ್ಧವಾಯಿತು. ಅದು ಪ್ರಲಯದ ಹಾಗೆ, ಎಲ್ಲವನ್ನು ನಾಶಗೊಳಿಸುವ ಯುದ್ಧವು. ಕೃಷ್ಣನು ಪಾಂಡವಪಕ್ಷದಲ್ಲಿದ್ದನು. ಅವನು ಯುದ್ಧ ಮಾಡುವುದಿಲ್ಲ; ಆಲೋಚನೆ ಕೊಡುವನು. ಅರ್ಜುನನಂತಹ ಅಪ್ರತಿಮ ವೀರನಿಗೆ ಅವನು ಸಾರಥಿಯು. ಅಂತಿಂತಹರ ಸಾರಥಿಯಾಗಿ ಕೃಷ್ಣನು ಬರುವನೆ? ಅರ್ಜುನನು ಅವನ ಗೆಳೆಯನು; ನೆಂಟನು; ಅರ್ಜುನನೇ ಅವನ ಉದ್ದೇಶಕ್ಕೆ ಒದಗಿದ ಕರಣವು. ಅವನ ರಥದಲ್ಲಿ ಕೃಷ್ಣನು ಬಂಡಿಯಾಳಾಗಿ ಮೆರೆಯುವನು! ಸಾರಥಿಯಾಗಿರುವುದು ಏನು ಸಾಮಾನ್ಯ ಕೆಲಸವೆ? ಅದೇ ತೀರ ಸೂಕ್ಷ್ಮ ಬುದ್ಧಿಯ ಕೆಲಸವು; ತುಂಬಾ ಸಾಹಸದ ಉದ್ಯೋಗ. ಕೃಷ್ಣನು ಅಸ್ತ್ರವೊಂದನ್ನೂ ಧರಿಸಲಿಲ್ಲ. ಅವನು ಯುದ್ಧಕ್ಕೆ ಇಳಿದಿದ್ದರೆ ಬೇರೆ ಮಾತಿದ್ದಿತೆ? ಅವನು ಅಸ್ತ್ರಧಾರಣೆ ಮಾಡುವುದಿಲ್ಲೆಂದು ಅದುಕಾರಣ ಪ್ರತಿಜ್ಞೆ ಮಾಡಿದ್ದನಷ್ಟೆ.

7. ಮಹಾಯುದ್ಧವು! ಭೀಷ್ಮನೊಬ್ಬನೇ ಪಾಂಡವರೊಡನೆ ಹತ್ತು ದಿನಗಳ ತನಕ ಹೋರಾಡಿದನು. ಅವನಿಗೆ ಇದಿರಾಗಿ ನಿಲ್ಲುವ ವೀರನಾವನು? ಪಾಂಡವರು ಗಲಿಬಿಲಿ ಹೊಂದಿದರು. ಆಗ ಒಂದು ಉಪಾಯವನ್ನು ಹೂಡಿ, ಅವನನ್ನು ಸೋಲಿಸಬೇಕಾಯಿತು. ಮಹಾವೀರನಾದವನು

ಮತ್ತೊಬ್ಬ ವೀರನೊಡನೆಯಲ್ಲದೆ ಅಂತಿಂತಹರ ಕೂಡೆ ಕಾದುವನೆ? ಭೀಷ್ಮನ ಯುದ್ಧದ ಹತ್ತನೆಯ ದಿನ ಶಿಖಂಡಿಯು ಅರ್ಜುನನಿಗೆ ಸಾರಥಿ ಯಾದನು. ಶಿಖಂಡಿ ಕಾಪುರುಷನಲ್ಲವೆ! ಭೀಷ್ಮನು ಅವನನ್ನು ನಪುಂಸಕ ವರ್ಗಕ್ಕೆ ಸೇರಿಸಿದನು. ನಪುಂಸಕರು ಸ್ತ್ರೀಯರಿಗೂ ಅಧಮರೆಂದು ಯೋದ್ಧರ ಎಣಿಕೆ. ಭೀಷ್ಮನು ಅದುಕಾರಣ ತನ್ನ ಬಿಲ್ಲನ್ನು ಕೆಳಗಿಟ್ಟನು. ಆಗ ಅರ್ಜುನನ ಬಾಣಗಳಿಗೆ ಭೀಷ್ಮನು ಮಡಿದನು. ಭೀಷ್ಮನು ತನಗೆ ಪಿತಾಮಹನೆಂದು ಇನ್ನು ಅರ್ಜುನನಲ್ಲಿ ಮಮತೆ ಇದೆಯೆ?

8. ಭೀಷ್ಮನ ತರುವಾಯ ದ್ರೋಣನು ಸೇನಾಪತಿಯಾದನು. ಅವನೂ ಭಯಂಕರ ಯೋದ್ಧನಲ್ಲವೆ? ಪ್ರಾಣಪೂರ್ಣ ಪೇಚಾಟದಿಂದ ಅವನು ಯುದ್ಧಮಾಡುತ್ತಿರುವನು. ಅವನನ್ನು ಸೋಲಿಸಲಾಗುವುದಿಲ್ಲ. ಬಾಣಗಳನ್ನು ಪ್ರಯೋಗಿಸಿ ಅವನನ್ನು ತಡೆಯಲಾಗುವುದಿಲ್ಲ. ಆದುದರಿಂದ, ಶೋಕವಾರ್ತೆಯನ್ನು ಪ್ರಯೋಗಿಸುವುದು ಉತ್ತಮವೆಂದು ಕೃಷ್ಣನ ಸೂಚನೆ. ಅವನ ಮಗನು ಮಡಿದನೆಂದು ಒಂದು ವಾರ್ತೆಯು ಪ್ರಕಟಗೊಂಡಿತು! ದ್ರೋಣನು ಮುದುಕನು. ಮಗನು ಮಡಿದನೆಂದು ಕೇಳುತ್ತಲೆ, ಆ ಮಾತು ಅವನ ಬಗಲಲ್ಲೆ ನಾಟಿತು. ಶೋಕದಿಂದ ಅವನು ಧನುಸ್ಸನ್ನು ದೂರಕ್ಕೆ ಒಗೆದನು. ಆಗಲೆ ಯುಧಿಷ್ಠಿರನು "ಅಶ್ವತ್ಥಾಮನುಗಜವು." ಆ ಕೊನೆಯ ಮಾತನ್ನು ಕೇಳುವ ಮೊದಲೇ ಆಚಾರ್ಯರು ಮುಕ್ಕಾಲಂಶ ಮಡಿದಿದ್ದರು. ದೃಷ್ಟದ್ಯುಮ್ನನು ದ್ರೋಣನ ತಲೆಯನ್ನೆ ಕತ್ತರಿಸಿದನು. ಇದು ಮಾತ್ರ ನೀಚ ಉಪಾಯವೆಂದು ಆಕ್ಷೇಪ ಹೇಳಬಹುದು. ಆದರೆ, ಶೋಕವನ್ನು ಯಾವನು ಸಹಿಸಿಕೊಳ್ಳಲಾರನೊ ಅವನು ಎಂತಹ ವೀರನು? ಅವನು ದ್ರೋಣನಾದರೇನು, ಇನ್ನಾರಾದರೇನು? ಅವನು ಎಂತಹ ಧರ್ಮವನ್ನು ಕಾಪಾಡುವನು? ಅದರಲ್ಲೂ ಯುದ್ಧದ ಮಧ್ಯದಲ್ಲಿ ಅಸ್ತ್ರತ್ಯಾಗವೆ? ಪುತ್ರನೇ ಮಡಿದರೂ ಅವನೇಕೆ ತನ್ನ ಕರ್ತವ್ಯವನ್ನು ಪೂರೈಸಲಿಲ್ಲ? ಮೋಹವಶನಾದವನಿಗೆ ಪರಾಜಯವು ನಿಶ್ಚಿತವಲ್ಲವೆ? ವೀರರ ಪ್ರಪಂಚದಲ್ಲಿ ಶೋಕಮೋಹಗಳಿಗೆ ಆಶ್ರಯವಿಲ್ಲ.

9. ಅವನ ನಂತರ, ಕರ್ಣನು ನಾಯಕನು. ಅವನೇನು ಕಡಿಮೆ ವೀರನೆ? ಯುದ್ಧಮಾಡಲು ತಿಳಿದರೆ ಮಾತ್ರ ಸಾಕಾಗುವುದೆ? ಯುದ್ಧವೆಲ್ಲಿಯಾಗುವುದೊ ಅಂತಹ ಸ್ಥಾನದ ಮೇಲೆಯೂ ಜಯ ಅಪಜಯಗಳು

ಆಧರಿಸಿ ಇರುವುವಲ್ಲವೆ? ನಿಜವಾಗಿಯೂ ವೀರನೆನಿಸುವವನು ಈ ವಿಷಯ ವನ್ನೂ ಚೆನ್ನಾಗಿ ತಿಳಿದವನಾಗಿರಬೇಕು. ಕೃಷ್ಣನು ಅರ್ಜುನನ ಸಾರಥಿ; ಅರ್ಜುನನ ರಥವನ್ನು ಎಂತಹ ಸ್ಥಳಕ್ಕೆ ನಡೆಸಿದನೆಂದರೆ, ಅವನಿಗೆ ಇದಿರಾಗಿ ಬರುತ್ತಾ, ಕರ್ಣನ ರಥಚಕ್ರಗಳು ಮಣ್ಣಲ್ಲಿ ಹೂತುಹೋದುವು. ತಿರುಗಿ ತಿರುಗಿ ಕರ್ಣನು ಯುದ್ಧಮಾಡಲಾರದಾದನು. ಅದರಿಂದಲೆ ಅವನು ಪರಾಜಯಹೊಂದಿದನು; ಮಡಿದನು.

10. ಕೊನೆಗೆ, ದುರ್ಯೋಧನನೆ ಯುದ್ಧರಂಗಕ್ಕೆ ಇಳಿದನು. ಕುರು ಕ್ಷೇತ್ರದಲ್ಲಾದ ಯುದ್ಧದಲ್ಲಂತೂ ಅವನಿಗೆ ಜಯವು ಸಿಗಲಿಲ್ಲ. ಅದಕ್ಕಾಗಿ ಅವನು ಅಲ್ಲಿಂದ ಪಲಾಯನಮಾಡಿ, ಒಂದು ಸರೋವರದ ಕಡೆಗೆ ತೆರಳಿದನು. ಅಲ್ಲಿಂದ ಭೀಮನೆ ಅವನನ್ನು ಹೊರಡಿಸಿ ಯುದ್ಧದಲ್ಲಿ ಕೊಂದಿಕ್ಕಿದನು. ಕೃಷ್ಣನ ಸನ್ನೆಯಂತೆ, ಭೀಮನು ಅವನ ತೊಡೆಗಳನ್ನೆ ಗದೆಯಿಂದ ಬಡೆದು ಮುರಿದನು. ದುರ್ಯೋಧನನ ಮರಣವೆ ಯುದ್ಧಕ್ಕೆ ಕೊನೆ. ಕುರುಕ್ಷೇತ್ರದಲ್ಲಿ ಹೀಗೆ ಕೌರವನಾಶವಾಯಿತು.

11. ಬಂಡಿಯಾಳಾಗಿ, ಯುದ್ಧಮಾಡದೆ, ಅಸ್ತ್ರಧರಿಸದೆ ಕೌರವ ಪಾಂಡವರ ಯುದ್ಧದಲ್ಲಿ ಸೇರಿದ್ದ ಕೃಷ್ಣನಿಗೆ ವಿಶೇಷತ್ವವೆಲ್ಲಿದೆ? ಅವನು ಎಷ್ಟೋ ಬಾರಿ ಸಂಧಾನವಾಗಲೆಬೇಕೆಂದು ಪೇಚಾಡಿದನಲ್ಲವೆ? ಅದೇತಕ್ಕೆ ಸಫಲವಾಗಲಿಲ್ಲ? ಅಧರ್ಮವು ಬಲವಾಗಿ ಬೆಳೆದಿದ್ದಿತು; ಅವನ ಧರ್ಮ ವಾಕ್ಯಗಳನ್ನು ಕೇಳುವವರಾರು? ಧರ್ಮರಾಜ್ಯವನ್ನು ಸ್ಥಾಪಿಸಬೇಕೆಂದು ಅವನ ಇಚ್ಛೆ. ಲಕ್ಷ ಲಕ್ಷ ಜನರು ಮಡಿಯಬೇಕಾಗಿದ್ದರೆ, ಮಡಿಯಲಿ! ಸುಜನನೆನಿಸುವ ಒಬ್ಬನೇ ಇಡೀ ಜಗತ್ತಿನಲ್ಲಿ ಇರುವನಾದರೂ ಪೃಥ್ವಿಯು ಪವಿತ್ರವೆನಿಸುವುದು. ಅದೇ ಕೃಷ್ಣನ ಇಚ್ಛೆ. ಈ ಯುದ್ಧದಿಂದ ತಾನೆ ಅದು ಪೂರ್ಣತೆಯನ್ನು ಹೊಂದಿತು. ಅಧರ್ಮವು ಬಿದ್ದುಹೋಯಿತು; ಧರ್ಮವು ಎದ್ದು ಮೂಡಿತು. 'ಧರ್ಮವು ಎಲ್ಲಿಯೊ ಅಲ್ಲಿಯೆ ಕೃಷ್ಣನು; ಕೃಷ್ಣನು ಎಲ್ಲಿಯೊ ಅಲ್ಲಿಯೆ ಜಯವು' ಎಂದು ಭೀಷ್ಮನು ಎಂದಿದ್ದನು. ಕುರುಕ್ಷೇತ್ರದಲ್ಲಿ ಕೃಷ್ಣನು ಏನೇನನ್ನೆಲ್ಲ ಮಾಡಿದನೊ ಅದು ಧರ್ಮವನ್ನು ಕಾಪಾಡುವುದಕ್ಕಾಗಿಯೆ. ಮೇಲ್ಮೇಲೆ ನೋಡಿದರೆ, ಕೃಷ್ಣನು ಮಾಡಿದುದ ರಲ್ಲಿ ಕೆಲವು ಅನ್ಯಾಯಗಳಂತೆ ತೋರಬಹುದು. ನಿಜವಾಗಿ, ಹಾಗಿಲ್ಲ. 'ಯಾವುದನ್ನು ಮಾಡಬೇಕೊ, ಅದನ್ನು ಮಾಡಲೇಬೇಕಲ್ಲವೆ? ಯಾವ

ನಿಂದ ಉದ್ದೇಶವನ್ನು ಸಾಧಿಸಲಾಗುವುದಿಲ್ಲವೊ ಅವನು ಮನುಷ್ಯನೆ?' ಇದೇ ಅವನ ಸಾಧನೆಯ ನಿಯಮ. ಅವನು ತನ್ನ ಸದುದ್ದೇಶವನ್ನು ಸಫಲಗೊಳಿಸಿರುವನು. ಮನುಷ್ಯರೆನಿಸುವವರು ಮಾಡತಕ್ಕದಾದರೂ ಅಷ್ಟೆ.

12. ಇಂತಹದೊಂದು ಮಹಾಯುದ್ಧವಾದುದು ಏತಕ್ಕಾಗಿ?— ಇಷ್ಟು ವಿಶಾಲವಾದ ದೇಶವನ್ನು ಒಬ್ಬನೇ ಮಹಾರಾಜನ ಕೈಕೆಳಗೆ ಇರಿಸುವುದಕ್ಕಾಗಿ. ಹಾಗೆ ಮಾಡದಿದ್ದರೆ, ತಮ್ಮ ತಮ್ಮೊಳಗೆ ಛಪ್ಪನ್ನದೇಶದವರೆಲ್ಲರೂ ಬಡೆದಾಡಿ, ರಾಜ್ಯದಲ್ಲೆಲ್ಲ ಅಶಾಂತಿಯನ್ನು ಉಂಟುಮಾಡಿ, ಪ್ರತಿಯೊಂದೂ ಕಡೆ ಅಸಮಾಧಾನವಿರುವಂತೆ ಆಗುವುದಲ್ಲವೆ? ಎಲ್ಲಿ ಯಾವಾಗಲೂ ಬಡೆದಾಟವೂ ಕಲಹವೂ ಇದ್ದೇ ಇರುವುವೊ, ಅಂತಹ ದೇಶವು ಒಳ್ಳೇ ಸ್ಥಿತಿಯಲ್ಲಿರುವುದು ಎಂದೂ ಸಾಧ್ಯವೇ? ಅದೂ ಅಲ್ಲದೆ, ಒಬ್ಬನೆ ಧಾರ್ಮಿಕನಾದ ರಾಜನು ಇಡೀ ಭರತಭೂಮಿಗೆ ರಾಜನಾಗುವಂತಾಯಿತಲ್ಲವೆ? ಅದೇ ಕೃಷ್ಣನ ಇಚ್ಛೆಯಾಗಿದ್ದಿತು. ಹೀಗೆ, ಧರ್ಮಾತ್ಮನಾದ ಯುಧಿಷ್ಠಿರನು ಚಕ್ರವರ್ತಿ—ಸಮ್ರಾಜನಾದನು. ಭಾರತವು ಏಕಚ್ಛತ್ರ ಧರ್ಮರಾಜ್ಯವೆನಿಸಿತು.

---

## ೧೧. ಲೀಲಾತ್ಯಾಗ.

1. ಯುಧಿಷ್ಠಿರನು ಈಗ ಮಹಾರಾಜ-ಚಕ್ರವರ್ತಿ. ಇಡೀ ಭರತಭೂಮಿಗೆ ಅವನೊಬ್ಬನೆ ಮೇಲರಸು. ಇದೇ ಕೃಷ್ಣನಿಗೆ ಮಹಾ ಸುಖ. ದೇಶಕ್ಕೆ ಅರಸು ಒಬ್ಬನೆ ಎಂದ ಬಳಿಕ ಇನ್ನೆಲ್ಲಿ ನಾನಾ ರಾಜರ ತಂಟೆಗಳು. ಒಳಕಲಹಗಳು, ಕಚ್ಚಾಟಗಳು? ಕೆಟ್ಟರೀತಿ, ಕೆಟ್ಟನಡೆ ಇರಲಾರವು. ಇಂತಹ ರಾಜ್ಯಕ್ಕೆ ಕೃಷ್ಣನೆ ಮಂತ್ರಿ. ಇನ್ನೆಲ್ಲಿ ಅಧರ್ಮವು? ಯುಧಿಷ್ಠಿರನ ರಾಜ್ಯವು ಧರ್ಮರಾಜ್ಯವು. ಇಂತಹ ಶಾಂತಿಯಲ್ಲಿ ಯುಧಿಷ್ಠಿರನು ರಾಜ್ಯವಾಳಿದ ಕಾಲವು ಮೂವತ್ತಾರು ವರುಷ.

2. ರಾಜ್ಯದಲ್ಲಿ ಅಧರ್ಮವಿಲ್ಲ. ಆದರೆ ಬಹುಕಾಲವೂ ಹಾಗೆಯೆ ಇರುವುದೆ? ಕೃಷ್ಣನ ವಂಶದಲ್ಲಿಯೆ ಅಧರ್ಮವು ತಲೆದೋರಿತು.

ಅದನ್ನಾದರೂ ಕೃಷ್ಣನು ಸಹಿಸಲಾಪನೆ? ಧರ್ಮವೇ ನೆಲೆಗೊಳ್ಳಬೇಕೆಂದು ಬಗೆಯುವವರು, ಅವರ ವಂಶವೇ ಅಳಿದಾದರೂ ಧರ್ಮವೊಂದು ಉಳಿದರೆ ಸಾಕಾಗುವುದೆಂದು ನಂಬುವರಲ್ಲವೆ? ಕೃಷ್ಣನೂ ಅದನ್ನೆ ನಂಬಿದನು.

3. ಅವನ ವಂಶವು ಯದುವಂಶ. ಕೃಷ್ಣನ ಕುಟುಂಬವೂ ಬಂಧುಗಳೂ ಬಹುಮಂದಿ ಇದ್ದರು. ಅವರು ಹೀನ ನಡತೆಯುವರಾಗಿದ್ದರು. ಅವರೆಲ್ಲರೂ ಮದ್ಯ ಕುಡಿಯುತಿದ್ದರು. ಅವರ ಅನಾಚಾರಕ್ಕೆ ಎಣೆಯಿರ ಲಿಲ್ಲ. ಯಾವುದು ಉತ್ತಮ, ಯಾವುದು ಅಧಮ ಎಂಬುದೂ ಅವರಿಗೆ ತಿಳಿಯದು. ಇಂತಹ ಸ್ಥಿತಿಯು ಕೊನೆಗಂಡರೆ ಒಳ್ಳೇದೆಂದು ಕೃಷ್ಣನು ತಿಳಿದನು. ಧರ್ಮಮಯವಾದ ಜಗತ್ತಿನಲ್ಲಿ ಈ ದುರ್ಬೀಜವನ್ನು ಬಿಟ್ಟು, ಮುಂದೆ ವಿಷಫಲವನ್ನು ಉಣ್ಣಲು ಇಡುವುದೇ?

4. ಯದುವಂಶದವರು ಮದ್ಯಪಾಯಿಗಳು. ಅವರು ಮದ್ಯ ಕುಡಿದು ಅಮಲೇರಿ ನಾನಾ ಜಗಳಗಳನ್ನು ಹೂಡಿಕೊಂಡು, ಹೊಡೆದು ಬಡೆದು ಮನಸ್ಸಿಗೆ ಬಂದಂತೆ ನಡೆಯುವರು. ಅವರ ಪಾಪಕರ್ಮಗಳ ಭಾರದಿಂದ ಪ್ರಥ್ವಿಯು ತಳಮಳಿಸುತ್ತಿದೆ. ಬಲರಾಮನೂ, ಕೃಷ್ಣನೂ 'ಯಾರು ಮದ್ಯವನ್ನು ತಯಾರಿಸುವರೊ, ಅವರನ್ನು ಶೂಲಕ್ಕೆ ಹಾಕು ವೆವು!' ಎಂದು ರಾಜ್ಯದಲ್ಲಿ ಸಾರಿದರು. ಆ ಭೀತಿಯನ್ನು ತೋರಿಸಿದರೂ ಅವರ ಪಾಪಕರ್ಮಗಳು ಕಡಿಮೆಯಾಗಲಿಲ್ಲ. ಎಂದಿನಂತೆ ಹೆಂಡವು ಹರಿಯುತಿದ್ದಿತು; ಅಮಲು ಏರುತಿದ್ದಿತು,— ಈ ರಾಜಾಜ್ಞೆಯ ನಂತರ ಮತ್ತೂ ಹೆಚ್ಚಾಯಿತು! ಇದೊಂದು ದೊಡ್ಡ ಅಪಾಯವೆಂದು ಕೃಷ್ಣನು ತಿಳಿದನು. 'ಯಾದವರೆ! ನೀವೆಲ್ಲರೂ ಪ್ರಭಾಸಕ್ಕೆ ತೆರಳಿರಿ. ಅಲ್ಲಿ ಮನಸ್ಸಿಗೆ ಬಂದಂತೆ ಮಾಡಿರಿ! ಇಲ್ಲಿ ನಮ್ಮ ಅಪ್ಪಣೆ ಮೀರಕೂಡದು. ನಿಮಗೆ ಹೆಂಡ ಕುಡಿಯದೆ ಉಪಾಯವಿಲ್ಲವಷ್ಟೆ!' ಎಂದು ಕೃಷ್ಣನು ಅವರನ್ನು ಪ್ರೇರೇಪಿಸಿದನು.

5. ಯಾದವರೆಲ್ಲರೂ ಪ್ರಭಾಸಕ್ಕೆ ತೆರಳಿದರು. ಅಲ್ಲಿ ಅವರನ್ನು ತಡೆಯುವವರೇ ಇಲ್ಲ. ಯಾರಿಗೂ ಅವರು ಭಯಪಟ್ಟಿರಬೇಕಾಗಿಲ್ಲ. ಮೂಗಿನ ಸೊಳ್ಳೆತನಕ ಮದ್ಯವನ್ನು ಕುಡಿದರು. ಉಸಿರುಕಟ್ಟಿ ಕುಣಿದರು. ಅಯ್ಯೊ, ಆ ವಿಕಟವಾದ ನರ್ತನವೇ, ವಿಕಾರವಾದ ಗಾಯನವೇ, ಕರ್ಕಶವಾದ ತಂಬಟೆಗಳೆ! ಎಷ್ಟು ತೆರದಲ್ಲಿ ಪಾಪಾಚರಣೆ ಸಾಧ್ಯವೊ

ಅಷ್ಟನ್ನು ಕೈಕೊಂಡರು. ಮೂರ್ಖರು ಹೆಂಡಕುಡಿದರೆ ವಿವೇಕವು ಎಲ್ಲಿ ಇರಬೇಕು? ಬ್ರಾಹ್ಮಣರಿಗೆ ಇಟ್ಟ ನೈವೇದ್ಯಕ್ಕೆ ಮದ್ಯವನ್ನು ಕೂಡಿಸಿ, ಅವರು ವಾನರರಿಗೆ ಹಂಚಿ ಚೆಲ್ಲಿದರು. ತಮ್ಮೊಳಗೆ ಸಿಡುಕು, ದುಡುಕು ಪ್ರಾರಂಭಿಸಿದರು. ಕ್ರಮೇಣ, ಇದು ಭಯಂಕರವಾದ ಯುದ್ಧವಾಗಿ ಪರಿಣಮಿಸಿತು. ಇದರಿಂದ ವೃಷ್ಣಿ, ಅಂಧಕ, ಭೋಜವಂಶಗಳ ಯಾದವರು ಮಡಿದುಬಿದ್ದರು.

6. ಸಾತ್ಯಕಿ-ಕೃತವರ್ಮರೂ ಅಲ್ಲೇ ಇದ್ದರು. ಅವರೊಳಗೂ ದ್ವಂದ್ವ ನಡೆಯಿತು. ಸಾತ್ಯಕಿಯು,—“ಅಹಹ! ನೀನೂ ಒಬ್ಬ ವೀರನಂತೆ! ನಾನು ಬಲ್ಲವನೇ ಸರಿ. ಕಳ್ಳನಂತೆ ಮನೆನುಗ್ಗಿ, ನಿದ್ದೆಹೋದವನ ಕೊರಳು ಕಡಿದ ಮಹಾವೀರನು!' ಎಂದು ಕೃತವರ್ಮನನ್ನು ಜರೆದನು.

7. ಕೃತವರ್ಮನು, ‘ಅಪ್ಪಾ! ವೀರನೆಂದರೆ ನೀನೆ ಸರಿ. ಭೂರಿಶ್ರವನ ಕೈಗಳು ತುಂಡಾಗಿರಲು, ನೀನು ಆವನ ಕೊರಳನ್ನು ಕತ್ತರಿಸಿದೆಯಲ್ಲವೆ? ವೀರನು ನೀನೆ ಮಾತ್ರವೆ? ನಿನ್ನಂತಹ ಮಗನನ್ನು ಪಡೆದ ಆ ತಂದೆಯೂ ಎಂತಹ ವೀರನಿರಬೇಕು?' ಎಂದು ಹಿಯ್ಯಾಳಿಸಿದನು.

8. ಮಾತು ಮುಗಿದು, ಗುದ್ದು ಬಿಗಿಯಿತು. ಸಾತ್ಯಕಿಯು ಕೃತವರ್ಮನ ತಲೆ ಕಡಿದನು. ಇನ್ನು ಹೇಳಬೇಕೆ? ಯುದ್ಧವೇ ಯುದ್ಧ. ಭೋಜ-ಅಂಧಕ ವಂಶದವರಲ್ಲಿ ಉಳಿದವರು ಸಾತ್ಯಕಿಯ ಮೇಲೆ ಎರಗಿದರು. ಸಾತ್ಯಕಿಯ ಪಕ್ಷವಾಗಿ ಕೃಷ್ಣನ ಪುತ್ರರಿದ್ದರು. ಕೃಷ್ಣನೂ ಅಲ್ಲಿದ್ದನು; ಅವನ ಇದಿರಿನಲ್ಲೆ ಈ ಹೆಣಗಾಟಕ್ಕೆ ಪ್ರಾರಂಭವಾಯಿತು. ಅವನು ಹಾಂ-ಹೂಂ ಎನ್ನಲಿಲ್ಲ; ಯಾರನ್ನೂ ತಡೆಯಲಿಲ್ಲ. ಪಾಪಿಗಳು ಸತ್ತರೇ ಲೋಕಕ್ಕೆ ಮಂಗಲವು. ಇದೇ ಭೂಭಾರಹರಣ. ಹತ್ತು ಅಪಮೃತ್ಯುಗಳು ಸತ್ತರೆ ಅದೇ ವಿವಾಹೋತ್ಸವದಷ್ಟು ಆನಂದಕರವು.

9. ಕೃಷ್ಣಬಲರಾಮರ ಕಣ್ಣಿದಿರಿನಲ್ಲಿಯೆ ಕುರುವಂಶವು ಧ್ವಂಸವಾಯಿತು. ಮದ್ಯಪಾನವೂ ಪಾಪಕೃತ್ಯಗಳೂ ಇಂತಹ ಮಹಾವೀರರ ವಂಶವನ್ನೆ ಭೂತಳದಿಂದ ಅಳಸಿದುವು. ಕೃಷ್ಣಬಲರಾಮರಿಬ್ಬರೇ ಮಾತ್ರ ಉಳಿದರು. ಕುಲಧ್ವಂಸವಾಯಿತೆಂದು ಬಲರಾಮನು ಕಂಗೆಟ್ಟನು. ಶೋಕದಿಂದ ಅವನು ಬೆಂದನು. ಎಲ್ಲರಿಂದಲೂ ಶೋಕವನ್ನು ಸಹಿಸಲಾಗುವುದೆ? ಅವನು ವನಕ್ಕೆ ತೆರಳಿದನು. ಯಾವಾಗ ತೆರಳಿದನೆಂದು

ಕೃಷ್ಣನೂ ತಿಳಿಯಲಿಲ್ಲ. ಕೃಷ್ಣನೂ ಆಗ ಧ್ಯಾನದಲ್ಲಿದ್ದನು. ಅವನ ಧ್ಯಾನವು ಶೋಕದ ಅಥವಾ ಪರಿತಾಪದ ಧ್ಯಾನವಾಗಿರಲಿಲ್ಲ.

10. ಕೃಷ್ಣನು ಅಣ್ಣನನ್ನು ಹುಡುಕಿದನು. ಅವನು ಕಾಣಸಿಗಲಿಲ್ಲ. ನಾನಾ ವನಗಳಲ್ಲಿ ಸಂಚರಿಸಿ ಅವನನ್ನು ಕಂಡನು. ಬಲರಾಮನು ಒಂದು ಹೆಮ್ಮರದ ಅಡಿಯಲ್ಲಿ ಧ್ಯಾನಮಗ್ನನಾಗಿ, ದುಃಖಿತನಾಗಿ, ಚಿಂತಾಪರನಾಗಿ ಕುಳಿತಿದ್ದನು. ಇನ್ನು ಅಣ್ಣನು ಮರಳುವುದಿಲ್ಲವೆಂದೂ ಅಲ್ಲೇ ಅವನ ಅವಸಾನವಾಗುವುದೆಂದೂ ಕೃಷ್ಣನು ತಿಳಿದುಕೊಂಡನು. ಹಸ್ತಿನಾವತಿಯಿಂದ ಅರ್ಜುನನು ದ್ವಾರಕೆಗೆ ಬರಲೆಂದು ಕೃಷ್ಣನು ಜನ ಕಳುಹಿದನು. 'ಅಣ್ಣಾ, ನಾನು ಬರುವ ತನಕ ಇಲ್ಲೆ ಕಾದುಕೊಂಡಿರಿ!' ಎಂದು ಕೃಷ್ಣನು ದ್ವಾರಕೆಗೆ ತೆರಳಿದನು. ಅಲ್ಲಿ ತಂದೆಯಾದ ವಸುದೇವನ ಕೈಗೆ ಎಲ್ಲ ಸ್ತ್ರೀಸಮೂಹವನ್ನು ಕಾಪಾಡುವ ಭಾರವನ್ನು ಒಪ್ಪಿಸಿದನು. "ಅಣ್ಣನು ನನಗಾಗಿ ವನದಲ್ಲಿ ಕಾದುಕೊಂಡಿರುವನು. ಯೋಗಮಗ್ನನಾದ ಅವನು ಎಂದಿಗೆ ಮರಳುವನೊ ತಿಳಿಯದು. ಅವನು ಬಾರದಿರಲೂ ಬಹುದು. ಕೌರವಪಾಂಡವ ಯುದ್ಧದಲ್ಲಿ ಎಷ್ಟೋ ಮಂದಿ ಮಡಿದುದನ್ನು ನೋಡಿದೆನು; ನನ್ನ ಕಣ್ಣುಗಳಿಂದಲೆ ಯದುವಂಶವು ಧ್ವಂಸವಾದುದನ್ನೂ ಕಂಡೆನು. ಈ ದ್ವಾರಕೆಯಲ್ಲಿ ಇನ್ನು ಇರಲು ನನಗೆ ಮನವೊಪ್ಪದು. ನಾನೂ ವನಕ್ಕೆ ತೆರಳಿ ಕಠಿಣವಾದ ತಪಸ್ಸನ್ನು ಮಾಡುವೆನು," ಎಂದು ತಂದೆಯ ಕಾಲಿಗೆರಗಿ, ಅವನ ಚರಣಧೂಳನ್ನು ಹಣೆಗೆ ಹಚ್ಚಿಕೊಂಡು ಮನೆಯಿಂದ ಹೊರಟನು. ಅಲ್ಲಿದ್ದವರೆಲ್ಲರೂ ಗೋಳಾಡಿದರು. ಕಣ್ಣೀರು ಮುನ್ನೀರಾಯಿತು. ಕೃಷ್ಣಶೂನ್ಯವಾದ ದ್ವಾರಕೆಯು ಸ್ಮಶಾನವಲ್ಲವೆ?

11. ಕೃಷ್ಣನು ಕಾಡುಗಳಲ್ಲಿ ಅಲೆದಾಡಿದನು. ಅವನು ಒಬ್ಬನೆ. ಸಂಗಡ ಯಾರೂ ಇಲ್ಲ. ಅವನು ಯೋಗಚಿಂತಾಮಗ್ನನು. ಭೂಮಂಡಲಕ್ಕೆ ಯಾವ ಸಂಬಂಧವೂ ಇಲ್ಲದ ಭಾವನೆಗಳೇ ಅವನ ಹೃದಯದಲ್ಲಿವೆ. ಬಲರಾಮನನ್ನು ಕಂಡನು; ಕಂಡು ಅವಕ್ಕಾದನು. ಬಲರಾಮನು ಯೋಗದಲ್ಲಿದ್ದು ಪ್ರಾಣತ್ಯಾಗವನ್ನು ಮಾಡುತಿದ್ದನು. ತಪಸ್ಸು ಮಾಡುತ್ತ ಮಡಿವುದೆಂದರೆ ಸ್ವರ್ಗಕ್ಕೇ ಹೋಗುವುದಲ್ಲವೆ? ಅದಕ್ಕಾಗಿ ಕೃಷ್ಣನಿಗೆ ಮಹಾನಂದವು. ಅವನೂ ಅಲ್ಲೇ ಕುಳಿತನು. ಈ ಜನ್ಮದಲ್ಲಿ ಪುನಃ

ಅವನು ಅಣ್ಣನನ್ನು ಕಾಣುವನೆ? ಇದೊಂದು ಸಲ ಬಹಳ ಚೆನ್ನಾಗಿ ಅಣ್ಣನನ್ನು ದಿಟ್ಟಿಸಿದನು.

12. ಬಳಿಕ, ಒಂದು ಬಂಡೆಯ ಹಲಗೆಯ ಮೇಲೆ ಒರಗಿಕೊಂಡು ಕಾಲು ನೀಡಿ ಕುಳಿತನು. ಕೂಡಲೆ ಧ್ಯಾನಸ್ಥನಾದನು. ಅವನ ಅಂಗಾಂಗ ಗಳೆಲ್ಲವೂ ಬಲಹೀನವಾದುವು. ಯಾವ ಅವಯವಕ್ಕೂ ಬಲವಿಲ್ಲವಾಯಿತು. ಇಂದ್ರಿಯಗಳು ನೊಂಡಾದುವು. ಆತ್ಮವು ಮಾತ್ರ ಇದೆ. ಮಹಾ ಯೋಗಿಯು ಮಹಾಧ್ಯಾನದಲ್ಲಿ ಒಂದು ಕಡೆ ಬಿದ್ದಿರುವನು, ಅಷ್ಟೆ. ಅವನಲ್ಲಿ ಇನ್ನು ವೀರತ್ವವೂ ಇಲ್ಲ; ಕ್ಷತ್ರಿಯತ್ವವೂ ಇಲ್ಲ. ಈ ಕೃಷ್ಣನು ಕುರುಕ್ಷೇತ್ರದ ಕೃಷ್ಣನಲ್ಲ; ಈ ಕೃಷ್ಣನು ಪಾಂಡವರ ಗೆಳೆಯನಲ್ಲ; ಇವನು ಮಹಾಯೋಗಿ, ಮಹಾಜ್ಞಾನಿ; ಇವನು ಭೂಮಂಡಲದ ಹೊರಗೆ; ಇವನು ಭಗವಂತನ ಅವತಾರನು; ಯೋಗಿಗಳಲ್ಲಿ ಪರಮ ಯೋಗಿ; ಈಶ್ವರನು, ಯೋಗೀಶ್ವರನು, ಪರಮೇಶ್ವರನು. ಅವನು ಇಂತಹ ಯೋಗದಲ್ಲಿ ಧ್ಯಾನಮಾಡುತಲಿರುವ ಸ್ಥಳವು ಒಂದು ಗೊಂಡಾರಣ್ಯವು. ಜರಾ ಎಂಬೊಬ್ಬ ವ್ಯಾಧನು ಅಲ್ಲಿಗೆ ಬಂದನು. ಅವನು ಜಿಂಕೆಗಳನ್ನು ಬೇಟೆಯಾಡಲು ಬಂದಿದ್ದನು. ಯೋಗಾರೂಢನಾದ ಕೃಷ್ಣನ ಪಾದಗಳು ಜಿಂಕೆಯ ಕಿವಿ ಗಳನ್ನು ಹೋಲಿದಂತೆ ದೂರದಿಂದ ಕಂಡುಬರಲು, ಅವನು ಬಾಣವನ್ನು ಎಸೆದನು. ಬಾಣವು ಕೃಷ್ಣನ ಪಾದವನ್ನು ಹೊಕ್ಕಿತು; ಅವನಲ್ಲಿ ಚೇತನವೂ ಇದ್ದಿಲ್ಲ. ವ್ಯಾಧನು ಕೃಷ್ಣಮೃಗಕ್ಕಾಗಿ ಬಂದನು; ಕೃಷ್ಣಸ್ವಾಮಿಯನ್ನು ನೋಡಿದನು. 'ಅಹ! ಏನು ಮಾಡಿದೆನು? ಕೃಷ್ಣಾ!' ಎಂದೇ ಅವನ ಕೂಗು.

13. ವ್ಯಾಧನು ದುಃಖದಿಂದ ತಲೆಗೆಟ್ಟನು. ಕೃಷ್ಣನ ಧ್ಯಾನವು ನೆಲೆಗೆಟ್ಟಿತು. ಅವನು ವ್ಯಾಧನನ್ನು ಆಶೀರ್ವದಿಸಿ, ಅವನನ್ನು ಸಮಾಧಾನ ಪಡಿಸಿ ಕಳುಹಿಕೊಟ್ಟನು. ಪುನಃ ಕೃಷ್ಣನು ಯೋಗಾರೂಢನಾದನು. ಆ ಧ್ಯಾನವು ಭಂಗಗೊಳಲಿಲ್ಲ. ಅವನಲ್ಲಿ ಚೇತನವು ಮರಳಲಿಲ್ಲ. ಈ ಮಾಯಾಮಯವಾದ ಪೃಥ್ವಿಯನ್ನು ಅವನು ಪುನಃ ನೋಡಲಿಲ್ಲ. ಪೃಥ್ವಿ ಯಲ್ಲಿ ತನಗಿದ್ದ ಹೆಸರನ್ನು ಪೃಥ್ವಿಯ ಮೇಲೆಯೆ ಇರಿಸಿ, ಮಹಾಯೋಗಿಯು ದಿವ್ಯ ಲೋಕಕ್ಕೆ ತೆರಳಿದನು. ಮಣ್ಣಿನ ದೇಹವು ಮಣ್ಣಿಗಾಯಿತು; ಮನುಷ್ಯರ ಹೆಸರು ಉಳಿಯುವುದು; ಕೀರ್ತಿ ಬಾಳುವುದು; ದೇಹವು ಎಲ್ಲಿ

ತಾನೆ ಅಳಿಯದೆ ಇದ್ದೀತು? ಕೃಷ್ಣನು ದೇಹತ್ಯಾಗವನ್ನು ಮಾಡುವಾಗ ಅವನ ವಯಸ್ಸು 98 ವರ್ಷವಾಗಿದ್ದಿತು. ವೀರತ್ವ ಶೌರ್ಯ ಎಲ್ಲವೂ ಬಿದ್ದು ಕೊಂಡಿತು; ಆದರೆ,—ಆತ್ಮವೆಲ್ಲಿದೆ?

14. ಕೃಷ್ಣನು ಲೀಲಾತ್ಯಾಗವನ್ನು ಮಾಡಿ ದಿವಂಗತನಾದನೆಂಬ ಸುದ್ದಿಯನ್ನು ಅಡಗಿಸಲಾಗುವುದೆ? ನಾಲ್ಕೂ ದಿಕ್ಕಿಗೆ ಈ ಸುದ್ದಿಯು ಪಸರಿತು. ಧಾರ್ಮಿಕರು ಹಾ-ಹಾ-ಕಾರವನ್ನು ಎತ್ತಿದರು; ಪಾಪಿಗಳು ನಕ್ಕು ನೂರ್ಮಡಿಯಾದರು. ತಂದೆ ವಸುದೇವನು ಅಸ್ಥಿರನಾದನು. ಶೋಕ ಮಾಡಿದರೆ ಅವನಿಗೇನು ಲಾಭ? ಅವನೂ ಯೋಗಾರೂಢನಾಗಿ ಪ್ರಾಣ ತ್ಯಾಗವನ್ನು ಮಾಡಿದನು. ದೇವಕಿ-ರೋಹಿಣಿ ಮೊದಲಾದವರು ವಸು ದೇವನ ದೇಹದೊಡನೆ ಸಹಗಮನ ಮಾಡಿದರು. ಪುಣ್ಯವತಿಯಾದ ಮಾತೆಯು ಸ್ವರ್ಗಕ್ಕೆ ತೆರಳಿ, ಪುತ್ರಶೋಕವನ್ನು ಮರೆತಳು. ಪುತ್ರ ಶೋಕದಷ್ಟು ಕೂರಾದ ವ್ಯಥೆಯಿಲ್ಲ.

15. ಯದುವಂಶವು ಧ್ವಂಸವಾಯಿತೆಂದು ಕೇಳಿ, ಅರ್ಜುನನು ದ್ವಾರಕೆಗೆ ಬಂದನು. ಬಹಳ ಹೊತ್ತು ಹುಡುಕಿದ ಬಳಿಕ, ಅವನು ಕೃಷ್ಣಬಲರಾಮರ ಶವಗಳನ್ನು ಕಂಡು, ಅವುಗಳಿಗೆ ಸಂಸ್ಕಾರವನ್ನು ಮಾಡಿದನು. ಆ ಶವದಹನದಲ್ಲಿಯೇ, ಭಾರತವರ್ಷದ ವೀರತ್ವವೂ ಜ್ಞಾನವೂ ಯೋಗತಪಸ್ಸೂ ಸುಟ್ಟು ಭಸ್ಮವಾದುವು. ಭಾರತವು ಘೋರ ವಾದ ಕಗ್ಗತ್ತಲೆಯಲ್ಲಿ ಅಡಗಿತು. ರುಕ್ಮಿಣಿಯು ಸಹಗಮನಗೈದಳು. ಸತ್ಯಭಾಮೆಯು ಬ್ರಹ್ಮಚಾರಿಣಿಯಾದಳು. ಕೃಷ್ಣನ ಮುಮ್ಮಗನನ್ನು ದ್ವಾರಕೆಯ ಸಿಂಹಾಸನದಲ್ಲಿ ಅರ್ಜುನನು ಕುಳ್ಳಿರಿಸಿದನು.

16. ಮತ್ತು ಅರ್ಜುನನಾದರೋ? ಕೃಷ್ಣನಿಗಾಗಿ ಶೋಕಮಾಡುತ್ತ ಅರೆಜೀವದಿಂದ ಉಳಿದನು. ಅವನ ಶಕ್ತಿಯೆಲ್ಲ ಮಾಯವಾಯಿತು. ಅವನ ಗಾಂಡೀವಧನುಸ್ಸು ತೀರ ಸಾಮಾನ್ಯವಾದ ಕೋಲಾಯಿತು. ಕೃಷ್ಣನ ಮರಣದಿಂದ ಪಾಂಡವರ ಕೈಕಾಲುಗಳು ಕತ್ತರಿಸಿದಂತಾದುವು. ಇನ್ನು ಅವರ ವೀರತ್ವವೂ ಕ್ಷತ್ರಿಯತ್ವವೂ ಎಲ್ಲಿ ತಾನೇ ಉಳಿವುವು? ಎಲ್ಲರ ಮಹಾಶಕ್ತಿಯಂತಿದ್ದ ಮಹಾಪುರುಷನು ನಡೆದನು. ಇನ್ನು ಶಕ್ತಿಹೀನ ರಾದ ಪಾಂಡವರೇನು ಮಾಡುವರು? ಅವರು ತಪೋವನಗಳಿಗೆ ತೆರಳಿದರು.

17. ಕೃಷ್ಣನು ಲೀಲಾತ್ಯಾಗವನ್ನು ಮಾಡಿದನು, ಉಜ್ವಲವಾದ ಆಕಾಶದಿಂದ ಪ್ರದೀಪ್ತನಾದ ಸೂರ್ಯನು ಕುಸಿದು ಬಿದ್ದ ಬಳಿಕ, ಜಗತ್ತನ್ನು ಅಂಧಕಾರವೇ ಮುಚ್ಚಿತು. ಇನ್ನೊಮ್ಮೆ ಅಂತಹ ಸೂರ್ಯನು ಎಂದಿಗೆ ಮೂಡುವನೋ, ಜಗತ್ತು ಆತನ ಕಿರಣಗಳಿಂದ ಎಂದಿಗೆ ಬೆಳಗುವುದೋ, ಯಾರು ತಾನೇ ಬಲ್ಲರು ? ಆ ಮಹಾಪುರುಷನ ಸ್ಮರಣೆಯನ್ನು ಮಾತ್ರ ಹೃದಯದಲ್ಲಿಟ್ಟುಕೊಂಡು, ಅಲ್ಲೇ ಅವನ ಗುಣಾತಿಶಯಗಳನ್ನು ಸ್ಮರಿಸಿ ಕೊಂಡಾಡುತಿದ್ದರೆ, ಪ್ರತಿಯೊಂದೂ ಹೃದಯದಲ್ಲಿ ಆ ಕಿರಣಗಳೇ ಕಾಣು ವುವಲ್ಲವೆ ?

18. ಮಹನೀಯರಿಗೆ ಮರಣವಿಲ್ಲ. ಅವರು ಎಂದೆಂದಿಗೂ ಇರ ತಕ್ಕವರು. ಭೂಮಿಯು ಇರುವಷ್ಟು ಕಾಲ, ಅವರು ಪಾವನಗೊಳಿಸಿದ ಭೂಮಿಯು ಅವರನ್ನು ಮರೆವುದಿಲ್ಲ. ಅದಕ್ಕಾಗಿಯೆ ಕೃಷ್ಣಭಕ್ತರು ಅವನನ್ನು ಪುನಃ ಬಾಲಕೃಷ್ಣನೆಂದೇ ಸ್ಮರಿಸಿ, ಅವನ ಗುಣಕೀರ್ತನೆಗಳನ್ನು ಹಾಡುತ್ತಿರುವರು..

[ಚೌಪದಿ]

ನಿನ್ನ ಸುಮಧುರ ವೇಣುಗಾನದೆನ್ನಯ ಹೃದಯ
ದಾನಂದ-ಜ್ಯೋತ್ಸ್ನೆಯನು ಬೆಳಗಿಸೆಲವೋ!
ಧನ್ಯವಾಗಲಿ ಜನ್ಮ! ಪುಣ್ಯ-ಪಾಪೋಭ್ಯುದಯ
ಪೂರ್ಣವೀ ಭವಭ್ರಮೆಯ ತೊಲಗಿಸೆಲವೋ || ೧ ||

ತೊಳಲಿ ಬಹುಯುಗಜನ್ಮಗಳಪಾರಸಾಗರದ
ಸುಳಿಗಳಲಿ ಸಿಲುಕುತಳುವಳಲುವೆನ್ನ!
ಒಲಿದೆತ್ತಿ ಉದ್ಧರಿಸು; ನಗುಮೊಗದೊಳಾಕರದ
ಕೊಳಲನೂದುತ ಬಾರ! ನಿತ್ಯಪ್ರಸನ್ನ! || ೨ ||

ಮುಂಬೆಳಗಿನರುಣ ಪೀತಾಂಬರವನುಡಿಸುವೆನು;
ಅಂಬರದ ಘನನೀಲ ಕವಚವಿಡುವೆ; ||
ಚುಂಬಿಸುವೆ; ತಾರಾಕದಂಬಸರ ತೊಡಿಸುವೆನು;
ಅಂಬೆಗಾಲಿಂದಿತ್ತ ಬಾ! ಬೇಡುವೆ. || ೩ ||

ಗಿರಿಗಳಟ್ಟಳಗ ವಿಷ್ಟರದ ಕುಳಿಸುತ್ತ, ಸಪ್ತ—
ಶರಧಿಗಳ ಸಲಿಲದಿಂದಭಿಷೇಕಿಸಿ, ||
ಸುರಭಿ, ಸುರತರು, ಅಮೃತಗಳ ಕಾಣಿಕೆಕಪ್ಪ
ಚರಣಕರ್ಪಿಸುವೆ! ಬಾರ್, ಆಲೋಕಿಸಿ! || ೪ ||

ಅನ್ಯಸಂಪದವೇಕೆ? ನಿತ್ಯವಿರೆ ನಿನ್ನ ಪದ—
ಧ್ಯಾನ, ದರ್ಶನ, ದಾಸ್ಯ, ವೇಣುಶ್ರವಣ; ||
ನಿನ್ನ ತೊಟ್ಟಲಿಗೆಂದು ತೂಗಿಸಿದೆ ಹೃದಯವಿದ;
ಪೂರ್ಣಲೀಲಾಭರದಿ ಮೆರೆಯೊ,—ಶ್ರೀ ಕೃಷ್ಣಾ! || ೫ ||

Printed at the Codialbail Press, Mangalore, S. K.
1931

# ಮಕ್ಕಳ ಕಥೆಗಳು

## ಆರು ಪೈ

ಅರ್ಗಣೆ ಮುದ್ದೆ

## ಒಂಭತ್ತು ಪೈ

ಗಾಳಿಯ ಕೋಳಿ, ಪುಕ್ಕದ ಕಪ್ಪು
*ಬಿಟ್ಟೀ ಬಸವಯ್ಯ
ಜೋಡು ನಕ್ಷತ್ರ
ಕೊ ಕ್ಕೊ ಕ್ಕೋ ಕೋಳಿ

## ಒಂದು ಆಣೆ

*ಅಂಗಳದುಗ್ಗು
*ಮೆಣಸಿನ ಕಾಳಪ್ಪ
ಮೂರು ಕರಡಿಗಳು
*ಸಿಗಡಿ ಯಾಕೆ ಒಣಗಲಿಲ್ಲ?
*ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
ಗೋವಿಂದಾ! ಗೋವಿಂದಾ!
ಹಕ್ಕಿಸ ಬಜಾರ ಬೇರಿ
*ಇಲಿಗಳ ಥಕ್ಕಥೈ
*ಜೇನು ಸತ್ತು ಕಾಗೆ ಬಡವಾಯಿತು
ಮಾತಾಡೋ ರಾಮಪ್ಪ
ಗೋಣಿತಟ್ಟಿನ ಪಟ್ಟೆಹುಲಿ

## ಒಂದು ಆಣೆ ಆರು ಪೈ

ಏಕ್ ರೋಜ್ ಕಾ ಖಲೀಫ್
ಬೊಕ್ಕೆ ಬಾಯಿ ಕೊಕ್ಕ ರಾಜ
*ಪಟಪಟ ಹನಿಯಪ್ಪ

## ಎರಡು ಆಣೆ

ಸಿಂದಬಾದ ನಾವಿಕ
ಅಲ್ಲಾವುದ್ದೀನನ ವಿಚಿತ್ರ ದೀಪ
ಬೊಮ್ಮನ ಹಳ್ಳಿಯ ಕಿಂದರಿ ಜೋಗಿ

## ಎರಡು ಆಣೆ ಆರು ಪೈ

*ಬಚ್ಚಿ ಸಾಕಿದ ಮಗು
*ಅಗೂಳಿ ಮಂಜಣ

# ಇತರ ಪುಸ್ತಕಗಳು

## ಒಂಭತ್ತು ಪೈ

ಮಗ್ಗಿ ಪುಸ್ತಕ

## ಎರಡು ಆಣೆ

*ಹೊಸ ಕನ್ನಡ ಪುಸ್ತಕ ೧ನೇ ಭಾಗ
,, ೨ನೇ ಭಾಗ
*ಅರಬಸ್ಥಾನ
*ಚೀನ

## ಮೂರು ಆಣೆ

ಶಶಿಕಾಂತನ ವೀಲು
ಕಾಣಿಕೆ

## ನಾಲ್ಕು ಆಣೆ

ಚಂಡಕೌಶಿಕ
ಸಮಾಜದ್ರೋಹಿ
ಬಾರಕೂರಿನ ಗತವೈಭವ
ಕೃಷ್ಣ ಸಂಧಾನ
ಪ್ರಾಥಮಿಕ ಶಾಲಾ ಪತ್ರ ೨ನೇ ಪತ್ರ
ಒಂದನೆ ಎರಡನೆ ದರ್ಜೆಯ ಕಥೆಗಳು (೧)

## ಐದು ಆಣೆ

[illegible]ರಡನೆ ದರ್ಜೆ[illegible] ಕಥೆಗಳು (೨)
[illegible]ಯ [illegible]ಸ್ತ ಕಥೆಗಳು
[illegible]
ಚಾಣಕ್ಯತಂತ್ರ
ಲಘುವಿಜ್ಞಾನ ೧

## ಆರು ಆಣೆ

ಕೋಟಿಚೆನ್ನಯ
ರಮಾ ಮಾಧವ
ಸೀತಾರಾಮ
ಯಾದವ ಕೃಷ್ಣ
ಭೀಷ್ಮನ ಕಥೆ
ಕಾವ್ಯರತ್ನಾಕರ
ಪದ್ಯಕಥಾವಳಿ I ಭಾಗ

## ಎಂಟು ಆಣೆ

ಕಲಿಯುಗದ ಭೀಷ್ಮ
ಹಿಡಿಂಬೆ
ಚಾಣಕ್ಯತಂತ್ರ ಭಾಗ ೨
ಪದ್ಯಸಂಗ್ರಹ
ಪದ್ಯಕಥಾವಳಿ II ಭಾಗ

## ಹತ್ತು ಆಣೆ

ಸ್ವಾಮಿನಿಷ್ಠೆ
ಭ್ರಾತೃಪ್ರೇಮ
ನಾಟಕ ಕಲೆ

## ಹನ್ನೆರಡು ಆಣೆ

*ಲಘುವಿಜ್ಞಾನ ಪಾಠಮಾಲಿಕೆ, ಪ್ರಥಮ ಪುಸ್ತಕ
*[illegible]ಘುವಿಜ್ಞಾನ ಪಾಠಮಾಲಿಕೆ, ಪ್ರಥಮ ಪುಸ್ತಕ
ರಾ[illegible]ಶ್ವಮೇಧ
ಸುಭದ್ರಾವಿಜಯ ನಾಟಕಂ 1—೧—೧

---

*ಇವು [illegible]